ಮಂಗಳವಾರ, ಮಾರ್ಚ್ 2, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 61 | ಪುಟ 12

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಒತ್ತಡವು ಆಧುನಿಕ ಜೀವನವಿಧಾನದ ಅಡ್ಡಪರಿಣಾಮ ಎಂದರೂ ತಪ್ಪಾಗದು. ಇದರ ಪರಿಹಾರಕ್ಕೆ ಇಲ್ಲಿದೆ ಸರಳ ದಾರಿಗಳು...



'೭ಎ'ಗೆ ಬಲಿಷ್ಠರ ಸೇರ್ಪಡೆಗೆ ವಿರೋಧ 6

ಅನುಭವ ಮಂಟಪ 'ನಾವು ಶೇ 17ರಷ್ಟಿದ್ದೇವೆ, ಶೇ 8.5 ಮೀಸಲಾತಿ ಬೇಕು'

'ತಮಿಳುನಾಡು ದೇಶಕ್ಕೆ ದಿಕ್ಕು ತೋರಲಿ' 7

ಸೆನ್ಸೆಕ್ಸ್	ನಿಫ್ಟಿ	₹/$
49,849 ▲	14,761 ▲	73.55 ▼

ಸಾಲ ಪಡೆಯಲು ಸ್ಮಾರ್ಟ್‌ಫೋನ್ ಕಡ್ಡಾಯ: ಬೀದಿ ವ್ಯಾಪಾರಸ್ಥರ ಅಳಲು

• ವೆಂಕಟೇಶ ಜಿ.ಎಚ್

ಪ್ರಜಾವಾಣಿ ವಿಶೇಷ

ಬಾಗಲಕೋಟೆ: ಪ್ರಧಾನಮಂತ್ರಿ ಆತ್ಮನಿರ್ಭರ ಯೋಜನೆಯಡಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಬೀದಿ ಬದಿಯ ವ್ಯಾಪಾರಸ್ಥರು ₹10 ಸಾವಿರ ಮೊತ್ತದ ಸಾಲ ಪಡೆಯಬೇಕಿದ್ದರೆ ಸ್ಮಾರ್ಟ್‌ಫೋನ್ ಕೊಂಡುಕೊಳ್ಳಲೇಬೇಕಾದ ಪರಿಸ್ಥಿತಿ ಬಂದಿದೆ.

ಸಾಲ ಪಡೆಯುವವರು ಕಡ್ಡಾಯವಾಗಿ ಯುಪಿಐ ಐಡಿ ಹೊಂದಿರಬೇಕು. ಆನ್‌ಲೈನ್ ಮೂಲಕವೇ ಸಾಲಕ್ಕೆ ಅರ್ಜಿ ಸಲ್ಲಿಸಬೇಕು. ಡಿಜಿಟಲ್ ಪಾವತಿ ಮೂಲಕವೇ ಸಾಲ ಮರಳಿಸಬೇಕು ಎಂಬ ನಿಯಮಗಳು ಇದಕ್ಕೆ ಕಾರಣ.

'ಇದು ನಮ್ಮನ್ನು ಸಂಕಷ್ಟಕ್ಕೆ ದೂಡಿದೆ. ಸ್ಮಾರ್ಟ್‌ಫೋನ್ ಇಲ್ಲದವರು ಸಾಲಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ' ಎಂದು ಬಾಗಲಕೋಟೆ ಜಿಲ್ಲೆ ಬೀದಿ ಬದಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಇಳಕಲ್‌ನ ರಿಯಾಜ್ ಮಕಾನದಾರ ಅಳಲು ತೋಡಿಕೊಂಡರು.

'ಡಿಜಿಟಲ್ ವಹಿವಾಟು ಉತ್ತೇಜಿಸಲು ಈ ನಿಯಮ ರೂಪಿಸಲಾಗಿದೆ ಎಂದು ಬ್ಯಾಂಕ್‌ನವರು ಹೇಳುತ್ತಾರೆ. ಬೀದಿ ಬದಿ ವ್ಯಾಪಾರಸ್ಥರಲ್ಲಿ ಬಹುತೇಕರು ಹೆಣ್ಣುಮಕ್ಕಳೇ ಇದ್ದಾರೆ. ಅವರ ಬಳಿ ಸಾಧಾರಣ ಫೋನ್ ಕೂಡಾ ಇಲ್ಲ. ಅವರಿಗೆ ಸ್ಮಾರ್ಟ್ ಫೋನ್ ಫೋನ್ ಬಳಸಲು ಬರುವುದಿಲ್ಲ. ಅಂತಹವರು ಏನು ಮಾಡಬೇಕು' ಎಂದು ಸಂಘದ ಇಳಕಲ್ ತಾಲ್ಲೂಕು ಘಟಕದ ಅಧ್ಯಕ್ಷ ಪವಾಡೆಪ್ಪ ಛಲವಾದಿ ಪ್ರಶ್ನಿಸುತ್ತಾರೆ.

> **ಸ್ಮಾರ್ಟ್‌ಫೋನ್ ಹೊಂದಬೇಕು ಎಂಬ ನಿಯಮ ಸರಿಯಲ್ಲ. ಕೂಡಲೇ ಲೀಡ್ ಬ್ಯಾಂಕ್ ನೇತೃತ್ವದಲ್ಲಿ ಬ್ಯಾಂಕರ್‌ಗಳ ಸಭೆ ಕರೆದು ಸಮಸ್ಯೆ ಪರಿಹರಿಸುವೆ**
> **ಕ್ಯಾಪ್ಟನ್ ಡಾ.ಕೆ.ರಾಜೇಂದ್ರ**, ಜಿಲ್ಲಾಧಿಕಾರಿ, ಬಾಗಲಕೋಟೆ

'ಈ ಮೊದಲು ಸಾಲ ಕೊಡಲು ಯಾವುದೇ ಭದ್ರತೆ ಅಗತ್ಯವಿಲ್ಲ ಎಂದು ಹೇಳಿದ್ದರು. ಈಗ ಕೆಲವು ಬ್ಯಾಂಕ್‌ನವರು ₹200 ಮುಖಬೆಲೆಯ ಬಾಂಡ್ ಕೇಳುತ್ತಿದ್ದಾರೆ. ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ಯಾರಾದರೂ ಒಬ್ಬರದು ಜಾಮೀನು ಬೇಕು ಎಂದು ತಿಳಿಸುತ್ತಿದ್ದಾರೆ' ಎಂದು ದೂರಿದರು.

ಜಿಲ್ಲೆಯಲ್ಲಿ 16 ಸಾವಿರ ಮಂದಿ ನೋಂದಾಯಿತ ಬೀದಿ ಬದಿ ವ್ಯಾಪಾರಿಗಳು ಇದ್ದಾರೆ. ಇಲ್ಲಿಯವರೆಗೆ 15ಕ್ಕೂ ಹೆಚ್ಚು ಸಾಲಮೇಳ ಆಯೋಜಿಸಲಾಗಿದೆ. ಆರು ಸಾವಿರಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅವರಲ್ಲಿ 2200 ಜನರಿಗಷ್ಟೇ ಸಾಲ ದೊರೆತಿದೆ. ಈಗಿರುವ ತೊಂದರೆಗಳನ್ನು ನಿವಾರಿಸುವಂತೆ ಜಿಲ್ಲಾಡಳಿತಕ್ಕೂ ಮನವಿ ಸಲ್ಲಿಸಿದ್ದೇವೆ ಎಂದು ರಿಯಾಜ್ ತಿಳಿಸಿದರು.

> **ಸಾಲ ಪಡೆದವರು ಡಿಜಿಟಲ್ ವಹಿವಾಟು ನಡೆಸಿದಲ್ಲಿ ಮಾಸಿಕ ₹100 ಕ್ಯಾಶ್‌ಬ್ಯಾಕ್ ಸೌಲಭ್ಯ ಸಿಗಲಿದೆ. ಆದರೂ ಸ್ಮಾರ್ಟ್‌ಫೋನ್ ಕಡ್ಡಾಯ ಮಾಡಿಲ್ಲ. ಬ್ಯಾಂಕ್‌ನವರು ಹಾಗೆ ಹೇಳಿದಲ್ಲಿ ಫಲಾನುಭವಿಗಳು ನನ್ನನ್ನು ಸಂಪರ್ಕಿಸಲಿ**
> **ಗೋಪಾಲ ರೆಡ್ಡಿ**, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ

ಏನಿದು ಸಾಲ ಸೌಲಭ್ಯ

ಪ್ರಧಾನಮಂತ್ರಿ ಆತ್ಮನಿರ್ಭರ ಯೋಜನೆಯಡಿ ಬೀದಿ ಬದಿಯ ವ್ಯಾಪಾರಿಗಳಿಗೆ ಯಾವುದೇ ಭದ್ರತೆ ಪಡೆಯದೇ ವಾರ್ಷಿಕ ಶೇ 7ರ ಬಡ್ಡಿ ದರದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ನೀಡಲಾಗುತ್ತಿದೆ. ಆಯಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನೊಂದಾಯಿತ ವ್ಯಾಪಾರಸ್ಥರಿಗೆ ಈ ಸವಲತ್ತು ಸಿಗಲಿದೆ.

ವ್ಯಾಪಾರಿಗಳು ಬ್ಯಾಂಕ್‌ಗಳಿಗೆ ಅಲೆದಾಡುವುದನ್ನು ತಪ್ಪಿಸಲು, ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಆಯಾ ಸ್ಥಳೀಯ ಸಂಸ್ಥೆಗಳೇ ರಾಷ್ಟ್ರೀಯ ಬ್ಯಾಂಕ್ ಪ್ರತಿನಿಧಿಗಳು ಹಾಗೂ ವ್ಯಾಪಾರಸ್ಥರನ್ನು ಸೇರಿಸಿ ಕಳೆದ ಎರಡು ತಿಂಗಳಿನಿಂದ ಸಾಲ ಮೇಳವನ್ನು ಆಯೋಜಿಸುತ್ತಿವೆ.

ಬಡವರ ಬಂಧು: ಯೋಜನೆ ಸ್ಥಗಿತ?

ಹಿಂದಿನ ಸರ್ಕಾರ 'ಬಡವರ ಬಂಧು' ಹೆಸರಿನಡಿ ಸಾಲಯೋಜನೆ ಆರಂಭಿಸಿದ್ದು, ಸಹಕಾರ ಬ್ಯಾಂಕ್‌ಗಳಿಂದ ₹10 ಸಾವಿರ ಬಡ್ಡಿರಹಿತ ಸಾಲ ನೀಡಲಾಗುತ್ತಿತ್ತು. ಪಿಗ್ಮಿ ರೀತಿ ದಿನಕ್ಕೆ ₹50 ಕಟ್ಟಿಸಾಲ ತೀರಿಸಬೇಕಿತ್ತು. ಈಗ ನಿಲ್ಲಿಸಲಾಗಿದೆ. ಕೇಳಿದರೆ, ಮೇಲಿನಿಂದ ಆದೇಶವಿದೆ ಎನ್ನುತ್ತಾರೆ ಎಂದು ರಿಯಾಜ್ ಮಕಾನದಾರ ತಿಳಿಸಿದರು.

ಭಾರತದ ವಿವಿಧ ಸಂಸ್ಥೆಗಳ ಕಂಪ್ಯೂಟರ್‌ಗಳಿಗೆ ಕುತಂತ್ರಾಂಶ: ಅಮೆರಿಕ ಸಂಸ್ಥೆಯ ವರದಿ

ವಿದ್ಯುತ್ ಜಾಲಕ್ಕೆ ಚೀನಾ ಕನ್ನ

ವಾಷಿಂಗ್ಟನ್ (ಪಿಟಿಐ): ಗಡಿ ಬಿಕ್ಕಟ್ಟು ತೀವ್ರಗೊಂಡಿದ್ದ ಸಂದರ್ಭದಲ್ಲಿ ಚೀನಾವು ಭಾರತದ ವಿದ್ಯುತ್ ಗ್ರಿಡ್‌ಗಳನ್ನು ಹಾಳುಗೆಡವುವ ಸಂಚು ರೂಪಿಸಿತ್ತು ಎಂದು ಅಮೆರಿಕದ ರೆಕಾರ್ಡೆಡ್ ಫ್ಯೂಚರ್ ಎಂಬ ಕಂಪೆನಿಯ ಅಧ್ಯಯನ ವರದಿಯು ಹೇಳಿದೆ.

ಚೀನಾ ಸರ್ಕಾರ ಪ್ರಾಯೋಜಿತ ರೆಡ್‌ಇಕೊ ಎಂಬ ಹ್ಯಾಕರ್‌ಗಳ ಗುಂಪು, ಅತ್ಯಂತ ನಿರ್ಣಾಯಕವಾದ ವಿದ್ಯುತ್ ಗ್ರಿಡ್‌ನ ಕಂಪ್ಯೂಟರ್ ವ್ಯವಸ್ಥೆಗೆ ಕುತಂತ್ರಾಂಶಗಳನ್ನು ನುಗ್ಗಿಸಿತ್ತು. ಕಂಪ್ಯೂಟರ್ ಜಾಲದ ಚಟುವಟಿಕೆಗಳ ಸ್ವಯಂಚಾಲಿತ ವಿಶ್ಲೇಷಣೆ ಮತ್ತು ಪರಿಣತರ ವಿಶ್ಲೇಷಣೆಯ ಮೂಲಕ ಈ ಅಂಶವನ್ನು ಗುರುತಿಸಲಾಗಿದೆ ಎಂದು ರೆಕಾರ್ಡೆಡ್ ಫ್ಯೂಚರ್ ಹೇಳಿದೆ.

ಕಳೆದ ಅಕ್ಟೋಬರ್ 12ರಂದು ಮುಂಬೈಯಲ್ಲಿ ಗ್ರಿಡ್ ವೈಫಲ್ಯವಾಗಿ ಹಲವು ತಾಸು ವಿದ್ಯುತ್ ಇರಲಿಲ್ಲ. ಇದರಿಂದಾಗಿ ರೈಲು ಸಂಚಾರ ಸ್ಥಗಿತಗೊಂಡಿತ್ತು, ಕೋವಿಡ್‌ನಿಂದಾಗಿ ಮನೆಯಿಂದಲೇ ಕೆಲಸ ಮಾಡುವ ಉದ್ಯೋಗಿಗಳಿಗೆ ತೊಂದರೆ ಆಗಿತ್ತು ಮತ್ತು ಆರ್ಥಿಕ ಚಟುವಟಿಕೆಗಳಿಗೆ ಹೊಡೆತ ಬಿದ್ದಿತ್ತು. ಗ್ರಿಡ್ ಸರಿಪಡಿಸಲು ತಂತ್ರಜ್ಞರಿಗೆ ಎರಡು ತಾಸು ಸಮಯ ಬೇಕಾಗಿತ್ತು.

7ನೇ ಪುಟ ನೋಡಿ

ದುರುದ್ದೇಶದ ಆಪಾದನೆ: ಚೀನಾ

ಈ ಆರೋಪವನ್ನು ಚೀನಾ ಅಲ್ಲಗಳೆದಿದೆ. 'ಯಾವುದೇ ಆಧಾರ ಇಲ್ಲದ ಆರೋಪ ಇದು. ಬೇಜವಾಬ್ದಾರಿಯಿಂದ ಕೂಡಿದ ದುರುದ್ದೇಶದ ಆಪಾದನೆ' ಎಂದು ಚಿನಾದ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್‌ಬಿನ್ ಹೇಳಿದ್ದಾರೆ. 'ಚೀನಾವು ಸೈಬರ್ ಸುರಕ್ಷತೆಯ ಪ್ರಬಲ ಪ್ರತಿಪಾದಕ. ಯಾವುದೇ ರೀತಿಯ ಸೈಬರ್ ದಾಳಿಯನ್ನು ನಾವು ವಿರೋಧಿಸುತ್ತೇವೆ. ಸೈಬರ್ ದಾಳಿಯ ಮೂಲವನ್ನು ಪತ್ತೆ ಮಾಡುವುದು ಕಷ್ಟ. ಯಾವುದೇ ಆಧಾರ ಇಲ್ಲದೆ ಊಹೆ ಮಾಡಿ ಒಂದು ದೇಶದ ಮೇಲೆ ಆರೋಪ ಹೊರಿಸಬಾರದು. ಇಂತಹ ವರ್ತನೆಯನ್ನು ಚೀನಾ ಖಂಡಿಸುತ್ತದೆ' ಎಂದು ಅವರು ಹೇಳಿದ್ದಾರೆ.

ಏನೇನು ಗುರಿ?

- ವಿದ್ಯುತ್ ಕ್ಷೇತ್ರದ ಹತ್ತು ಸಂಘಟನೆಗಳು. ವಿದ್ಯುತ್ ಪೂರೈಕೆ ಮತ್ತು ಬೇಡಿಕೆಯನ್ನು ಸಮತೋಲನಗೊಳಿಸುವ ಗ್ರಿಡ್ ಅನ್ನು ನಿಭಾಯಿಸುವ ಪ್ರಾದೇಶಿಕವಾದ ನಾಲ್ಕು ಲೋಡ್ ಹಂಚಿಕೆ ಕೇಂದ್ರಗಳು ಇದರಲ್ಲಿ ಸೇರಿವೆ. ದೇಶದಲ್ಲಿ ಒಟ್ಟು ಐದು ಪ್ರಾದೇಶಿಕ ಲೋಡ್ ಹಂಚಿಕೆ ಕೇಂದ್ರಗಳಿವೆ
- ಎರಡು ಬಂದರುಗಳು
- ಚೀನಾ ಸರ್ಕಾರ ಪ್ರಾಯೋಜಿತ ಹ್ಯಾಕರ್ ಗುಂಪುಗಳು ಭಾರತದ ಖಾಸಗಿ ವಲಯದ ಸಂಸ್ಥೆಗಳನ್ನೂ ಗುರಿ ಮಾಡಿಕೊಂಡಿವೆ

'ಸೈಬರ್ ದಾಳಿಯಿಂದ ಏನೂ ಆಗಿಲ್ಲ'

ಈ ಕುತಂತ್ರಾಂಶ ದಾಳಿಯಿಂದಾಗಿ ಯಾವುದೇ ಸಮಸ್ಯೆ ಆಗಿಲ್ಲ. ಯಾವುದೇ ದತ್ತಾಂಶ ಕಳವಾಗಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ.

ವಿದ್ಯುತ್ ಗ್ರಿಡ್ ಮೇಲೆ ಸೈಬರ್ ದಾಳಿಯ ಯತ್ನ ನಡೆದಿದ್ದು ಹೌದು. ಶ್ಯಾಡೊ ಪ್ಯಾಡ್ ಎಂಬ ಕುತಂತ್ರಾಂಶದಿಂದ ಕಂಪ್ಯೂಟರ್ ಜಾಲಕ್ಕೆ ಬೆದರಿಕೆ ಇದೆ ಎಂಬ ಸಂದೇಶ ಸಿಇಆರ್‌ಟಿ–ಇನ್‌ನಿಂದ (ಭಾರತದ ಕಂಪ್ಯೂಟರ್ ತುರ್ತು ಸ್ಪಂದನಾ ತಂಡ) 2020ರ ನವೆಂಬರ್ 19ರಂದು ಬಂದಿತ್ತು. ಈ ಬೆದರಿಕೆಯನ್ನು ನಿವಾರಿಸಲು ಬೇಕಾದ ಕ್ರಮವನ್ನು ಅಂದೇ ಕೈಗೊಳ್ಳಲಾಗಿದೆ ಎಂದು ವಿದ್ಯುತ್ ಸಚಿವಾಲಯ ತಿಳಿಸಿದೆ.

ಕಳೆದ ಅಕ್ಟೋಬರ್ 2ರಂದು ಮುಂಬೈಯಲ್ಲಿ ಆಗಿದ್ದ ಗ್ರಿಡ್ ವೈಫಲ್ಯದ ಬಗ್ಗೆ ಸಚಿವಾಲಯ ಏನನ್ನೂ ಹೇಳಿಲ್ಲ

ಒಳನುಸುಳಿದ ಪ್ಲಗ್‌ಎಕ್ಸ್?

2020ರ ಮೇ ತಿಂಗಳ ಹೊತ್ತಿಗೆ ಭಾರತದ ಸಂಸ್ಥೆಗಳ ಕಂಪ್ಯೂಟರ್ ಜಾಲದಲ್ಲಿ ಪ್ಲಗ್ ಎಕ್ಸ್ ಎಂಬ ಕುತಂತ್ರಾಂಶದ ಚಟುವಟಿಕೆ ಗಮನಾರ್ಹ ಮಟ್ಟದಲ್ಲಿ ಏರಿಕೆಯಾಗಿತ್ತು. ಭಾರತದ ಸರ್ಕಾರಿ ಸಂಸ್ಥೆಗಳು, ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ರಕ್ಷಣಾ ಸಂಸ್ಥೆಗಳಲ್ಲಿಯೂ ಪ್ಲಗ್ ಎಕ್ಸ್ ಕಾಣಿಸಿಕೊಂಡಿದೆ. ಚೀನಾದ ಸೈಬರ್ ಗೂಢಚರ್ಯೆಯಲ್ಲಿ ಪ್ಲಗ್ ಎಕ್ಸ್ ಪ್ರಮುಖ ಪಾತ್ರ ವಹಿಸುತ್ತಿದೆ. ಹಲವು ವರ್ಷಗಳಿಂದ ಚೀನಾವು ಈ ಕುತಂತ್ರಾಂಶವನ್ನು ಬಳಸುತ್ತಿದೆ ಎಂದು ವರದಿಯು ವಿವರಿಸಿದೆ.



ಪ್ರತಿಭಟನೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಸಂಘದ ವತಿಯಿಂದ ಬೆಂಗಳೂರಿನಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು –ಪ್ರಜಾವಾಣಿ ಚಿತ್ರ

ಎಲ್‌ಪಿಜಿ ಸಿಲಿಂಡರ್ ಬೆಲೆ ₹ 25 ಏರಿಕೆ



ನವದೆಹಲಿ (ಪಿಟಿಐ): ಎಲ್‌ಪಿಜಿ ಸಿಲಿಂಡರ್ ದರ ಸೋಮವಾರ ₹ 25 ಏರಿಕೆಯಾಗಿದೆ.

14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ದರ ಬೆಂಗಳೂರಿನಲ್ಲಿ ಈಗ ₹ 822ಕ್ಕೆ ತಲುಪಿದೆ. ದೆಹಲಿಯಲ್ಲಿ ₹ 819 ಆಗಿದೆ.

ಉಜ್ವಲಾ ಯೋಜನೆಯ ಫಲಾನುಭವಿಗಳನ್ನೂ ಒಳಗೊಂಡು ಎಲ್ಲರಿಗೂ ಈ ಬೆಲೆ ಏರಿಕೆ ಅನ್ವಯವಾಗಿದೆ.

ಫೆಬ್ರುವರಿಯಲ್ಲಿ ಮೂರು ಬಾರಿ ದರ ಏರಿಕೆ ಮಾಡಿದ್ದರಿಂದ ಎಲ್‌ಪಿಜಿ ಬೆಲೆ ಒಟ್ಟು ₹ 100 ಏರಿಕೆ ಆಗಿತ್ತು. ಇದೀಗ ಸೋಮವಾರದ ದರ ಹೆಚ್ಚಳವನ್ನೂ ಸೇರಿಸಿದರೆ 14.2 ಕೆ.ಜಿ ತೂಕದ ಒಂದು ಸಿಲಿಂಡರ್ ಬೆಲೆ ₹ 125 ಏರಿಕೆಯಾಗಿದೆ.

4 ಪುಟ ನೋಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..


ಪುಟ-5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಸುದ್ದಿ ಸ್ವಾರಸ್ಯ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಒಳ ಪುಟಗಳು



ಚಿನಕುರಳಿ
ಪ್ರಕಾಶ್ ಶೆಟ್ಟಿ



ಲಸಿಕೆ: ಎರಡನೇ ಹಂತಕ್ಕೆ ಚಾಲನೆ

ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಗಣ್ಯರಿಗೆ ಲಸಿಕೆ

ನವದೆಹಲಿ (ಪಿಟಿಐ): ಕೋವಿಡ್‌-19 ತಡೆಯ ಜಗತ್ತಿನ ಅತಿ ದೊಡ್ಡ ಲಸಿಕಾ ಕಾರ್ಯಕ್ರಮಕ್ಕೆ ಸೋಮವಾರ ದೇಶದಾದ್ಯಂತ ಚಾಲನೆ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ, ಉಪ ರಾಷ್ಟ್ರಪತಿ ವೆಂಕಯ್ಯನಾಯ್ಡು, ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮುಂತಾದ ಅನೇಕ ಗಣ್ಯರು ಕೋವಿಡ್‌–19 ಲಸಿಕೆಯ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ.

60 ವರ್ಷ ವಯಸ್ಸಿಗೂ ಮೇಲ್ಪಟ್ಟವರು ಹಾಗೂ ಇತರ ಗಂಭೀರ ಕಾಯಿಲೆಗಳಿಂದ ಬಳಲುವ, 45 ವರ್ಷಕ್ಕೂ ಮೇಲ್ಪಟ್ಟವರಿಗೆ ಈ ಹಂತದಲ್ಲಿ ಲಸಿಕೆ ಹಾಕಲಾಗುತ್ತದೆ. ಸುಮಾರು 27 ಕೋಟಿ ಜನರು ಇದರ ಲಾಭ ಪಡೆಯಲಿದ್ದಾರೆ ಎಂದು ನಿರೀಕ್ಷಿಸಲಾಗಿದೆ.

ಸದ್ಯದಲ್ಲೇ 90ನೇ ವರ್ಷಕ್ಕೆ ಕಾಲಿಡಲಿರುವ ದೆಹಲಿಯ ವೃದ್ಧ ದಂಪತಿ ಹಾಗೂ ಕೋವಿಡ್‌ಗೆ ಒಳಗಾಗಿ ಚೇತರಿಸಿಕೊಂಡಿದ್ದ ನಾಲ್ವರು ಹಿರಿಯ ನಾಗರಿಕರ ಕುಟುಂಬವೊಂದು ಮೊದಲ ದಿನವೇ ಲಸಿಕೆ ಹಾಕಿಸಿಕೊಂಡು ಗಮನಸೆಳೆಯಿತು.

'ಸೋಮವಾರ ಬೆಳಿಗ್ಗೆ 6.30ರ ಸುಮಾರಿಗೆ ಆಸ್ಪತ್ರೆಗೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಭಾರತ್ ಬಯೊಟೆಕ್ ಸಂಸ್ಥೆಯವರು ದೇಶೀಯವಾಗಿ ಅಭಿವೃದ್ಧಿಪಡಿಸಿದ 'ಕೋವ್ಯಾಕ್ಸಿನ್' ಲಸಿಕೆಯನ್ನು ಪಡೆದರು' ಎಂದು ಏಮ್ಸ್ ಮುಖ್ಯಸ್ಥ ಡಾ. ರಣದೀಪ್ ಗುಲೇರಿಯಾ ತಿಳಿಸಿದ್ದಾರೆ.

'ಮೋದಿ ಅವರು ಲಸಿಕೆ ಪಡೆಯಲು ಬರಲಿದ್ದಾರೆ ಎಂದು ಭಾನುವಾರ ರಾತ್ರಿ ನಮಗೆ ತಿಳಿಸಲಾಗಿತ್ತು. ಅವರಿಗಾಗಿ ವಿಶೇಷ ಸಿದ್ಧತೆಗಳನ್ನೇನೂ ಮಾಡಿಲ್ಲ. ಆಸ್ಪತ್ರೆಗೆ ಬರುವ ಇತರ ರೋಗಿಗಳಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಅವರು ಬೆಳಿಗ್ಗೆ ಬೇಗನೆ ಬಂದು ಲಸಿಕೆ ಪಡೆದರು. ಪ್ರಧಾನಿಯೇ ಲಸಿಕೆ ಪಡೆದಿರುವುದರಿಂದ ಲಸಿಕೆ ಬಗ್ಗೆ ಜನರಲ್ಲಿ ಇರುವ ಅಂಜಿಕೆ ಕಡಿಮೆಯಾಗುವಂತಾಗಿದೆ. ಜನರು ತಾವಾಗಿಯೇ ಲಸಿಕೆ ಕೇಂದ್ರಗಳಿಗೆ ಬಂದು ದೇಶವನ್ನು ಕೋವಿಡ್ ಮುಕ್ತಗೊಳಿಸಲು ಈ ಕ್ರಮವು ನೆರವಾಗಲಿದೆ' ಎಂದು ಗುಲೇರಿಯಾ ಹೇಳಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯ ಏಮ್ಸ್‌ನಲ್ಲಿ ಸೋಮವಾರ 'ಕೋವ್ಯಾಕ್ಸಿನ್' ಲಸಿಕೆ ಹಾಕಿಸಿಕೊಂಡರು

> **ಭಾರತದಲ್ಲೇ ತಯಾರಾದ ಲಸಿಕೆ ಹಾಕಿಸುವ ಮೂಲಕ ಲಸಿಕೆ ಬಗ್ಗೆ ಇರುವ ಹಿಂಜರಿಕೆಯನ್ನು ಪ್ರಧಾನಿಯವರು ದೂರ ಮಾಡಿದ್ದಾರೆ**
> **ಭಾರತ್ ಬಯೊಟೆಕ್ ಸಂಸ್ಥೆ** ಕೋವ್ಯಾಕ್ಸಿನ್ ಲಸಿಕೆ ತಯಾರಕರು

ಲಸಿಕೆ ಪಡೆದ ನಂತರ ಆ ಕುರಿತು ಟ್ವೀಟ್ ಮಾಡಿದ ಪ್ರಧಾನಿ, 'ಏಮ್ಸ್‌ನಲ್ಲಿ ಲಸಿಕೆಯ ಮೊದಲ ಡೋಸ್ ಪಡೆದಿದ್ದೇನೆ. ಕೋವಿಡ್‌–19 ವಿರುದ್ಧದ ಜಾಗತಿಕ ಮಟ್ಟದ ಹೋರಾಟಕ್ಕೆ ಶಕ್ತಿ ತುಂಬಲು ನಮ್ಮ ವೈದ್ಯರು ಹಾಗೂ ವಿಜ್ಞಾನಿಗಳು ಹೇಗೆ ಕೆಲಸಮಾಡಿದ್ದಾರೆ ಎಂಬುದು ಗಮನಾರ್ಹವಾದುದು. ಅರ್ಹರೆಲ್ಲರೂ ಬಂದು ಲಸಿಕೆಯನ್ನು ಹಾಕಿಸಿಕೊಂಡು ಭಾರತವನ್ನು ಕೋವಿಡ್‌–19 ಮುಕ್ತಗೊಳಿಸಬೇಕು ಎಂದು ಮನವಿ ಮಾಡುತ್ತೇನೆ' ಎಂದಿದ್ದಾರೆ.

10 ಲಕ್ಷ ನೋಂದಣಿ: ಸೋಮವಾರ ಮಧ್ಯಾಹ್ನ 1 ಗಂಟೆಯ ವೇಳೆಗಾಗಲೇ 10 ಲಕ್ಷಕ್ಕೂ ಹೆಚ್ಚು ಮಂದಿ ಕೋವಿಡ್‌–19 ಲಸಿಕೆಗಾಗಿ ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಇನ್ನಷ್ಟು ಸುದ್ದಿಗಳು 3

ಜೂನ್ 21ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಧಾರವಾಡ: 'ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಜೂನ್ 21ರಿಂದ ಜುಲೈ 5ರವರೆಗೆ ನಡೆಯಲಿವೆ' ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಸೋಮವಾರ ಇಲ್ಲಿ ಪ್ರಕಟಿಸಿದರು.

'ಈ ಮೊದಲು ತಾತ್ಕಾಲಿಕ ವೇಳಾಪಟ್ಟಿ ಪ್ರಕಟಿಸಲಾಗಿತ್ತು. ಆಕ್ಷೇಪಣೆ ಹಾಗೂ ಸಲಹೆಗಳನ್ನು ಪರಿಗಣಿಸಿ, ಪ್ರಮುಖ ವಿಷಯಗಳ ಪರೀಕ್ಷೆಗೆ ಕನಿಷ್ಠ ಒಂದು ದಿನ ವಿರಾಮ ಸಿಗುವಂತೆ ವೇಳಾಪಟ್ಟಿ ಸಿದ್ಧಪಡಿಸಲಾಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜೂನ್ 21ರಂದು ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಸಂಸ್ಕೃತ, ಜೂನ್ 24-ಗಣಿತ, ಜೂನ್ 28-ವಿಜ್ಞಾನ, ಜೂನ್ 30-ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೆಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಜುಲೈ2-ದ್ವಿತೀಯ ಭಾಷೆ ಇಂಗ್ಲಿಷ್/ ಕನ್ನಡ, ಜುಲೈ 5- ಸಮಾಜ ವಿಜ್ಞಾನ ಪರೀಕ್ಷೆಗಳು ನಡೆಯಲಿವೆ ಎಂದು ತಿಳಿಸಿದರು.

ಐಸಿಎಸ್‌ಇ ಪರೀಕ್ಷೆ ದಿನಾಂಕ ಪ್ರಕಟ

ನವದೆಹಲಿ (ಪಿಟಿಐ): ಇಂಡಿಯನ್ ಸರ್ಟಿಫಿಕೆಟ್ ಆಫ್ ಸೆಕಂಡರಿ ಎಜುಕೇಶನ್ (ಐಸಿಎಸ್‌ಇ) 10 ಮತ್ತು 12ನೇ ತರಗತಿಗಳ ಪರೀಕ್ಷಾ ದಿನಾಂಕ ಪ್ರಕಟಿಸಿದ್ದು, 12ನೇ ತರಗತಿ ಪರೀಕ್ಷೆಗಳು ಏಪ್ರಿಲ್ 8ರಿಂದ ಹಾಗೂ 10ನೇ ತರಗತಿ ಪರೀಕ್ಷೆಗಳು ಮೇ 5ರಿಂದ ಆರಂಭವಾಗಲಿವೆ.

'10ನೇ ತರಗತಿ ಬೋರ್ಡ್ ಪರೀಕ್ಷೆಗಳು ಮೇ 5ರಿಂದ ಜೂನ್ 7ರವರೆಗೆ ನಡೆಯಲಿವೆ. ಇಂಡಿಯನ್ ಸ್ಕೂಲ್ ಸರ್ಟಿಫಿಕೆಟ್ ಎಕ್ಸಾಮಿನೇಷನ್ (ಐಎಸ್‌ಸಿ) 12ನೇ ತರಗತಿಗೆ ಏಪ್ರಿಲ್ 8ರಿಂದ ಜೂನ್ 16ರವರೆಗೆ ಪರೀಕ್ಷೆ ನಡೆಸಲಿದೆ' ಎಂದು ಸಿಐಸಿಎಸ್‌ಇ ಮುಖ್ಯ ಕಾರ್ಯನಿರ್ವಾಹಕ ಮತ್ತು ಕಾರ್ಯದರ್ಶಿ ಗೆರ್ರಿ ಅರಾಥೂನ್ ತಿಳಿಸಿದ್ದಾರೆ. ಏಪ್ರಿಲ್ 8ರಂದು 12ನೇ ತರಗತಿಗೆ ಕಂಪ್ಯೂಟರ್ ಸೈನ್ಸ್ ಪರೀಕ್ಷೆ (ಪ್ರಾಯೋಗಿಕ) ನಡೆಯಲಿದ್ದು, ಪರೀಕ್ಷಾ ಅವಧಿ 3 ಗಂಟೆಯ ಬದಲಿಗೆ 90 ನಿಮಿಷಗಳಿಗೆ ನಿಗದಿಪಡಿಸಲಾಗಿದೆ. ಉಳಿದ ವಿಷಯಗಳ ಪರೀಕ್ಷೆಗಳು ಏ.9ರಿಂದ ನಡೆಯಲಿವೆ.




‘ಬಿಗ್‌ಬಾಸ್’ ಪ್ರವೇಶಕ್ಕೆ ಎಚ್. ವಿಶ್ವನಾಥ್ ಸಿದ್ಧ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲರ್ಸ್ ಕನ್ನಡ ವಾಹಿನಿ ನಡೆಸುವ ‘ಬಿಗ್ ಬಾಸ್’ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಯಸಿರುವ ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಅವರು, ‘ವಿಶೇಷ ಆಹ್ವಾನ ನೀಡಿದರೆ ಮೂರು–ನಾಲ್ಕು ದಿನಗಳ ಮಟ್ಟಿಗೆ ಆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇನೆ’ ಎಂದು ಹೇಳಿದ್ದಾರೆ.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಬಿಗ್ ಬಾಸ್ ಕಾರ್ಯಕ್ರಮಕ್ಕೆ ಹೋದರೆ ರಾಜಕಾರಣದಲ್ಲಿ ಕಿಡಿ ಹೊತ್ತುವಂತೆ ಮಾಡುತ್ತೇನೆ. ಆ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತನನ್ನಾಗಿ ಕರೆದರೆ ಖಂಡಿತಾ ಹೋಗುತ್ತೇನೆ’ ಎಂದು ಹೇಳಿದರು.

‘ಕಾರ್ಯಕ್ರಮದ ನಿರೂಪಕರು 6ನೇ ಸೀಸನ್‌ಗೆ ಆಹ್ವಾನಿಸಿದ್ದರು. ಆಗ ನನಗೆ ಆರೋಗ್ಯ ಸರಿ ಇಲ್ಲದ ಕಾರಣ ಭಾಗವಹಿಸಲು ಆಗಿರಲಿಲ್ಲ. ಈಗ ಸಿದ್ಧನಿದ್ದೇನೆ. ರಾಜಕಾರಣ ಬಗ್ಗೆ ಶಿಕ್ಷಣ ನೀಡುತ್ತೇನೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಆಪ್ತರು ಸಲಹೆ ನೀಡಿದ್ದಾರೆ. ವೇದಿಕೆಯನ್ನು ಕ್ರಿಯಾಶೀಲವಾಗಿ ಬಳಸಿಕೊಳ್ಳುವ ಅಪೇಕ್ಷೆ ಇದೆ’ ಎಂದರು.



ಎಚ್.ವಿಶ್ವನಾಥ್

‘ಚುನಾವಣೆಗಳು ಹತ್ತಿರ ಬರುತ್ತಿರುವುದರಿಂದ ಅದರಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಹೆಚ್ಚು ದಿನಗಳನ್ನು ‘ಬಿಗ್ ಬಾಸ್’ನಲ್ಲಿ ಕಳೆಯಲು ಸಾಧ್ಯವಿಲ್ಲ’ ಎಂದೂ ಹೇಳಿದರು.

‘ಧರ್ಮೇಗೌಡ ಅವರ ನಿಧನದಿಂದ ಖಾಲಿ ಇರುವ ಸ್ಥಾನಕ್ಕೆ ನನಗೆ ಅವಕಾಶ ನೀಡುವಂತೆ ಕೋರಿಕೆ ಸಲ್ಲಿಸಿದ್ದೇನೆ. ಈ ವಿಷಯವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಗಮನಕ್ಕೂ ತಂದಿದ್ದೇನೆ. ಸುಪ್ರೀಂಕೋರ್ಟ್‌ನ ಶಾಪದಿಂದ ವಿಮೋಚನೆ ಆಗಲು ಇದೊಂದು ಅವಕಾಶ ನೀಡಬೇಕು. ಚುನಾವಣೆ ಮೂಲಕ ಆಯ್ಕೆಗೆ ಇದೊಂದು ಅವಕಾಶವಿದೆ’ ಎಂದು ತಿಳಿಸಿದರು.

‘ಸರ್ಕಾರದಲ್ಲಿ ಯಾವುದೇ ಜವಾಬ್ದಾರಿ ನೀಡಿದರೂ ಸಮರ್ಥವಾಗಿ ನಿಭಾಯಿಸಬಲ್ಲೆ. ನನಗೆ ಕನಿಷ್ಠ ಮೂರೂವರೆ ವರ್ಷ ಅವಕಾಶ ನೀಡಬೇಕು. ಆಗಿರುವ ವ್ಯತ್ಯಾಸವನ್ನು ಸರಿಪಡಿಸಬೇಕು’ ಎಂದು ಬಿ.ಎಸ್. ಯಡಿಯೂರಪ್ಪ ಅವರಿಗೆ ವಿಶ್ವನಾಥ್ ಮನವಿ ಮಾಡಿದರು.

ವೈಯಕ್ತಿಕಗೊಳಿಸಿದ ನೇತ್ರ ಚಿಕಿತ್ಸೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಹಳಷ್ಟು ರೋಗಿಗಳು ಸಾಂಪ್ರದಾಯಿಕ ಚಿಕಿತ್ಸೆಗೆ ಸ್ಪಂದಿಸುವುದಿಲ್ಲ. ಹೀಗಾಗಿ ನಮ್ಮ ಸಂಸ್ಥೆಯ ಎಲ್ಲ ಆಸ್ಪತ್ರೆಗಳಲ್ಲಿ ವೈಯಕ್ತಿಕಗೊಳಿಸಿದ ನೇತ್ರ ಚಿಕಿತ್ಸೆ ವ್ಯವಸ್ಥೆ ಅಳವಡಿಸಲಾಗಿದೆ. ಭವಿಷ್ಯದ ದೃಷ್ಟಿಯಿಂದ ಇದೊಂದು ಮಹತ್ತರವಾದ ಹೆಜ್ಜೆ’ ಎಂದು ನಾರಾಯಣ ನೇತ್ರಾಲಯದ ಮುಖ್ಯಸ್ಥ ಡಾ.ಕೆ.ಭುಜಂಗ ಶೆಟ್ಟಿ ಹೇಳಿದರು.

ಇಂದಿರಾನಗರದ ನಾರಾಯಣ ನೇತ್ರಾಲಯದಲ್ಲಿ ವೈಯಕ್ತಿಕಗೊಳಿಸಿದ ಕೃತಕ ಬುದ್ಧಿಮತ್ತೆ ನೇತ್ರ ಚಿಕಿತ್ಸೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಭವಿಷ್ಯದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ಹೆಚ್ಚಿನ ಮನ್ನಣೆ ಸಿಗಲಿದೆ. ರೋಗಿಯ ನಿಜವಾದ ಸಮಸ್ಯೆ ಗುರುತಿಸಿ ಸೂಕ್ತ ಚಿಕಿತ್ಸೆ ನೀಡಲು ಈ ತಂತ್ರಜ್ಞಾನ ಸಹಕಾರಿಯಾಗಲಿದೆ. ರೋಗಿಗಳು ತಾವಿದ್ದಲ್ಲಿಂದಲೇ ಕಣ್ಣುಗಳನ್ನು ಪರೀಕ್ಷಿಸಿಕೊಂಡು, ವೈದ್ಯರಿಂದ ಅಗತ್ಯ ಸಲಹೆ ಪಡೆಯಬಹುದು. ಇದರಿಂದ ಸಾಕಷ್ಟು ಹಣ ಉಳಿತಾಯವಾಗಲಿದೆ’ ಎಂದರು.

‘ವೈಯಕ್ತಿಕಗೊಳಿಸಿದ ನೇತ್ರ ಚಿಕಿತ್ಸೆಯನ್ನು ನಾರಾಯಣ ನೇತ್ರಾಲಯದ ಎಲ್ಲ ಘಟಕಗಳಿಗೂ ವಿಸ್ತರಿಸಲಾಗುತ್ತದೆ. ಇದಕ್ಕಾಗಿ ಅತ್ಯಾಧುನಿಕ ಪ್ರಯೋಗಾಲಯಗಳನ್ನೂ ಸ್ಥಾಪಿಸಿದ್ದೇವೆ’ ಎಂದರು.

ಹೊಸಕೆರೆಹಳ್ಳಿ: ಒಕ್ಕಲೆಬ್ಬಿಸಿದ ಪ್ರಕರಣ– ಅನರ್ಹರಿಗೂ ನಿವೇಶನ

ಕೆಎಎಸ್ ಅಧಿಕಾರಿಗಳು ಸೇರಿ 53 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೆರೆಹಳ್ಳಿ ಕೊಳೆಗೇರಿಯಲ್ಲಿ ಒಕ್ಕಲೆಬ್ಬಿಸಿದ ಕುಟುಂಬಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿಡಿಎ) ನಿವೇಶನ ಹಂಚಿಕೆ ಮಾಡುವಾಗ ಅಕ್ರಮ ನಡೆಸಿದ ಆರೋಪದ ಮೇರೆಗೆ ಪ್ರಾಧಿಕಾರದಲ್ಲಿ ಈ ಹಿಂದೆ ಉಪಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿದ್ದ ಮೂವರು ಕೆಎಎಸ್ ಅಧಿಕಾರಿಗಳು, 10 ಸಿಬ್ಬಂದಿ ಸೇರಿದಂತೆ ಒಟ್ಟು 53 ಮಂದಿ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಎಫ್‌ಐಆರ್ ದಾಖಲಾದ ಅಧಿಕಾರಿಗಳಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ಅನಿಲ್ ಕುಮಾರ್, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಭಾಸ್ಕರ್, ಅಕ್ರಮ ಆಸ್ತಿ ಸಂಪಾದನೆ ಆರೋಪದಲ್ಲಿ ಇತ್ತೀಚೆಗೆ ಅಮಾನತುಗೊಂಡಿದ್ದ ಜೈವಿಕ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಆಡಳಿತಾಧಿಕಾರಿ ಬಿ.ಸುಧಾ ಸೇರಿದ್ದಾರೆ. ಸುಧಾ ಬಿಡಿಎ ಉಪಕಾರ್ಯದರ್ಶಿ–1, ಅನಿಲ್ ಕುಮಾರ್ ಹಾಗೂ ಭಾಸ್ಕರ್ ಉಪಕಾರ್ಯದರ್ಶಿ–3 ಆಗಿ ಕರ್ತವ್ಯ ನಿರ್ವಹಿಸಿದ್ದ ಅವಧಿಯಲ್ಲಿ ನಿವೇಶನಗಳ ಅಕ್ರಮ ಹಂಚಿಕೆ ನಡೆದಿದೆ ಎಂಬ ಆರೋಪವಿದೆ.

ಉಪಕಾರ್ಯದರ್ಶಿ – 3 ಕಚೇರಿಯ ಮೇಲ್ವಿಚಾರಕಿ ವಿ.ಮಹದೇವಮ್ಮ (ಪ್ರಸ್ತುತ ದಾಖಲೆ ವಿಭಾಗದಲ್ಲಿದ್ದಾರೆ), ಇದೇ ಕಚೇರಿಯಲ್ಲಿ ಮೇಲ್ವಿಚಾರಕಿಯರಾಗಿದ್ದ ಕಮಲಮ್ಮ (ಇತ್ತೀಚೆಗೆ ಖಾಸಗಿ ಸಂಸ್ಥೆ ಕಚೇರಿಯಲ್ಲಿ ಬಿಡಿಎ ಕುರಿತ ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಿದ್ದ ಪ್ರಕರಣದಲ್ಲಿ ಅಮಾನತಾಗಿದ್ದಾರೆ), ಇದೇ ಕಚೇರಿ ಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿದ್ದ ಮುನಿಬಚ್ಚೇಗೌಡ (ನಿವೃತ್ತರಾಗಿದ್ದಾರೆ), ಇದೇ ಕಚೇರಿಯಲ್ಲಿ ಸಿಬ್ಬಂದಿಯಾಗಿದ್ದ ವೆಂಕಟರಮಣಪ್ಪ (ಕಂದಾಯ ಪಶ್ಚಿಮ ವಿಭಾಗದಲ್ಲಿದ್ದ ಇವರು ಕಾಡುಗೋಡಿಯಲ್ಲಿ ನಕಲಿ ದಾಖಲೆ ಸೃಷ್ಟಿಸಿ ಅಕ್ರಮವಾಗಿ ನಿವೇಶನ ಹಂಚಿಕೆ ಮಾಡಿದ ಪ್ರಕರಣದಲ್ಲಿ ಅಮಾನತಿನಲ್ಲಿದ್ದಾರೆ) ಉಪಕಾರ್ಯದರ್ಶಿ–1 ಕಚೇರಿಯ ಮೇಲ್ವಿಚಾರಕರಾಗಿದ್ದ ಕೆ.ಎಂ.ರವಿಶಂಕರ್ (ಪ್ರಸ್ತುತ ಉತ್ತರ ಕಂದಾಯ ವಿಭಾಗದಲ್ಲಿದ್ದಾರೆ), ಇದೇ ಕಚೇರಿಯಲ್ಲಿ ಮೇಲ್ವಿಚಾರಕರಾಗಿದ್ದ ಅಶ್ವತ್ಥನಾರಾಯಣ (ಪ್ರಸ್ತುತ ಪಶ್ಚಿಮ ಕಂದಾಯ ವಿಭಾಗದಲ್ಲಿದ್ದಾರೆ), ವಿಷಯ ನಿರ್ವಾಹಕ ಸಂಜಯ ಕುಮಾರ್ ಎಫ್‌ಐಆರ್‌ನಲ್ಲಿ ಹೆಸರಿರುವ ಇತರ ಬಿಡಿಎ ಸಿಬ್ಬಂದಿ. ಸುಳ್ಳು ಮಾಹಿತಿ ನೀಡಿ ನಿವೇಶನ ಪಡೆದ 43 ಮಂದಿಯ ಹೆಸರೂ ಎಫ್‌ಐಆರ್‌ನಲ್ಲಿದೆ.

ಏನಿದು ಪ್ರಕರಣ?: ಬನಶಂಕರಿ 3ನೇ ಹಂತದ ಹೊಸಕೆರೆಹಳ್ಳಿ ಗ್ರಾಮದಲ್ಲಿ ಬಿಡಿಎಯ ಜಾಗದಲ್ಲಿ (ಸರ್ವೆ ನಂಬರ್ 89, 90, 91 ಹಾಗೂ 94) ಗುಡಿಸಲುಗಳಲ್ಲಿ ವಾಸವಾಗಿದ್ದ ಕೆಲವು ಕುಟುಂಬಗಳನ್ನು ಒಕ್ಕಲೆಬ್ಬಿಸಲಾಗಿತ್ತು. ಅವರ ಪುನರ್ವಸತಿಗೆ ಒತ್ತಾಯಿಸಿ ಕರ್ನಾಟಕ ಅನಾಥ ಮಕ್ಕಳ ಅಭಿವೃದ್ಧಿ ಸಂಸ್ಥೆ ಹೋರಾಟ ನಡೆಸಿತ್ತು. 541 ಮಂದಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರ ಆದೇಶ ಮಾಡಿತ್ತು. ಹೊಸಕೆರೆಹಳ್ಳಿ ಗ್ರಾಮದ ಸರ್ವೆ ನಂಬರ್ 90ರಲ್ಲಿ 20x30 ಅಡಿ ವಿಸ್ತೀರ್ಣದ ಒಟ್ಟು 238 ನಿವೇಶನಗಳನ್ನು 2005ರ ಮಾ.11ರಂದು ಬಿಡಿಎ ಹಂಚಿಕೆ ಮಾಡಿತ್ತು. ಕೆಲವು ಅರ್ಹ ಫಲಾನುಭವಿಗಳಿಗೆ ನಿವೇಶನ ಸಿಕ್ಕಿರಲಿಲ್ಲ. ಬಿಡಿಎ ದಕ್ಷಿಣ ವಿಭಾಗದ ಅಧಿಕಾರಿಗಳು ಮಹಜರು ನಡೆಸಿ 180 ಮಂದಿ ಮಾತ್ರ ಇನ್ನು ನಿವೇಶನ ಪಡೆಯಲು ಅರ್ಹರಿದ್ದಾರೆ ಎಂದು ವರದಿ ನೀಡಿದ್ದರು.

2017ರ ಅ.7ರಂದು ಕೆಲವರು ಪುನರ್ವಸತಿ ವೇಳೆ ಕೈಬಿಟ್ಟವರಿಗೂ ನಿವೇಶನ ನೀಡುವಂತೆ ಸರ್ಕಾರಕ್ಕೆ ಕೋರಿಕೆ ಸಲ್ಲಿಸಿದ್ದರು. ಈಗಿನ ದರ ಕಟ್ಟಿಸಿಕೊಂಡು ನಿಯಮಾವಳಿಯಂತೆ ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡುವಂತೆ ಸರ್ಕಾರ ಆದೇಶಿಸಿತ್ತು. 2018ರ ಅ.31ರಂದು ನಡೆದಿದ್ದ ಪ್ರಾಧಿಕಾರದ ಆಡಳಿತ ಮಂಡಳಿ ಸಭೆಯಲ್ಲಿ ಅರ್ಹ 180 ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲು ನಿರ್ಣಯಿಸಲಾಗಿತ್ತು.

ಜ್ಞಾನಭಾರತಿ (ನಾಗದೇವನಹಳ್ಳಿ), ನಾಗರಬಾವಿ, ಎಚ್‌ಬಿಆರ್ ಬಡಾವಣೆ, ಬಿಟಿಎಂ ಬಡಾವಣೆಗಳಲ್ಲೂ ನಿವೇಶನ ಹಂಚಿಕೆ ಮಾಡಲಾಗಿತ್ತು. ಇದರಲ್ಲಿ ಅಕ್ರಮ ನಡೆದಿದೆ ಎಂದು ಪ್ರಶಾಂತನಗರದ ನವೀನ್ ಕುಮಾರ್ ಇತ್ತೀಚೆಗೆ ದೂರು ನೀಡಿದ್ದರು. ಈ ಬಗ್ಗೆ ತನಿಖೆ ನಡೆಸಿದಾಗ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಸಾಬೀತಾಗಿತ್ತು.

ಎಫ್‌ಐಆರ್‌ನಲ್ಲಿ ಉಪಕಾರ್ಯದರ್ಶಿ ಚಿದಾನಂದ್ ಹೆಸರಿಲ್ಲ

ಈ ಪ್ರಕರಣ ಸಂಬಂಧ ಬಿಡಿಎ ಉಪಕಾರ್ಯದರ್ಶಿ –1 ಚಿದಾನಂದ್ ಅವರಿಗೂ ಬಿಡಿಎ ಆಯುಕ್ತ ಎಚ್.ಆರ್.ಮಹದೇವ್ ನೋಟಿಸ್ ಜಾರಿಗೊಳಿಸಿದ್ದರು. ಆದರೆ, ಎಫ್‌ಐಆರ್‌ನಲ್ಲಿ ಚಿದಾನಂದ್ ಹೆಸರಿಲ್ಲ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಮಹದೇವ್, ‘ನಾವು ಕಾರಣ ಕೇಳಿ ಜಾರಿಗೊಳಿಸಿದ್ದ ನೋಟಿಸ್‌ಗೆ ಸಮರ್ಪಕ ಉತ್ತರ ನೀಡಿದವರನ್ನು ಹೊರತಾಗಿ ಉಳಿದ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ’ ಎಂದರು.

‘ಈ ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಅಮಾನತು ಮಾಡುವಂತೆ ತನಿಖೆ ನಡೆಸಿರುವ ಪೊಲೀಸರೇ ಸರ್ಕಾರಕ್ಕೆ ಕೋರಿಕೆ ಸಲ್ಲಿಸಬಹುದು. ಅವರು ನಮ್ಮ ಮೂಲಕ ಕೋರಿಕೆ ಸಲ್ಲಿಸುವುದಕ್ಕೂ ಅವಕಾಶವಿದೆ. ಅಧಿಕಾರಿಗಳನ್ನು ಅಮಾನತುಗೊಳಿಸುವ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳುತ್ತದೆ’ ಎಂದರು.

ಅಕ್ರಮಗಳೇನು?

- ಅರ್ಹರಲ್ಲದವರಿಗೆ ನಿವೇಶನ ಹಂಚಿಕೆ
- 20x30 ಅಡಿಯ ನಿವೇಶನ ನೀಡಲು ಮಾತ್ರ ಅವಕಾಶವಿದ್ದರೂ ಅದಕ್ಕಿಂತ ಹೆಚ್ಚು ವಿಸ್ತೀರ್ಣದ ನಿವೇಶನಗಳ ಹಂಚಿಕೆ
- ಒಮ್ಮೆ ನಿವೇಶನ ಪಡೆದವರಿಗೆ ಕಾನೂನುಬಾಹಿರವಾಗಿ ಮತ್ತೆ ನಿವೇಶನ ಹಂಚಿಕೆ
- ನಿವೇಶನದ ಮೌಲ್ಯ ಪಾವತಿಸಿಕೊಳ್ಳದೇ ಹಂಚಿಕೆ
- ಅನುಮೋದಿತ ನಕ್ಷೆಯಲ್ಲಿರದ ನಿವೇಶನಗಳ ಹಂಚಿಕೆ
- ಕಾನೂನುಬಾಹಿರವಾಗಿ ಮೂಲೆ ನಿವೇಶನಗಳ ಹಂಚಿಕೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸುದ್ದಿ 2 ನಿಮಿಷ

ಮೀಸಲು ಹೋರಾಟ: ನಿಯಮ ಪಾಲಿಸದವರ ವಿರುದ್ಧ ಕ್ರಮ ಏನು?

ಬೆಂಗಳೂರು: ಕಳೆದ ಭಾನುವಾರ ಬೆಂಗಳೂರಿನಲ್ಲಿ ನಡೆದ ರ‍್ಯಾಲಿಯಲ್ಲಿ ಕೋವಿಡ್ ನಿಯಮ ಉಲ್ಲಂಘಿಸಿದವರ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಎಲ್ಲಾ ರ‍್ಯಾಲಿ ಮತ್ತು ಸಮಾವೇಶಗಳಲ್ಲಿ ಕೋವಿಡ್ ಮಾರ್ಗದರ್ಶಿ ಸೂತ್ರ(ಎಸ್‌ಒಪಿ) ಪಾಲಿಸುವುದನ್ನು ಕಡ್ಡಾಯಗೊಳಿಸಲು ಕೋರಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿದೆ.

‘ನಿರ್ದಿಷ್ಟ ಸಮುದಾಯವೊಂದು ಮೀಸಲಾತಿಗೆ ಆಗ್ರಹಿಸಿ ರ‍್ಯಾಲಿ ನಡೆಸಿದೆ ಎಂಬ ಮಾಹಿತಿ ನಮಗೆ ದೊರೆತಿದೆ. ನಿಯಮ ಉಲ್ಲಂಘಿಸಿದ್ದರೆ ಅವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ ಎಂಬುದರ ಕುರಿತು ಮೆಮೊ ಸಲ್ಲಿಸಬೇಕು’ ಎಂದು ಪೀಠ ತಿಳಿಸಿತು. ಮೀಸಲಾತಿ ಬೇಡಿಕೆ ಮುಂದಿಟ್ಟು ಪಂಚಮಸಾಲಿ ಸಮುದಾಯದವರು ಕಳೆದ ಭಾನುವಾರ(ಫೆ.21) ರ‍್ಯಾಲಿ ನಡೆಸಿದ್ದರು.

ಈ ಮಧ್ಯೆ, ತಿದ್ದುಪಡಿ ಮಾಡಿರುವ ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ–2020ರ ಪ್ರತಿಯನ್ನು ಸರ್ಕಾರ ಸಲ್ಲಿಸಿತು. ‘ಪ್ರಧಾನ ಕಾಯ್ದೆಯಡಿ ಒದಗಿಸಿರುವ ದಂಡದ ನಿಗದಿಪಡಿಸುವ ಸಂಬಂಧ ನಿಯಮಾವಳಿ ರೂಪಿಸಲಾಗಿದೆಯೇ’ ಎಂದು ಪೀಠ ಪ್ರಶ್ನಿಸಿತು.

ಕೋವಿಡ್ ತಡೆಗಟ್ಟಲು ಅಳವಡಿಸಿಕೊಂಡಿರುವ ಕ್ರಮಗಳ ಕುರಿತು ವಿವರಣೆ ಸಲ್ಲಿಸುವಂತೆ ರಾಜಕೀಯ ಪಕ್ಷಗಳಿಗೆ ನೋಟಿಸ್ ನೀಡಲು ಪೀಠ ಇದೇ ವೇಳೆ ಆದೇಶಿಸಿತು.

ಕಾಯ್ದೆಯ ಸೆಕ್ಷನ್ 5ರ ಅಡಿಯಲ್ಲಿ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರದ ಕುರಿತು ರಾಜ್ಯ ಸರ್ಕಾರವನ್ನು ಹಿಂದಿನ ವಿಚಾರಣೆ ವೇಳೆ ಪೀಠ ತರಾಟೆಗೆ ತೆಗೆದುಕೊಂಡಿತ್ತು.



ಗೌರವ ಧನ ಹೆಚ್ಚಳಕ್ಕೆ ಆಗ್ರಹಿಸಿ ‘ಬೆಂಗಳೂರು ಚಲೊ’ ಇಂದು

ಬೆಂಗಳೂರು: ‘ಸೇವಾ ಹಿರಿತನ ಆಧಾರದಲ್ಲಿ ಗೌರವಧನ ಹೆಚ್ಚಳ ಮಾಡಬೇಕು’ ಎಂದು ಆಗ್ರಹಿಸಿ ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಗರದಲ್ಲಿ ಮಂಗಳವಾರ (ಮಾ. 2) ‘ಬೆಂಗಳೂರು ಚಲೊ’ ಪ್ರತಿಭಟನಾ ರ‍್ಯಾಲಿ ನಡೆಸಲಿದ್ದಾರೆ.

‘ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 11ಕ್ಕೆ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಲಾಗುವುದು. ನಂತರ ಉದ್ಯಾನದಲ್ಲಿ ಬಹಿರಂಗ ಸಭೆ ಆಯೋಜಿಸಲಾಗಿದೆ’ ಎಂದು ಎಐಟಿಯುಸಿ ಪದಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಪಿಂಚಣಿ ನೀಡಬೇಕು, ಉಚಿತ ವೈದ್ಯಕೀಯ ಸೌಲಭ್ಯ ಎಂಬುದು ಸೇರಿ ಹಲವು ಬೇಡಿಕೆಗಳ ಈಡೇರಿಕೆಗಾಗಿ ಈ ಹೋರಾಟ ನಡೆಸಲಾಗುತ್ತಿದೆ. ಪ್ರತಿಭಟನೆ ಬಳಿಕ ಸಚಿವೆ ಶಶಿಕಲಾ ಜೊಲ್ಲೆ ಅವರಿಗೆ ಮನವಿ ಸಲ್ಲಿಸಲಾಗುವುದು’ ಎಂದೂ ಹೇಳಿದ್ದಾರೆ.

ಬಿಜೆಪಿ ಶಿಸ್ತು ಸಮಿತಿ ರಚನೆ: ಲಿಂಗರಾಜ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಬಿಜೆಪಿ ಶಿಸ್ತು ಸಮಿತಿಯನ್ನು ರಚಿಸಿದ್ದು, ಲಿಂಗರಾಜ ಪಾಟೀಲ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಸದಸ್ಯರನ್ನಾಗಿ ಶಾಸಕ ಬಿ.ಸಿ. ನಾಗೇಶ್, ಪಿ.ಎಚ್.ಪೂಜಾರ, ರೀನಾ ಪ್ರಕಾಶ್, ಇ.ಅಶ್ವತ್ಥನಾರಾಯಣ ಅವರನ್ನು ನೇಮಿಸಲಾಗಿದೆ ಎಂದು ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನೃತ್ಯ ಪ್ರದರ್ಶನ ನಗರದ ಚೌಡಯ್ಯ ಮೆಮೋರಿಯಲ್ ಹಾಲ್‌ನಲ್ಲಿ ನಡೆದ ರಂಗಾಭಿವಂದನೆ ಕಾರ್ಯಕ್ರಮದಲ್ಲಿ ‘ಶಿವಪ್ರಿಯ’ ನೃತ್ಯ ಸಂಸ್ಥೆಯ ಗುರು ಡಾ. ಸಂಜಯ್ ಶಾಂತಾರಾಂ ಅವರ ಶಿಷ್ಯೆಯರು ನೃತ್ಯ ಪ್ರದರ್ಶಿಸಿದರು

ನಗರದಲ್ಲಿ ಇಂದು

ರಾಜಾಜಿನಗರದ ಶ್ರೀರಾಮ ಮಂದಿರ ದೇವಸ್ಥಾನದ ರಾಜಗೋಪುರ ಹಾಗೂ ಗರ್ಭಗುಡಿ ಗೋಪುರಗಳ ಮಹಾಕುಂಭಾಭಿಷೇಕಕ್ಕೆ ದೀಪ ಬೆಳಗುವ ಕಾರ್ಯಕ್ರಮ: ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಆಯೋಜನೆ–ಶ್ರೀರಾಮ ಸೇವಾ ಮಂಡಳಿ, ಬೆಳಿಗ್ಗೆ 9



ನಿರ್ಮಲಾನಂದ ನಾಥ ಸ್ವಾಮೀಜಿ

ಸಮೂಹ ಮಾಧ್ಯಮಗಳ ಪ್ರತಿನಿಧಿಗಳಿಗೆ ಸಹಕಾರ ಜಾಗೃತಿ ಮತ್ತು ಚಿಂತನ-ಮಂಥನ ಕುರಿತು ಒಂದು ದಿನದ ರಾಜ್ಯಮಟ್ಟದ ವಿಶೇಷ ಕಾರ್ಯಕ್ರಮ: ಉದ್ಘಾಟನೆ–ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಅಧ್ಯಕ್ಷತೆ–ಕರ್ನಾಟಕ ಪತ್ರಕರ್ತರ ಸಂಘದ ಅಧ್ಯಕ್ಷ ಎಂ.ಎಸ್.ರಾಜೇಂದ್ರ ಕುಮಾರ್, ಅತಿಥಿಗಳು–ರಾಜ್ಯ ಸಹಕಾರ ಮಹಾ ಮಂಡಳದ ಆಡಳಿತಾಧಿಕಾರಿ ವೈ.ಎಚ್.ಗೋಪಾಲ ಕೃಷ್ಣ, ವ್ಯವಸ್ಥಾಪಕ ನಿರ್ದೇಶಕ ಅರುಣ್ ಕುಮಾರ್, ಆಯೋಜನೆ–ರಾಜ್ಯ ಸಹಕಾರ ಮಹಾ ಮಂಡಳ, ಸ್ಥಳ–ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 10

ಸುವರ್ಣ ವಿಜಯ ವರ್ಷ ಆಚರಣೆ ಹಾಗೂ ಮಹಾವೀರ ಚಕ್ರ, ವೀರ ಚಕ್ರ ಪುರಸ್ಕೃತರಿಗೆ ಸನ್ಮಾನ: ಉದ್ಘಾಟನೆ–ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸ್ಥಳ–ವಿಧಾನಸೌಧದ ಭವ್ಯ ಮೆಟ್ಟಿಲುಗಳ ಬಳಿ ಹಾಗೂ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್, ಬೆಳಿಗ್ಗೆ 10.30

‘ಮುಸ್ಲಿಂ ಮೀಸಲಾತಿಯ ಪ್ರಾಯೋಗಿಕತೆ’ ಕುರಿತು ವಿಚಾರ ಸಂಕಿರಣ: ಉದ್ಘಾಟನೆ–ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ಅತಿಥಿಗಳು–ಹಿರಿಯ ಪತ್ರಕರ್ತ ಬಿ.ಎಂ. ಹನೀಫ್, ಕರ್ನಾಟಕ ಮುಸ್ಲಿಂ ಜಮಾತ್ ಅಧ್ಯಕ್ಷ ಮುಫ್ತಿ ಅನ್ವರ್ ಅಲಿ, ಹಿರಿಯ ವಕೀಲ ಸಿ.ಎಸ್.ದ್ವಾರಕಾನಾಥ್, ಆಯೋಜನೆ–ಕರ್ನಾಟಕ ಮುಸ್ಲಿಂ ಜಮಾತ್‌ನ ಬೆಂಗಳೂರು ನಗರ ಜಿಲ್ಲಾ ಸಮಿತಿ, ಸ್ಥಳ–ವೀರಶೈವ ಮಹಾಸಭಾ ಸಭಾಂಗಣ, ಅರಮನೆ ರಸ್ತೆ, ಮಧ್ಯಾಹ್ನ 3

ಪರಿಶಿಷ್ಟ ಜಾತಿಯ ನವೋದ್ಯಮಿಗಳಿಗೆ ₹1,000 ಕೋಟಿ ಅನುದಾನ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯ ಪ್ರಗತಿ ಮತ್ತು ಉನ್ನತಿಗಾಗಿ ವಿವಿಧ ಯೋಜನೆಗಳನ್ನು ರಾಜ್ಯ ಬಜೆಟ್‌ನಲ್ಲಿ ಸೇರಿಸಬೇಕು ಎಂದು ರಾಜ್ಯ ಬಿಜೆಪಿ ಎಸ್.ಸಿ ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ನೇತೃತ್ವದ ನಿಯೋಗ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದೆ.

ಎಸ್‌ಸಿಪಿ–ಟಿಎಸ್‌ಪಿ ಕಾಯ್ದೆಯ ನಿಯಮಗಳನ್ನು ಇಲಾಖೆಗಳು ಸಂಪೂರ್ಣವಾಗಿ ಪಾಲಿಸಬೇಕು ಮತ್ತು ಕಾಯ್ದೆಯ ಕಲಂ 7 ಡಿ ಭಾಗವು ಪರಿಶಿಷ್ಟ ಜಾತಿಯ ಅಭಿವೃದ್ಧಿಗೆ ಪೂರಕವಾಗಿಲ್ಲದಿರುವುದರಿಂದ ಅದನ್ನು ತೆಗೆದು ಹಾಕಬೇಕು ಎಂದು ಮನವಿ ಮಾಡಿತು.

ವಿದೇಶಗಳಲ್ಲಿ ವಿದ್ಯಾಭ್ಯಾಸ ಮಾಡುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಸಂಪೂರ್ಣವಾದ ಹಾಸ್ಟೆಲ್ ಶುಲ್ಕ, ಖರ್ಚನ್ನು ಭರಿಸಬೇಕು. ಪ್ರಸ್ತುತ ಇರುವ ₹5 ಲಕ್ಷದ ಮಿತಿಯನ್ನು ರದ್ದುಪಡಿಸಬೇಕು. ಸರ್ಕಾರ ಮತ್ತು ವಿಶ್ವವಿದ್ಯಾಲಯಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು. ಪರಿಶಿಷ್ಟ ಜಾತಿಯ ಗುತ್ತಿಗೆದಾರರಿಗೆ ₹50 ಲಕ್ಷದಿಂದ ₹1 ಕೋಟಿಯವರೆಗೆ ಇಎಂಡಿ ರಹಿತವಾಗಿ ಸರ್ಕಾರದ ಟೆಂಡರ್‌ಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕು.

ಎಲ್ಲಾ ಭೂರಹಿತ ಪರಿಶಿಷ್ಟ ಜಾತಿಯವರಿಗೆ ತಲಾ 2 ಎಕರೆ ಭೂಮಿಯನ್ನು ಹಂಚಿಕೆ ಮಾಡಬೇಕು. ಪರಿಶಿಷ್ಟ ಜಾತಿಯ ಜನರಿಗೆ ಸ್ಮಶಾನ ಭೂಮಿಯನ್ನು ಮಂಜೂರು ಮಾಡುವುದು. ಭೂಮಿ ಖರೀದಿಗೆ ಹಣ ಮೀಸಲಿಡಬೇಕು.

ಪರಿಶಿಷ್ಟ ಸಮುದಾಯದ ಪ್ರತಿಭಾವಂತರಿಗೆ ಐಟಿ- ಬಿಟಿ ನವೋದ್ಯಮ ಸ್ಥಾಪಿಸಲು ₹1,000 ಕೋಟಿ ಬಜೆಟ್‌ನಲ್ಲಿ ಮೀಸಲಿಡಬೇಕು. ತೆಲಂಗಾಣ ಮಾದರಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಇಂಗ್ಲಿಷ್ ಮಾಧ್ಯಮದ ವಸತಿ ಶಾಲೆಗಳನ್ನು ಎಲ್ಲಾ ತಾಲ್ಲೂಕು ಮಟ್ಟದಲ್ಲಿ ತೆರೆಯಬೇಕು ಎಂದು ಮನವಿಯಲ್ಲಿ ಕೋರಲಾಗಿದೆ.

7ಕ್ಕೆ ಅಣುವ್ರತ ಸಮಿತಿ ವಿಚಾರ ಸಂಕಿರಣ

ಬೆಂಗಳೂರು: ನಗರದ ಅಣುವ್ರತ ಸಮಿತಿಯು ಸಂಸ್ಥಾಪನಾ ದಿನದ ಅಂಗ ವಾಗಿ ಇದೇ 7 ರಂದು ‘ಆಚಾರ್ಯ ಶ್ರೀತುಳಸಿ ಮತ್ತು ಅವರ ಸಾಮಾಜಿಕ ಕ್ರಾಂತಿ’ ಕುರಿತು ವಿಚಾರ ಸಂಕಿರಣವನ್ನು ಗಾಂಧಿನಗರದ ತೇರಾಪಂಥ್ ಭವನ ದಲ್ಲಿ ಆಯೋಜಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಣುವ್ರತ ಸಮಿತಿ ಅಧ್ಯಕ್ಷ ಕನ್ನಯ್ಯ ಲಾಲ್ ಚಿಪ್ಪಡ್, ‘ಕಾರ್ಯಕ್ರಮದಲ್ಲಿ ಜೈನ ಸಾಧ್ವಿಶ್ರೀ ಮಂಗಳ ಪ್ರಜ್ಞಾಜೀ ಅವರು ಸಾನ್ನಿಧ್ಯ ವಹಿಸಲಿದ್ದು, ಅತಿಥಿಗಳಾಗಿ ಸಂಸದ ತೇಜಸ್ವಿ ಸೂರ್ಯ, ಅಣುವ್ರತ ಸಮಿತಿ ರಾಷ್ಟ್ರೀಯ ಅಧ್ಯಕ್ಷ ಸಂಚಮ್ ಜೈನ್, ಪ್ರಧಾನ ಕಾರ್ಯದರ್ಶಿ ಸುರಾನ ಭಾಗವಹಿಸಲಿದ್ದಾರೆ’ ಎಂದರು.

ಮೀಸಲಾತಿಗಾಗಿ ಪಂಚಮಸಾಲಿ ಲಿಂಗಾಯತರ ಧರಣಿ ಮುಂದುವರಿಕೆ

‘ಯಡಿಯೂರಪ್ಪ ನನ್ನನ್ನು ಶತ್ರು ಎಂದುಕೊಂಡಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನನ್ನನ್ನು ಅವರ ಶತ್ರು ಎಂದುಕೊಂಡಿದ್ದಾರೆ. ಅವರಿಗೆ ಪೈಪೋಟಿ ನೀಡುತ್ತಿದ್ದೇನೆ ಎಂದು ಭಾವಿಸಿದ್ದಾರೆ. ಆದರೆ, ನಮ್ಮ ಹೋರಾಟ ಸರ್ಕಾರದ ವಿರುದ್ಧ ಅಲ್ಲ. ಪೊಲೀಸರ ವಿರುದ್ಧವೂ ಅಲ್ಲ. ಮೀಸಲಾತಿಗಾಗಿ ಮಾತ್ರ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಪಂಚಮಸಾಲಿ ಸಮುದಾಯವನ್ನು 2ಎ ಪ್ರವರ್ಗಕ್ಕೆ ಸೇರಿಸಬೇಕು ಎಂದು ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಧರಣಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಬೇರೆ ಕಾರ್ಯ ನಿಮಿತ್ತ ನಾನು ದೆಹಲಿಗೆ ಹೋದರೆ ಹೈಕಮಾಂಡ್‌ನವರೇ ಕರೆಸಿಕೊಂಡರು ಎಂದು ಸುಮ್ಮನೆ ಸುದ್ದಿ ಮಾಡಿಸಿದರು. ಇದೆಲ್ಲ ಮಾಡುವುದು ಬಿಟ್ಟು ಮೀಸಲಾತಿ ನೀಡುತ್ತೇವೆ ಎಂದು ಸ್ವಚ್ಛ ಮನಸಿನಿಂದ ಹೇಳಿ’ ಎಂದು ಯಡಿಯೂರಪ್ಪನವರನ್ನು ಉದ್ದೇಶಿಸಿ ಹೇಳಿದರು.

‘ಹೋರಾಟವನ್ನು ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಿವೆ. ನನ್ನನ್ನು ಬಂಧಿಸಲು ಲಿಂಗಾಯತ ಐಪಿಎಸ್ ಅಧಿಕಾರಿಗಳನ್ನು ಕಳುಹಿಸಿದ್ದರು. ಎಷ್ಟು ದಿನ ವಿಜಯೇಂದ್ರ ಅವರ ಮಾತು ಕೇಳುತ್ತೀರಿ ಎಂದು ಹೇಳಿ ಕಳಿಸಿದೆ’ ಎಂದೂ ಹೇಳಿದರು.

ಕೂಡಲಸಂಗಮ ಪೀಠದ ಪೀಠಾಧ್ಯಕ್ಷ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ, ‘ಮೀಸಲಾತಿಗೆ ಒತ್ತಾಯಿಸಿ ರಾಜ್ಯದಾದ್ಯಂತ ಪತ್ರ ಚಳವಳಿ ನಡೆಸಲಾಗುತ್ತಿದೆ. ರಾಜ್ಯದ ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಸಮುದಾಯದ ಜನರು ಮಂಗಳವಾರ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಿದ್ದಾರೆ. ಮಾ.4ರವರೆಗೆ ಈ ಪ್ರತಿಭಟನೆ ಮುಂದುವರಿಯಲಿದೆ’ ಎಂದರು.



ನಗರದಲ್ಲಿ ಸೋಮವಾರ ಬಸನಗೌಡ ಪಾಟೀಲ ಯತ್ನಾಳ ಪತ್ರ ಚಳವಳಿಗೆ ಚಾಲನೆ ನೀಡಿದರು. ಬಸವಜಯ ಮೃತ್ಯುಂಜಯ ಸ್ವಾಮೀಜಿ, ವಿಜಯಾನಂದ ಕಾಶಪ್ಪನವರ ಇದ್ದಾರೆ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED DTP Operator/ Graphic Designer, Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

General

IMMEDIATERECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ELECTRONICS/ ELECTRICAL/ SOFTWARE/ HARDWARE/ ENGINEERS:- 7676760299/ 7676760399

Wanted

JOIN SHIPPING Company, 10th/12th/Graduates Pass Boys, age: 25000-45000+ Accommodation Facilities sanskacarrier62@gmail.com 7204869835

PERSONAL

Lost

I, NS Khera S/o MS Khera, r/o Koramangala, Bengaluru have lost my BSC Degree issued in 1991 by JNU, Delhi. I am now applying for a duplicate degree. Any objection may be conveyed to authorities within 15 days of publication of this notice.

Change of Name

I, Lakshmi Aishwarya Holla Pandeshwar D/o Ashok Pandeshwar aged about 25 years Residing at#10, Omshree, 2nd Cross, West Block, Upkar Residency, Vishwaneedam Post, Bangalore 560091. Have Changed my name to LAKSHMI AISHWARYA DABEER vide affidavit dated 26.02.2021 before notary Devaraja E, Bengaluru

I, AANSHUL VED GROVER residing Flat No.G-1005, Purva Venezia Near Mother Dairy, Yelahanka, Bangalore-560064 have changed my minor son's name from AAYAN GROVER to EYANN GROVER vide affidavit dated 01/03/2021 sworn before notary S.R.Ravikumar, Bangalore

I, SUNIL Kumar S/o Venkateshappa Residing at No.#713/8, Vinayaka Layout, Chinnappanahalli, Doddanekkundi, Bengaluru-560037, have changed my name to SUNIL. V vide affidavit dated 26/02/2021 before notary G.Rajendra, Bengaluru.

I, GURUSIDDAYYA LOHITH, S/o Gurusiddayya aged about 37 Years R/a #M. 237, 5th Main, 2nd Cross, H Block, Ramakrishna Nagara, Mysore, have changed my name to LOHITH GURU vide affidavit dated 01.03.2021 before notary T.C. ThimmaRaja, Bengaluru

BUSINESS

Business to Business

Finance

NRI'S INVESTMENT AND FINANCE AVAILABLE ON LOW-INTEREST AGAINST PROPERTIES,LAND, BUILDINGS SITES,FLATS, BUSINESSES ALSO AYUSH, MEDICAL HOSPITALS. CALL -7411265189

PUBLIC NOTICE

PUBLIC NOTICE

My client, **Mrs.Ajanta Chakravarty,** aged about 62 years, wife of Sri.R.D. Chakravarty, residing at Villa No 268, Phase 2, Palm Meadows, Bangalore 560 066, do hereby informs the General Public that, she has lost the below mentioned original documents, in respect of the Apartment No.B-506, Municipal No.1/29, situated on the Fourth Floor of the apartment building known as ‘RIFCO-SURYA’, constructed on Sy.No.98, Khata No.241/B, Kodihalli Village, Varthur Hobli, Main HAL Road, Bangalore, presently coming under BBMP limits, **on 02.01.2021 at 4 pm, while carrying it in my file, from my aforesaid residence to the Old Airport Main Road Shop for photo copying the same** and it was in her custody when lost.
(i) Original Power of Attorney executed by Sri.Madakkara Surendra Babu, son of Late Madakkara Gopalan in favour of Mr.Sunil Ramachandra, son of Sri.E.N. Ramachandra and **(ii)** Original Sale Deed dated 14.09.1995, bearing document No.4939/1995-96, pages 162-170, Volume No.4391, in book 1, registered at the office of the Sub-Registrar, Bangalore South Taluk, executed by Sri.Madakkara Surendra Babu, son of Late Madakkara Gopalan, represented by his Power of Attorney Holder, Sri.Sunil Ramachandra, son of Sri.E.N.Ramachandra in favour of Mrs.Ajanta Chakravarty, wife of Mr.R.D.Chakravarty,
Police Complaint under Section 155 Cr.PC. has been filed by my client for having lost the aforesaid documents, vide Lost Article Report No.028953/2021 dated 11.02.2020 and Lost Article Report No.030420/2021 dated 12.02.2021. If there is any dispute or claim over the aforesaid property or the documents, you may inform me within 7 days from the date of this notice and if anyone finds the aforesaid original documents, kindly hand over the same to my address mentioned below.
Jessie Thomas, Advocate
B.A., LL.B., LL.M.
No.14/1, “Kevin Villa”, 24th ‘E’ Cross Muneshwaraswamy Layout, Ejipura, Viveknagar Post, Bangalore 560 047
Mobile: 9845169302.
Place : Bangalore.
Date : 26.02.2021

ಫಾರಂ ಯುಆರ್‌ಸಿ-2

ಕಾಯ್ದೆಯ ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ ನೊಂದಣಿ ಕುರಿತಾದ ಜಾಹೀರಾತು ನೀಡುವ ಪ್ರಕಟಣೆ [ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 374 (ಬಿ) ಮತ್ತು ಕಂಪನಿಗಳ (ನೊಂದಣಿಗೆ ಅಧಿಕೃತಗೊಂಡ) ನಿಯಮಗಳು, 2014ರ ನಿಯಮ 4(1)ಕ್ಕೆ ಅನುಗುಣವಾಗಿ]

1. ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 366ರ ಸಬ್–ಸೆಕ್ಷನ್ (2)ಕ್ಕೆ ಅನುಗುಣವಾಗಿ ಹದಿನೈದು ದಿನಗಳ ನಂತರ, ಅರ್ಜಿ ಒಂದನ್ನು ಸಲ್ಲಿಸಲು ಉದ್ದೇಶಿಸಲಾಗಿದೆ, ಆದರೆ ಮೂವತ್ತು ದಿನಗಳ ಅವಧಿಯ ಒಳಗೆ ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್ 5, ಐಎಂಟಿ ಮಾನೆಸರ್, ಗುರಗಾಂವ್ ಜಿಲ್ಲೆ (ಹರ್‍ಯಾಣ) ಪಿನ್–122050 ಇವರಿಗೆ ಪರಮನೆಟ್‌ವರ್ಕ್ ಇಂಡಿಯಾ ಎಲ್‌ಎಲ್ ಪಿ ಎಂಬ ಎಲ್‌ಎಲ್‌ಪಿ ಕಂಪನಿಗಳ ಕಾಯ್ದೆ 2013ರ ಅಧ್ಯಾಯ 21, ಭಾಗ 1ರ ಅಡಿಯಲ್ಲಿ ಕಂಪನಿ ಲಿಮಿಟೆಡ್‌ನ ಷೇರುಗಳ ವ್ಯವಹಾರಿಕ ಸಂಸ್ಥೆಯಾಗಿ ನೊಂದಾಯಿಸಲು ಅರ್ಜಿ ಸಲ್ಲಿಸಲು ಉದ್ದೇಶಿಸಿರುತ್ತದೆ.

2. ಕಂಪನಿಯ ಮೂಲ ಉದ್ದೇಶಗಳು ಹೀಗಿವೆ: ಮಾಹಿತಿ ತಂತ್ರಜ್ಞಾನ ಬಳಸಿಕೊಂಡು ಕಾರ್ಪೊರೇಟ್‌ಗಳು ತಮ್ಮ ವ್ಯವಹಾರಗಳನ್ನು ಸುಧಾರಿಸಿಕೊಳ್ಳಲು ಸಂಶೋಧನೆ, ಸಮಾಲೋಚನೆ, ಅಭಿವೃದ್ಧಿ ಹಾಗೂ ಕಸ್ಟಮೈಸ್ ಸೊಲ್ಯೂಷನ್ ಕೈಗೊಳ್ಳುವುದು.

3. ಪ್ರಸ್ತಾವಿತ ಕಂಪನಿಯ ಡ್ರಾಫ್ಟ್ ಮೆಮೊರ್‍ಯಾಂಡಮ್ ಹಾಗೂ ಆರ್ಟಿಕಲ್ಸ್ ಆಫ್ ಅಸೋಸಿಯೇಶನ್‌ಗಳನ್ನು, ನಂ. 303, ಶ್ರೀ ಶ್ರೀ ಪ್ಯಾರಾಡೈಸ್, 3ನೇ ಮೈನ್, ನ್ಯೂ ತಿಪ್ಪಸಂದ್ರ, ಬೆಂಗಳೂರು – 560 075 ಕರ್ನಾಟಕ ಭಾರತ ವಿಳಾಸದಲ್ಲಿ ಪರಿಶೀಲಿಸಬಹುದಾಗಿದೆ.

4. ಸದರಿ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಸದರಿ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್ 5, ಐಎಂಟಿ ಮಾನೆಸರ್, ಗುರಗಾಂವ್ ಜಿಲ್ಲೆ (ಹರ್‍ಯಾಣ) ಪಿನ್–122050 ಇವರಿಗೆ ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗೆ ಸಲ್ಲಿಸುವುದು ಹಾಗೂ ಒಂದು ಪ್ರತಿಯನ್ನು ಕಂಪನಿಯ ನೊಂದಾಯಿತ ಕಚೇರಿಗೂ ಸಲ್ಲಿಸುವುದು.

ದಿನಾಂಕ : 02.03.2021

ಅರ್ಜಿದಾರರ ಹೆಸರು
1. ಸೇತುರಾಮನ್ ವೈದೀಶ್ವರನ್
2. ಶ್ರೀಲಕ್ಷ್ಮಿ ವೈದೀಶ್ವರನ್

RENTAL PROPERTIES

Accommodation Available

Commercial

SHOWROOM_&_OFFICE_SPACES FURNISHED & Unfurnished Available for Rent.T Dasarahalli, 8th Mile, Tumkur Road, Ph: 9391024959

REAL ESTATE SELLING

Commerical

J C Road

100X100 COMMERCIAL site main J.C. Road (10000 sft.) adjacent VISL Rs.20,000/- per sft. (Negotiable) Sharif -9886335522 /080 25558477

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds

BOOK YOUR PROPERTY TEXT AD ON SATURDAY & SUNDAY
FOR JUST ₹ 1530/-*
For more information contact:
9880856233
9731810277 | 9901641752
9845114560 | 9886213331
*condition apply

ಜಿಲ್ಲೆಯಲ್ಲಿ 20 ಸಾವಿರ ಜನರಿಗೆ ಲಸಿಕೆ: ಜಿಲ್ಲಾಧಿಕಾರಿ ಜೆ. ಮಂಜುನಾಥ್

ಹಿರಿಯ ನಾಗರಿಕರಿಗೆ ಲಸಿಕೆ ನೀಡಿಕೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯಲ್ಲಿರುವ 23,750 ಆರೋಗ್ಯ ಕಾರ್ಯಕರ್ತರಲ್ಲಿ 20,088 ಜನರಿಗೆ (ಬಿಬಿಎಂಪಿ ವ್ಯಾಪ್ತಿ ಹೊರತು ಪಡಿಸಿ) ಮೊದಲ ಹಂತದ ಕೋವಿಡ್ ಲಸಿಕೆ ನೀಡಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ತಿಳಿಸಿದರು.

'ಕೊರೊನಾ ಸೇನಾನಿಗಳಿಗೆ ಮೊದಲ ಹಂತದಲ್ಲಿ ಶೇ 84.6 ರಷ್ಟು ಜನರು ಲಸಿಕೆ ನೀಡಲಾಗಿದೆ. ಬಹುತೇಕ ಖಾಸಗಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ ಮಾತ್ರ ಉಳಿದುಕೊಂಡಿದ್ದಾರೆ' ಎಂದು ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಪ್ರತಿ ಕೇಂದ್ರಗಳಲ್ಲಿ ದಿನಕ್ಕೆ 200 ಜನರಿಗೆ ಮಾತ್ರ ಲಸಿಕೆ ನೀಡಲಾಗುತ್ತಿದೆ. ಎರಡನೇ ಹಂತದಲ್ಲಿ 60 ವರ್ಷ ಮೇಲ್ಪಟ್ಟ, ಮಧುಮೇಹ ಸೇರಿದಂತೆ ಹಲವು ಆರೋಗ್ಯ ಸಮಸ್ಯೆ ಎದುರಿಸುತ್ತಿರುವ 45 ರಿಂದ 59 ವರ್ಷದೊಳಗಿನವರಿಗೆ ಲಸಿಕೆ ನೀಡಲಾಗುವುದು' ಎಂದರು.

'ಎರಡನೇ ಹಂತದ ಲಸಿಕೆಯನ್ನು ಈಗಾಗಲೇ 4,244 ಜನರಿಗೆ ನೀಡಲಾಗಿದೆ. ಅಲ್ಲದೆ, ಸೋಮವಾರದಿಂದ ಸಾರ್ವನಿಕರ ಲಸಿಕೆ ಅಭಿಯಾನ ಆರಂಭವಾಗಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಸಾರ್ವಜನಿಕರಿಗೂ ಲಸಿಕೆ ನೀಡಲು ಕ್ರಮ ಕೈಗೊಳ್ಳಲಾಗಿದೆ' ಎಂದರು.

'ಲಸಿಕೆಯನ್ನು ಸೋಮವಾರ, ಬುಧವಾರ, ಶುಕ್ರವಾರ ಮತ್ತು ಶನಿವಾರ ಮಾತ್ರ ನೀಡಲಾಗುತ್ತಿದೆ. ಬಿಬಿಎಂಪಿ ಹೊರತುಪಡಿಸಿ ಆನೇಕಲ್ ತಾಲ್ಲೂಕು ಆಸ್ಪತ್ರೆ, ಕೆ.ಆರ್.ಪುರ ತಾಲ್ಲೂಕು ಆಸ್ಪತ್ರೆ, ಯಲಹಂಕ ತಾಲ್ಲೂಕು ಆಸ್ಪತ್ರೆ, ರಾಜರಾಜೇಶ್ವರಿ ಮೆಡಿಕಲ್ ಆಸ್ಪತ್ರೆ, ನಾರಾಯಣ ನೇತ್ರಾಲಯ ಆಸ್ಪತ್ರೆಯಲ್ಲಿ ಲಸಿಕೆ ನೀಡಲಾಗುತ್ತಿದೆ' ಎಂದರು.

'ಸಾರ್ವಜನಿಕರು ಆರೋಗ್ಯ ಸೇತು ಸೇರಿದಂತೆ ಮೂರು ರೀತಿ ನೋಂದಣಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಆಧಾರ್ ಕಾರ್ಡ್ ಸೇರಿದಂತೆ ಏಳು ರೀತಿಯ ದಾಖಲೆಗಳನ್ನು ಪಡೆದು ಲಸಿಕೆ ನೀಡಲಾಗುತ್ತದೆ' ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶ್ರೀನಿವಾಸ್, 'ಜ್ವರ, ಕೆಮ್ಮು ಇರುವವರಿಗೆ ಲಸಿಕೆ ನೀಡಲಾಗುವುದಿಲ್ಲ. ಗುಣಮುಖರಾದ 14 ದಿನಗಳ ನಂತರ ಲಸಿಕೆ ಪಡೆದುಕೊಳ್ಳಬಹುದು' ಎಂದರು.

ಲಸಿಕೆ: ನೋಂದಣಿ ಹೇಗೆ?

- ಕೋ ವಿನ್ (Co-WIN) ಅಥವಾ ಆರೋಗ್ಯ ಸೇತು ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು
- cowin.gov.inಗೆ ಲಾಗಿನ್ ಆಗಲೂಬಹುದು
- ಮೊಬೈಲ್ ದೂರವಾಣಿ ಸಂಖ್ಯೆ ದಾಖಲಿಸಬೇಕು
- ಮೊಬೈಲ್‌ಗೆ ಬರುವ ಒಟಿಪಿ ಬಳಸಿ ಖಾತೆ ಸೃಷ್ಟಿಸಬೇಕು
- ಹೆಸರು, ವಯಸ್ಸು, ಲಿಂಗ ವಿವರ ದಾಖಲಿಸಿ, ಗುರುತಿನ ಚೀಟಿಯೊಂದನ್ನು ಅಪ್‌ಲೋಡ್ ಮಾಡಬೇಕು
- 45 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಬೇರೆ ಕಾಯಿಲೆಗಳಿದ್ದರೆ ವೈದ್ಯರ ಪ್ರಮಾಣಪತ್ರ ಲಗತ್ತಿಸಬೇಕು.
- ಲಸಿಕೆ ಹಾಕಿಸಿಕೊಳ್ಳುವ ಕೇಂದ್ರದ ಹೆಸರು, ದಿನಾಂಕ ನಮೂದಿಸಬೇಕು
- ಒಂದು ಮೊಬೈಲ್ ಸಂಖ್ಯೆಯಲ್ಲಿ ನಾಲ್ಕು ಜನ ಹೆಸರು ನೋಂದಾಯಿಸಬಹುದು
- ಮೊಬೈಲ್ ಹೊಂದಿಲ್ಲದವರು ಬೇರೆ ಮಾರ್ಗಗಳ ಮೂಲಕವೂ ಹೆಸರು ನೋಂದಾಯಿಸಬಹುದು
- 1507ಗೆ ಕರೆ ಮಾಡಿ ನೋಂದಾಯಿಸಬಹುದು
- ಕೋವಿಡ್ ಲಸಿಕೆ ಹಾಕುವ ಎಲ್ಲ ಖಾಸಗಿ ಆಸ್ಪತ್ರೆಗಳ ವಿವರವನ್ನೂ ವೆಬ್‌ಸೈಟ್‌ನಲ್ಲಿ ದಾಖಲಿಸಲಾಗಿದೆ.
- ಇದಕ್ಕಾಗಿ https://www.mohfw.gov.in/pdf/CGHSEmphospitals.xlsx ಅಥವಾ https://www.mohfw.gov.in/pdf/PMJAYPRIVATEHOSPITALSCONSOLIDATED.xlsx ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

938 ಮಂದಿ ಹಿರಿಯರಿಗೆ ಲಸಿಕೆ

ಬೆಂಗಳೂರು: ಹಿರಿಯ ನಾಗರಿಕರು ಹಾಗೂ ಅನ್ಯರೋಗಗಳಿಂದ ಬಳಲುತ್ತಿರುವ 45 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನ ಸೋಮವಾರ ಆರಂಭವಾಯಿತು. ಬಿಬಿಎಂಪಿ ವ್ಯಾಪ್ತಿಯಲ್ಲಿ ಈ ವರ್ಗದಡಿ ಲಸಿಕೆ ಪಡೆಯಲು ಅರ್ಹರಾದ 938 ಮಂದಿ ಮೊದಲ ದಿನವೇ ಲಸಿಕೆ ಪಡೆದರು.

ಈ ಹಿಂದೆ ಒಮ್ಮೆ ಲಸಿಕೆ ಪಡೆದಿದ್ದ 127 ಆರೋಗ್ಯ ಕಾರ್ಯಕರ್ತರು ಸೋಮವಾರ ಎರಡನೇ ಡೋಸ್ ಪಡೆದರು. ಮೂವರು ಆರೋಗ್ಯ ಕಾರ್ಯಕರ್ತರು ಮೊದಲ ಬಾರಿ ಲಸಿಕೆ ಪಡೆದರು.

ಒಟ್ಟು 23 ಕಡೆ ಲಸಿಕೆ ಕೇಂದ್ರಗಳನ್ನು ಆರಂಭಿಸಲು ಬಿಬಿಎಂಪಿ ಉದ್ದೇಶಿಸಿತ್ತು. ಕಾರಣಾಂತರಗಳಿಂದ 17 ಕೇಂದ್ರಗಳು ಮಾತ್ರ ಕಾರ್ಯನಿರ್ವಹಿಸಿದವು. ಸೋಮವಾರ ಒಟ್ಟು 1,063 ಮಂದಿಗೆ ಕೋವಿಡ್ ಲಸಿಕೆ ಹಾಕಲಾಯಿತು.

ಮೊದಲ ದಿನ ಗೊಂದಲ

ಬೆಂಗಳೂರು: ಹಿರಿಯ ನಾಗರಿಕರಿಗೆ ಹಾಗೂ 45 ವರ್ಷ ಮೇಲ್ಪಟ್ಟು ಅನ್ಯ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನದ ಮೊದಲ ದಿನ ಲಸಿಕೆ ಕೇಂದ್ರಗಳ ಸಿಬ್ಬಂದಿ ಹಾಗೂ ಲಸಿಕೆ ಪಡೆಯಲು ಬಂದವರು ಕೆಲವು ಗೊಂದಲಗಳಿಗೂ ಸಾಕ್ಷಿಯಾಗಬೇಕಾಯಿತು.

ಕೋವಿನ್ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿದ್ದ ಕೆಲವು ಹಿರಿಯ ನಾಗರಿಕರು ಸಂಬಂಧಪಟ್ಟ ಲಸಿಕಾ ಕೇಂದ್ರಗಳಿಗೆ ತೆರಳಿದಾಗ ಅಲ್ಲಿನ ಕಂಪ್ಯೂಟರ್‌ನಲ್ಲಿ ಅವರ ಹೆಸರು ಕಂಡುಬರಲೇ ಇಲ್ಲ. ಈ ಸಮಸ್ಯೆ ಅರಿವಿಗೆ ಬರುತ್ತಿದ್ದಂತೆಯೇ ಎಚ್ಚೆತ್ತ ಬಿಬಿಎಂಪಿ ಅಧಿಕಾರಿಗಳು ಅಧಿಕೃತ ದಾಖಲೆ ಹೊಂದಿದ್ದವರಿಗೆ ಲಸಿಕೆ ನೀಡಲು ವ್ಯವಸ್ಥೆ ಮಾಡಿದರು.

ಇನ್ನೂ ಕೆಲವು ಕಡೆ ಪೋರ್ಟಲ್‌ನಲ್ಲಿ ಮೊದಲೇ ಹೆಸರು ನೋಂದಾಯಿಸಿದ್ದವರ ವಿವರಗಳು ಕಂಪ್ಯೂಟರ್‌ನಲ್ಲಿ ಕಾಣಿಸಿದರೂ ಅವರು ನೋಂದಾಯಿಸಿದ್ದ ಮೊಬೈಲ್ ನಂಬರ್‌ಗೆ ಒಟಿಪಿ ಬಾರದ ಕಾರಣ ಸಮಸ್ಯೆ ಎದುರಾಯಿತು.

ಲಸಿಕೆ ಹಾಕುವ ಸಿಬ್ಬಂದಿಯ ಹೆಸರನ್ನು ಮೊದಲೇ ಕಂದ್ರೀಕೃತ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಆ ಕೇಂದ್ರದಲ್ಲಿ ಯಾರಿಗೆ ಲಸಿಕೆ ನೀಡಲಾಗುವವರ ವಿವರವು ಕಂಪ್ಯೂಟರ್ ಪರದೆ ಮೇಲೆ ಕಾಣಿಸಿಕೊಳ್ಳಬೇಕೆಂದರೆ ಅವರು ಅಲ್ಲಿ ಖುದ್ದು ಹಾಜರಿಬೇಕು. ಆದರೆ, ಕೆಲವು ಕೇಂದ್ರಗಳಲ್ಲಿ ಸಿಬ್ಬಂದಿಯನ್ನು ಕೊನೆ ಕ್ಷಣದಲ್ಲಿ ಬದಲಾಯಿಸಿದ್ದರಿಂದ ಸಮಸ್ಯೆ ಎದುರಾಯಿತು. ಪರ್ಯಾಯ ಸಿಬ್ಬಂದಿಯ ಹೆಸರು ವಿವರಗಳನ್ನು ಕೇಂದ್ರೀಕೃತ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಸಮಯ ಹಿಡಿಯಿತು. ಹಾಗಾಗಿ ಲಸಿಕೆ ಪಡೆಯಲು ಬಂದವರು ಕಾಯಬೇಕಾಯಿತು. ಕೆಲವು ಕೇಂದ್ರಗಳಲ್ಲಿ ಬದಲಿ ಸಿಬ್ಬಂದಿಯ ವಿವರವನ್ನು ಅಪ್‌ಲೋಡ್ ಮಾಡಿದ ಬಳಿಕವೂ ಲಸಿಕೆ ಪಡೆಯುವವರ ವಿವರಗಳು ಕಂಪ್ಯೂಟರ್‌ನಲ್ಲಿ ಕಾಣಿಸಿಕೊಳ್ಳಲಿಲ್ಲ.

ದಾಸರಹಳ್ಳಿ ವಲಯದ ಎರಡು ಆಸ್ಪತ್ರೆಗಳು ಸೇರಿದಂತೆ ಕೆಲವು ಆಸ್ಪತ್ರೆಗಳು ಅನ್ಯರೋಗಗಳನ್ನು ಹೊಂದಿದ್ದವರಿಗೆ ಲಸಿಕೆ ನೀಡಲು ನಿರಾಕರಿಸಿದವು. ಬೇರೆ ಕಾಯಿಲೆ ಇದ್ದವರು ಲಸಿಕೆ ಪಡೆದಾಗ ಅವರ ಆರೋಗ್ಯದಲ್ಲಿ ಏರುಪೇರಾದರೆ ಚಿಕಿತ್ಸೆ ನೀಡಲು ತಮ್ಮಲ್ಲಿ ಸೂಕ್ತ ಸೌಕರ್ಯಗಳಿಲ್ಲ ಎಂಬುದು ಆ ಆಸ್ಪತ್ರೆಯವರ ವಾದ.

'ಮೊದಲ ದಿನ ಕೆಲವೊಂದು ಗೊಂದಲಗಳು ಎದುರಾಗಬಹುದು ಎಂಬುದನ್ನು ಮೊದಲೇ ನಿರೀಕ್ಷಿಸಿದ್ದೆವು. ಏನೆಲ್ಲ ಸಮಸ್ಯೆಗಳು ಎದುರಾಗಿವೆ ಎಂಬ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದ್ದೇವೆ. ಪೋರ್ಟಲ್‌ನಲ್ಲೂ ಕೆಲವು ಮಾರ್ಪಾಡು ಮಾಡುವಂತೆ ಕೋರಿದ್ದೇವೆ. ಒಂದೆರಡು ದಿನಗಳಲ್ಲಿ ಎಲ್ಲ ಸಮಸ್ಯೆಗಳು ಬಗೆಹರಿಯುವ ನಿರೀಕ್ಷೆ ಇದೆ' ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಹಾಗೂ ಸುಧಾಮೂರ್ತಿ ದಂಪತಿ ಬೊಮ್ಮಸಂದ್ರದ ನಾರಾಯಣ ಹೆಲ್ತ್ ಸಿಟಿಯಲ್ಲಿ ಕೋವಿಡ್ ಲಸಿಕೆ ಪಡೆದರು.



ಕೋವಿಡ್ ಲಸಿಕೆ ಪಡೆದ 102ರ ಹಿರಿಯಜ್ಜ

ಬೆಂಗಳೂರು: ರಾಜ್ಯದಾದ್ಯಂತ ಸಾರ್ವಜನಿಕರಿಗೆ ಲಸಿಕೆ ನೀಡುವ ಅಭಿಯಾನ (2.0) ಸೋಮವಾರದಿಂದ ಆರಂಭವಾಯಿತು. ಮೊದಲ ದಿನ ಹಿರಿಯರಿಗೆ ಅಂದರೆ, 45 ವರ್ಷ ಮೇಲ್ಪಟ್ಟವರಿಗೆ ಆದ್ಯತೆ ನೀಡಲಾಗಿದ್ದು, 1950 ಜನ ಲಸಿಕೆ ಪಡೆದರು.

ನಿವೃತ್ತ ಸೇನಾಧಿಕಾರಿ 102 ವರ್ಷದ ಕೆ.ಎನ್. ಸುಬ್ರಮಣಿಯನ್ ನಗರದ ಹೆಬ್ಬಾಳದಲ್ಲಿರುವ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ಲಸಿಕೆ ಹಾಕಿಸಿಕೊಳ್ಳುವ ಮೂಲಕ, ಈ ಹಂತದಲ್ಲಿ ಲಸಿಕೆ ಪಡೆದ ಮೊದಲ ಹಿರಿಯ ನಾಗರಿಕ ಎನಿಸಿಕೊಂಡರು.

ರಾಜ್ಯದಲ್ಲಿ 45 ವರ್ಷ ಮೇಲ್ಪಟ್ಟ 374 ಜನ ಹಾಗೂ 60 ವರ್ಷ ಮೇಲ್ಪಟ್ಟ 1,576 ಹಿರಿಯ ನಾಗರಿಕರು ಲಸಿಕೆ ಹಾಕಿಸಿಕೊಂಡರು. ರಾಜ್ಯದ 30 ಜಿಲ್ಲೆಗಳ ತಾಲ್ಲೂಕು ಮತ್ತು ಜಿಲ್ಲಾಸ್ಪತ್ರೆ ಹಾಗೂ ಪ್ರತಿ ಜಿಲ್ಲೆಯ ಎರಡು ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಅಭಿಯಾನ ನಡೆಸಲು ಆರೋಗ್ಯ ಇಲಾಖೆ ಸಿದ್ಧತೆ ಮಾಡಿಕೊಂಡಿತ್ತು. ಆದರೆ, ಕೆಲವೆಡೆ ಕೋವಿನ್ ಪೋರ್ಟಲ್ ಸಂಪೂರ್ಣ ಸ್ಥಗಿತಗೊಂಡು ಲಸಿಕೆ ವಿತರಣೆ ಕಾರ್ಯ ನಡೆಯಲಿಲ್ಲ.

ನೋಂದಾಯಿಸದವರಿಗೆ ನಿರಾಸೆ: ಕೋವಿನ್ ಪೋರ್ಟಲ್ ಹಾಗೂ ಆರೋಗ್ಯ ಸೇತು ಆ್ಯಪ್‌ನಲ್ಲಿ ನೋಂದಾಯಿಸಿಕೊಂಡಿದ್ದ ಹಿರಿಯ ನಾಗರಿಕರು ಸಮೀಪದ ಲಸಿಕಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡಿದ್ದರು. ಸಂಜೆ 6ರವರೆಗೆ ಲಸಿಕೆ ಪಡೆಯಲು ಅವಕಾಶವಿತ್ತು. ನೋಂದಾಯಿಸಿಕೊಳ್ಳದೆ ಬಂದವರು ನಿರಾಸೆಗೆ ಒಳಗಾಗಬೇಕಾಯಿತು.



ಬೆಂಗಳೂರಿನ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ಸೋಮವಾರ ಕೋವಿಡ್ ಲಸಿಕೆ ಹಾಕಿಸಿಕೊಂಡ 102 ವರ್ಷದ ಕೆ.ಎನ್. ಸುಬ್ರಮಣಿಯನ್

ನೋಂದಣಿ ಆರಂಭವಾದ ಮೂರು ಗಂಟೆಗಳ ನಂತರ, ಮಧ್ಯಾಹ್ನ 12 ಗಂಟೆಗೆ ಲಸಿಕೆ ನೀಡುವ ಪ್ರಕ್ರಿಯೆ ಆರಂಭವಾಯಿತು. ಕೆಲವೆಡೆ ತಾಂತ್ರಿಕ ಸಮಸ್ಯೆ ಎದುರಾಯಿತು.

ಮೈಸೂರಿನಲ್ಲಿ ಹೆಚ್ಚು: 45ರಿಂದ 60 ವರ್ಷದೊಳಗಿನವರ ಪೈಕಿ ಮೈಸೂರಿನಲ್ಲಿ ಅತ್ಯಧಿಕ ಅಂದರೆ, 298 ಹಿರಿಯರು ಲಸಿಕೆ ಪಡೆದರೆ, ಬೆಂಗಳೂರು ನಗರ ಜಿಲ್ಲೆಯಲ್ಲಿ 245 ಜನ ಲಸಿಕೆ ಹಾಕಿಸಿಕೊಂಡರು. ಬಳ್ಳಾರಿಯಲ್ಲಿ 215, ಉತ್ತರ ಕನ್ನಡದಲ್ಲಿ 138, ರಾಯಚೂರಿನಲ್ಲಿ 83 ಜನ ಲಸಿಕೆ ಪಡೆದರೆ, ಉಳಿದ ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ಜನ ಮಾತ್ರ ಲಸಿಕೆ ಹಾಕಿಸಿಕೊಂಡರು.

ಕೋವಿಡ್: 324 ಮಂದಿ ಗುಣಮುಖ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 349 ಮಂದಿಗೆ ಕೋವಿಡ್ ದೃಢಪಟ್ಟಿದ್ದು, 324 ಜನ ಗುಣಮುಖರಾಗಿದ್ದಾರೆ. ಈವರೆಗೆ ಒಟ್ಟಾರೆ 9.33 ಲಕ್ಷ ಮಂದಿ ಕೋವಿಡ್‌ನಿಂದ ಚೇತರಿಸಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ ನಾಲ್ವರು ಮತ್ತು ಮೈಸೂರಿನಲ್ಲಿ ಒಬ್ಬರು ಸೋಮವಾರ ಸಾವಿಗೀಡಾಗುವ ಮೂಲಕ ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 12,336ಕ್ಕೆ ಏರಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಸತತ ಎರಡನೇ ದಿನವೂ ಹೆಚ್ಚಾಗಿದ್ದು, 5,824 ಮಂದಿ ಆಸ್ಪತ್ರೆ ಸೇರಿದಂತೆ ಮನೆ ಹಾಗೂ ಇತರೆಡೆ ಆರೈಕೆ ಮತ್ತು ಚಿಕಿತ್ಸೆಯಲ್ಲಿದ್ದಾರೆ. 118 ಮಂದಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

60 ಸಾವಿರ ಪರೀಕ್ಷೆ: ಕೋವಿಡ್ ಪರೀಕ್ಷೆಯ ವೇಗ ಹೆಚ್ಚಿಸಲಾಗಿದ್ದು, ಸೋಮವಾರ 1921 ಮಂದಿ ಆ್ಯಂಟಿಜೆನ್ ಹಾಗೂ 58,206 ಮಂದಿಗೆ ಆರ್‌ಟಿ ಪಿಸಿಆರ್ ಪರೀಕ್ಷೆ ನಡೆಸಲಾಗಿದೆ. ಈವರೆಗೆ ಒಟ್ಟು 1.88 ಕೋಟಿ ಜನ ಕೋವಿಡ್ ಪರೀಕ್ಷೆಗೆ ಒಳಗಾಗಿದ್ದಾರೆ ಎಂದು ಆರೋಗ್ಯ ಇಲಾಖೆ ಹೇಳಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಬಂದ ದೂರಿಗೆ ಆರೋಗ್ಯ ಇಲಾಖೆ ಸ್ಪಷ್ಟನೆ

2ನೇ ಹಂತದ ಲಸಿಕೆ: ಆ್ಯಪ್ ಮೂಲಕ ನೋಂದಣಿ ಇಲ್ಲ

ನವದೆಹಲಿ (ಪಿಟಿಐ): ಕೋವಿಡ್–19 ಎರಡನೇ ಹಂತದ ಲಸಿಕಾ ಅಭಿಯಾನದಲ್ಲಿ ದೇಶದ ಕೆಲವು ಆಸ್ಪತ್ರೆಗಳ ಮುಂದೆ ಲಸಿಕೆಗಾಗಿ ಉದ್ದನೆಯ ಸಾಲು ಕಂಡುಬಂದಿದೆ. ಈ ನಡುವೆ, ಆನ್‌ಲೈನ್‌ನಲ್ಲಿ ಹೆಸರು ನೋಂದಾಯಿಸಲು ಸಾಧ್ಯವಾಗುತ್ತಿಲ್ಲ ಎಂದು ಹಲವರು ಸಾಮಾಜಿಕ ಮಾಧ್ಯಮಗಳಲ್ಲಿ ದೂರಿದ್ದರಿಂದ, ಆರೋಗ್ಯ ಇಲಾಖೆ ಕೆಲವು ಸ್ಪಷ್ಟನೆಗಳನ್ನು ಸಹ ನೀಡಿದೆ.

'ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ 'ಕೋ–ವಿನ್' ಆ್ಯಪ್, ಲಸಿಕೆಯ ನಿರ್ವಹಣೆ ಮಾಡುವವರಿಗೆ ಸೀಮಿತವಾದದ್ದು. ಅದರ ಮೂಲಕ ಹೆಸರು ನೋಂದಾಯಿಸಲು ಅವಕಾಶ ಇರುವುದಿಲ್ಲ' ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.


ಕೋವಿಡ್–19 ಲಸಿಕೆ ಪಡೆಯಲು ಮುಂಬೈಯ ಲಸಿಕಾ ಕೇಂದ್ರವೊಂದರಲ್ಲಿ ಹಿರಿಯ ನಾಗರಿಕರು ಸೋಮವಾರ ಸಾಲುಗಟ್ಟಿ ನಿಂತಿದ್ದರು –ಪಿಟಿಐ ಚಿತ್ರ

ಸೋಮವಾರ ಬೆಳಿಗ್ಗೆ 9 ಗಂಟೆಯಿಂದ, ಕೋವಿನ್ ಪೋರ್ಟಲ್ ಮೂಲಕ ಲಸಿಕೆಗಾಗಿ ಹೆಸರು ನೋಂದಾಯಿಸಲು ಅವಕಾಶ ನೀಡಲಾಗಿತ್ತು. ಆದರೆ ಹಲವರು ಕೋ–ವಿನ್ ಆ್ಯಪ್ ಮೂಲಕ ಹೆಸರು ನೋಂದಾಯಿಸಲು ಪ್ರಯತ್ನಿಸಿದ್ದರು. ಅದು ಸಾಧ್ಯವಾಗದಿದ್ದಾಗ ಸಾಮಾಜಿಕ ಮಾಧ್ಯಮಗಳ ಮೂಲಕ ಸಮಸ್ಯೆಗಳನ್ನು ಹೇಳಿಕೊಂಡಿದ್ದರು. ಇದಾದ ನಂತರ ಸಚಿವಾಲಯ ಈ ಸ್ಪಷ್ಟನೆ ನೀಡಿದ್ದಲ್ಲದೆ ನೋಂದಣಿ ಮಾಡುವ ವಿಧಾನದ ಬಗ್ಗೆಯೂ ಮಾಹಿತಿ ನೀಡಿದೆ.

ನೋಂದಣಿ ಪ್ರಕ್ರಿಯೆಯನ್ನು www.cowin.gov.in. ಪೋರ್ಟಲ್ ಮೂಲಕ ಮಾಡಬಹುದು. ಫಲಾನುಭವಿಗಳು ಈ ಪೋರ್ಟಲ್ ಮೂಲಕ ತಮಗೆ ಬೇಕಾದ ಕೇಂದ್ರ ಮತ್ತು ಲಭ್ಯತೆಯ ಆಧಾರದ ಮೇಲೆ ಲಸಿಕೆ ಹಾಕಿಸಲು ಸಮಯವನ್ನು ನಿಗದಿ ಮಾಡಿಕೊಳ್ಳಬಹುದು.

ದಪ್ಪ ಸೂಜಿ ಇಟ್ಟದ್ದೀರಾ?: ಮೋದಿ

ಮೋದಿ ಅವರಿಗೆ ಪುದುಚೇರಿ ಮೂಲದ ನರ್ಸ್ ನಿವೇದಾ ಅವರು ಲಸಿಕೆ ನೀಡಿದರು. ಅವರ ಜತೆಗೆ ಕೇರಳದ ರೋಸಮ್ಮ ಅನಿಲ್ ಸಹ ಇದ್ದರು.

ಲಸಿಕೆ ಪಡೆಯುವುದಕ್ಕೂ ಮುನ್ನ ಮೋದಿ ಅವರು ನರ್ಸ್‌ಗಳ ಹೆಸರು ಹಾಗೂ ಹುಟ್ಟೂರಿನ ಬಗ್ಗೆ ವಿಚಾರಿಸಿ, ಅವರೊಡನೆ ಮಾತಿಗಿಳಿದರು. 'ರಾಜಕಾರಣಿಗಳ ಚರ್ಮ ದಪ್ಪ ಇರುತ್ತೆ, ಅವರಿಗಾಗಿ ನೀವು ಪ್ರತ್ಯೇಕ, ಪ್ರಾಣಿಗಳಿಗೆ ಬಳಸುವ ದಪ್ಪ ಸೂಜಿಯನ್ನೇನಾದರೂ 'ಇಟ್ಟಿದ್ದೀರಾ' ಎಂದು ಹಾಸ್ಯ ದಾಟಿಯಲ್ಲಿ ಕೇಳಿದರು. ಅವರ ಪ್ರಶ್ನೆಯನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳದ ನರ್ಸ್‌ಗಳು ಮೊದಲು 'ಇಲ್ಲ' ಎಂದು ಉತ್ತರಿಸಿದರು. ಒಂದೆರಡು ಕ್ಷಣದ ಬಳಿಕ ಪ್ರಶ್ನೆ ಅರ್ಥವಾಗಿ ಜೋರಾಗಿ ನಕ್ಕರು.

'ಲಸಿಕೆ ಹಾಕಿಸಿಕೊಂಡ ಆಸ್ಪತ್ರೆಯಿಂದ ಮರಳುವುದಕ್ಕೂ ಮುನ್ನ ಪುನಃ ನಮ್ಮ ಬಳಿಗೆ ಬಂದು 'ವಣಕ್ಕಂ' ಎಂದು ಹೇಳಿ ಹೋದರು' ಎಂದು ನಿವೇದಾ ಅವರು ತಿಳಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ವರ್ಲ್ಡೋಮೀಟರ್, ಪಿಟಿಐ

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ / ಒಟ್ಟು ಸೋಂಕಿತರು	11.47 ಕೋಟಿ ▲	1.111 ಕೋಟಿ	9,51,600 ▲
ಸಕ್ರಿಯ ಪ್ರಕರಣ	2.18 ಕೋಟಿ ▼	1.64ಲಕ್ಷ ▼	5,824 ▲
ಗುಣಮುಖ	9.03ಕೋಟಿ ▲	1.07ಕೋಟಿ	9,33,421 ▲
ಸಾವು	25.44ಲಕ್ಷ ▲	1.57ಲಕ್ಷ	12,336 ▲
ದಿನದ ವರದಿ: ಹೊಸ ಪ್ರಕರಣ	3.88ಲಕ್ಷ ▲	15,614 ▲	349 ▼
ದಿನದ ವರದಿ: ಗುಣಮುಖ	3.12ಲಕ್ಷ ▼	11,291 ▲	324 ▼
ದಿನದ ವರದಿ: ಸಾವು	8,311 ▲	108 ▲	05

118 ಐಸಿಯುನಲ್ಲಿ ಇರುವವರು (ರಾಜ್ಯ)

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ) — ವಿಶ್ವ

ಅಮೆರಿಕ	ಬ್ರೆಜಿಲ್	ಫ್ರಾನ್ಸ್
49,433 ▼	34,027 ▼	19,952 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ) — ವಿಶ್ವ

ಅಮೆರಿಕ	ಫ್ರಾನ್ಸ್	ಬ್ರಿಟನ್
90.35 ▼	33.94	11.48 ▼

ಎಲ್ಲಿ ಹೆಚ್ಚು ಸಾವು — ಭಾರತ

ರಾಜ್ಯ	ಸಾವು
ಮಹಾರಾಷ್ಟ್ರ	52,184 ▲
ತಮಿಳುನಾಡು	12,496
ದೆಹಲಿ	10,910 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ) — ಭಾರತ

ರಾಜ್ಯ	ಪ್ರಕರಣ
ಮಹಾರಾಷ್ಟ್ರ	21.61 ▲
ಕೇರಳ	10.61 ▲
ಆಂಧ್ರಪ್ರದೇಶ	8.89

ಪ್ರಜಾವಾಣಿ ಗ್ರಾಫಿಕ್ಸ್

ನಾಳೆ 'ಮಹಾ ಕುಂಭಾಭಿಷೇಕ'

ಬೆಂಗಳೂರು: ಶ್ರೀರಾಮ ಸೇವಾ ಮಂಡಳಿಯು ರಾಜಾಜಿನಗರದ ಶ್ರೀರಾಮ ಮಂದಿರ ದೇವಸ್ಥಾನದ ರಾಜಗೋಪುರ ಹಾಗೂ ಗರ್ಭಗುಡಿ ಗೋಪುರಗಳ ಮಹಾಕುಂಭಾಭಿಷೇಕವನ್ನು ಮಾ.3ರಂದು ಬೆಳಿಗ್ಗೆ 10.30ಕ್ಕೆ ಹಮ್ಮಿಕೊಂಡಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಂಡಳಿಯ ಸ್ವಾಗತ ಸಮಿತಿಯ ವ್ಯವಸ್ಥಾಪಕ ಕೆ.ಎಸ್.ಶ್ರೀಧರ್,'ಮೂರು ಗರ್ಭಗುಡಿಗಳ ಮುಂಭಾಗಕ್ಕೆ ಹಾಗೂ ಕಂಬಗಳಿಗೆ ತಾಮ್ರ ಲೇಪನ ಮತ್ತು ರಾಜಗೋಪುರ, ಗರ್ಭಗುಡಿ ಗೋಪುರಗಳಿಗೆ ಬಣ್ಣದ ಲೇಪನ ಮಾಡಲಾಗಿದೆ. ಮಾ.2ರಂದು ಬೆಳಿಗ್ಗೆ 9 ಗಂಟೆಗೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ದೀಪ ಬೆಳಗಿಸುವ ಮೂಲಕ ಕುಂಭಾಭಿಷೇಕಕ್ಕೆ ಚಾಲನೆ ನೀಡಲಿದ್ದಾರೆ' ಎಂದರು.

ಸಮಿತಿಯ ಅಧ್ಯಕ್ಷ ಎಚ್.ಎಸ್. ಸೋಮಶೇಖರ್, 'ಕುಂಭಾಭಿಷೇಕದ ಅಂಗವಾಗಿ ಶ್ರೀರಾಮನ ವೇಷಭೂಷಣ ಸ್ಪರ್ಧೆಯೂ ಇರಲಿದೆ. ಕಾರ್ಯಕ್ರಮಕ್ಕೆ ಹೆಚ್ಚು ಜನರು ಸೇರುವ ನಿರೀಕ್ಷೆ ಇರುವುದರಿಂದ ಎಲ್ಲ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದರು.

ಉದ್ಯೋಗಿಗಳು ಗುಲಾಮರಾಗಲಿದ್ದಾರೆ– ಹನುಮಂತಯ್ಯ

'ಖಾಸಗೀಕರಣ: ಯಾರಿಗೂ ಮೀಸಲಾತಿ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ ಕೊಡಲಾಗುತ್ತಿದೆ. ಈಗ ಎಲ್ಲ ವರ್ಗದವರು ಮೀಸಲಾತಿಗಾಗಿ ಹೋರಾಡುತ್ತಿದ್ದಾರೆ. ಖಾಸಗೀಕರಣವಾದರೆ ಯಾವ ವರ್ಗದವರಿಗೂ ಮೀಸಲಾತಿ ಸೌಲಭ್ಯ ಇರುವುದಿಲ್ಲ' ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಹೇಳಿದರು.

ಖಾಸಗೀಕರಣ ವಿರೋಧಿ ವೇದಿಕೆಯು ಸಾರ್ವಜನಿಕ ರಂಗ ಮತ್ತು ಅಭಿವೃದ್ಧಿ ಕುರಿತು ಸೋಮವಾರ ಹಮ್ಮಿಕೊಂಡಿದ್ದ ದುಂಡು ಮೇಜಿನ ಸಭೆಯಲ್ಲಿ ಮಾತನಾಡಿದ ಅವರು, 'ಸಾರ್ವಜನಿಕ ಸಂಸ್ಥೆಗಳನ್ನು ಖಾಸಗಿಯವರಿಗೆ ಕೊಟ್ಟು, ಗುತ್ತಿಗೆ ಕಾರ್ಮಿಕ ಪದ್ಧತಿ ತರುತ್ತಾರೆ. ಆಗ ಕಾರ್ಮಿಕರು ಗುಲಾಮರಂತಾಗಲಿದ್ದಾರೆ' ಎಂದರು.

'ಆತ್ಮವಿಶ್ವಾಸದಿಂದ ದೇಶ ಕಟ್ಟಿ ಎಂದು ಪ್ರಧಾನಿ ಹೇಳುತ್ತಾರೆ. ಮತ್ತೊಂದೆಡೆ ಲಾಭದಲ್ಲಿರುವ ಸರ್ಕಾರಿ ಸಂಸ್ಥೆಗಳನ್ನು ಮಾರುವ ಮೂಲಕ ತದ್ವಿರುದ್ಧ ನೀತಿ ಅನುಸರಿಸುತ್ತಿದ್ದಾರೆ' ಎಂದು ಟೀಕಿಸಿದರು.


ಕಾರ್ಯಕ್ರಮದಲ್ಲಿ ಬಿ.ಟಿ. ಲಲಿತಾ ನಾಯಕ್ ಮತ್ತು ಖಾಸಗೀಕರಣ ವಿರೋಧಿ ಸಮಿತಿ ಸಂಚಾಲಕಿ ಎಸ್. ವರಲಕ್ಷ್ಮಿ ಚರ್ಚಿಸಿದರು. ಎಲ್. ಹನುಮಂತಯ್ಯ ಇದ್ದಾರೆ

'ಧರ್ಮದ ಹುಚ್ಚು ಹಿಡಿಸಲಾಗುತ್ತಿದೆ'

'ದಲಿತರು, ಶೂದ್ರರು ಮತ್ತು ಕಾರ್ಮಿಕರೇ ಖಾಸಗೀಕರಣದ ವಿರುದ್ಧ, ಸರ್ಕಾರದ ನೀತಿಗಳ ವಿರುದ್ಧ ಮಾತನಾಡುತ್ತಿಲ್ಲ. ಅವರಿಗೆಲ್ಲ ಧರ್ಮದ ಹುಚ್ಚು ಹಿಡಿಸಲಾಗುತ್ತಿದೆ' ಎಂದು ಚಿಂತಕಿ ಬಿ.ಟಿ. ಲಲಿತಾ ನಾಯಕ್ ಟೀಕಿಸಿದರು.

ವೇದಿಕೆಯ ಉಪಸಂಚಾಲಕರಾದ ಮೀನಾಕ್ಷಿ ಸುಂದರಂ ಮಾತನಾಡಿದರು. ಚಲನಚಿತ್ರ ನಿರ್ದೇಶಕ ಬಿ.ಸುರೇಶ್, 'ಪ್ರಧಾನಿ ನರೇಂದ್ರ ಮೋದಿ ಪದೇ ಪದೇ ಸುಳ್ಳು ಹೇಳುತ್ತಿದ್ದಾರೆ. ಇಂತಹ ಸುಳ್ಳುಗಾರ ಮೋದಿ ಬಗ್ಗೆ ಜನರಲ್ಲಿ ಮಾತ್ರವಲ್ಲದೆ, ಮಕ್ಕಳಲ್ಲಿಯೂ ಜಾಗೃತಿ ಮೂಡಿಸಬೇಕಾಗಿದೆ' ಎಂದರು.

ರೈತ ಮುಖಂಡರಾದ ಜೆ.ಸಿ. ಬಯ್ಯಾರೆಡ್ಡಿ, ಬಡಗಲಪುರ ನಾಗೇಂದ್ರ, ಕಾರ್ಮಿಕ ಮುಖಂಡರಾದ ಆರ್. ಎಚ್. ಲಕ್ಷ್ಮೀಪತಿ, ಕರ್ನಾಟಕ ರಣಧೀರ ಪಡೆಯ ಬೈರಪ್ಪ ಹರೀಶ್‌ಕುಮಾರ್ ಮಾತನಾಡಿದರು.

ಸಾವಿರ ಮಂದಿಗೆ ಲಸಿಕೆ ಪ್ರಾಯೋಜಕತ್ವ: ಪ್ರಮೋದಾದೇವಿ

ಮೈಸೂರು: ಕೋವಿಡ್–19 ಲಸಿಕೆ ಪಡೆಯಲಾಗದ ಹಾಗೂ ಆರ್ಥಿಕವಾಗಿ ಹಿಂದುಳಿದ ಸಾವಿರ ಹಿರಿಯ ನಾಗರಿಕರಿಗೆ ನೆರವು ನೀಡಲಿದ್ದು, ಲಸಿಕೆ ಕೊಡಿಸಲಾಗುವುದು ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತಿಳಿಸಿದರು.


ಪ್ರಮೋದಾದೇವಿ

'ಸಾವಿರ ಮಂದಿ ಜೆಎಸ್‌ಎಸ್ ಆಸ್ಪತ್ರೆಗೆ ಬಂದು ನೋಂದಣಿ ಮಾಡಿಕೊಂಡು ಲಸಿಕೆ ತೆಗೆದುಕೊಳ್ಳಬಹುದು. ಅದಕ್ಕೆ ತಗಲುವ ಶುಲ್ಕವನ್ನು (₹ 2.5 ಲಕ್ಷ) ಭರಿಸಲಾಗುವುದು ಎಂದು ಹೇಳಿದರು. ಅವರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸೋಮವಾರ ಮೂರನೇ ಹಂತದ ಕೋವಿಡ್ ಲಸಿಕೆ ಅಭಿಯಾನದಲ್ಲಿ ಪಾಲ್ಗೊಂಡು ಮಾಧ್ಯಮದವರೊಂದಿಗೆ ಮಾತನಾಡಿದರು.

'60 ವರ್ಷ ಮೀರಿದ ಹಿರಿಯರು, ಅನಾರೋಗ್ಯವಿರುವ 45 ವರ್ಷ ತುಂಬಿದವರು ಲಸಿಕೆ ತೆಗೆದುಕೊಳ್ಳುತ್ತಿದ್ದಾರೆ. ನನ್ನ ಸರದಿ ಬಂದಾಗ ನಾನು ಲಸಿಕೆ ಹಾಕಿಸಿಕೊಳ್ಳುತ್ತೇನೆ' ಎಂದರು. ದೇಶ ಬೇಗನೇ ಕೋವಿಡ್‌ನಿಂದ ಮುಕ್ತವಾಗಲಿ' ಎಂದು ಪ್ರಮೋದಾದೇವಿ ಒಡೆಯರ್ ಆಶಿಸಿದರು.

ಸುಧಾಕರ್ ಕೊರೊನಾ ಪೀಡಿತ ವ್ಯಕ್ತಿ: ಆಯನೂರು

ಹೊನ್ನಾಳಿ: 'ಸಚಿವರಲ್ಲಿ ಡಾ.ಸುಧಾಕರ್ ಕೊರೊನಾ ಪೀಡಿತ ವ್ಯಕ್ತಿ. ಅದಕ್ಕಾಗಿಯೇ ರೇಣುಕಾಚಾರ್ಯ ಇಂದು ಅವರ ವಿರುದ್ಧ ಧ್ವನಿಯೆತ್ತಿದ್ದಾರೆ. ಸುಧಾಕರ್ ಯಾರೇ ಫೋನ್ ಮಾಡಿದರೂ ಎತ್ತುವುದೇ ಇಲ್ಲ. ಮೆಸೇಜ್ ಮಾಡಿ ಅಂತಾನೆ. ಮೆಸೇಜ್ ಮಾಡಿದರೆ ಓದೋದೇ ಇಲ್ಲ' ಎಂದು ಆಯನೂರು ಮಂಜುನಾಥ್ ಟೀಕಿಸಿದರು.


ಆಯನೂರು ಮಂಜುನಾಥ್

ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ 59ನೇ ಹುಟ್ಟುಹಬ್ಬದ ನಿಮಿತ್ತ ಆಯೋಜಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಸೋಮವಾರ ಅವರು ಮಾತನಾಡಿದರು.

ನಿಧನ ವಾರ್ತೆ

ಪತ್ರಕರ್ತ 'ನಚ್ಚಿ'



ಬೆಂಗಳೂರು: ಪತ್ರಕರ್ತ ಎಂ.ಎನ್. ಚಕ್ರವರ್ತಿ (70) ವಯೋಸಹಜ ಅನಾರೋಗ್ಯದಿಂದ ಸೋಮವಾರ ನಗರದಲ್ಲಿ ನಿಧನರಾದರು.

'ನಚ್ಚಿ' ಎಂದೇ ಖ್ಯಾತಿ ಹೊಂದಿದ್ದ ಚಕ್ರವರ್ತಿ 'ಇಂಡಿಯನ್ ಎಕ್ಸ್‌ಪ್ರೆಸ್', 'ಡೆಕ್ಕನ್ ಕ್ರಾನಿಕಲ್' ಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿದ್ದರು. ಲಂಕೇಶ್ ಪತ್ರಿಕೆಗೆ 80 ರ ದಶಕದಲ್ಲಿ ಬರೆಯುತ್ತಿದ್ದರು.

ಅವರಿಗೆ ಪತ್ನಿ ಮತ್ತು ಪುತ್ರಿ ಇದ್ದಾರೆ. ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ.

ಸಿ.ಎ. ಸರೋಜಮ್ಮ

ಬೆಂಗಳೂರು: ಅವೆನ್ಯೂ ರಸ್ತೆಯ ನಿವಾಸಿ ಸಿ.ಎ. ಸರೋಜಮ್ಮ (93) ಸೋಮವಾರ ಮಧ್ಯಾಹ್ನ ತಮ್ಮ ನಿವಾಸದಲ್ಲಿ ನಿಧನರಾದರು.



ಅವರಿಗೆ ಮೂವರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಟಿ.ಆರ್. ಮಿಲ್ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಎಚ್ಚರಿಕೆ

'ಅನುಗ್ರಹ' ಯೋಜನೆ: ಸದನದಲ್ಲಿ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸರ್ಗಿಕ ವಿಪತ್ತು ಮತ್ತು ಅಪಘಾತಗಳಂತಹ ಘಟನೆಗಳಲ್ಲಿ ಕುರಿಗಳು ಸತ್ತಾಗ ಅವುಗಳ ಮಾಲೀಕರಿಗೆ ತಲಾ ₹ 5,000 ಪರಿಹಾರ ನೀಡುವ 'ಅನುಗ್ರಹ' ಯೋಜನೆಯನ್ನು ಪುನಃ ಜಾರಿಗೊಳಿಸದಿದ್ದರೆ ರಾಜ್ಯ ಸರ್ಕಾರದ ವಿರುದ್ಧ ವಿಧಾನಸಭೆಯಲ್ಲೂ ಹೋರಾಟ ನಡೆಸಲಾಗುವುದು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

'ಅನುಗ್ರಹ' ಯೋಜನೆ ಜಾರಿಗೆ ಒತ್ತಾಯಿಸಿ ಕರ್ನಾಟಕ ಸಹಕಾರಿ ಕುರಿ ಮತ್ತು ಮೇಕೆ ಸಾಕಣೆದಾರರ ಮಹಾಮಂಡಳದ ವತಿಯಿಂದ ನಗರದ ಮೌರ್ಯ ವೃತ್ತದಲ್ಲಿ ಸೋಮವಾರ ನಡೆಸಿದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಕುರಿಗಳು ಸತ್ತಾಗ ₹ 5,000 ಮತ್ತು ದನ, ಎಮ್ಮೆ ಸತ್ತರೆ ₹ 10,000 ಪರಿಹಾರ ನೀಡುವ ಯೋಜನೆಯನ್ನು ನಾನು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಜಾರಿಗೆ ತರಲಾಗಿತ್ತು. ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಯೋಜನೆಯನ್ನು ಸ್ಥಗಿತಗೊಳಿಸಿದೆ. ₹ 30 ಕೋಟಿಯಷ್ಟು ಹಳೆ ಬಾಕಿಯನ್ನೂ ಬಿಡುಗಡೆ ಮಾಡಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.


ಕುರಿಗಳು ಮೃತಪಟ್ಟಾಗ ಅವುಗಳ ಮಾಲೀಕರಿಗೆ ಪರಿಹಾರ ನೀಡುವ 'ಅನುಗ್ರಹ' ಯೋಜನೆಯನ್ನು ಮತ್ತೆ ಜಾರಿಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ಸಹಕಾರಿ ಕುರಿ ಮತ್ತು ಮೇಕೆ ಸಾಕಣೆದಾರರ ಮಹಾಮಂಡಳದ ವತಿಯಿಂದ ಸೋಮವಾರ ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮಾಜಿ ಸಚಿವರಾದ ಎಚ್.ಎಂ. ರೇವಣ್ಣ, ಟಿ.ಬಿ. ಜಯಚಂದ್ರ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಕುರಿ ಸಾಕಣೆ ಕುರುಬ ಸಮುದಾಯಕ್ಕೆ ಮಾತ್ರ ಸೀಮಿತವಾಗಿಲ್ಲ. ಹಲವು ಸಮುದಾಯದ ಜನರು ಕುರಿ ಸಾಕಣೆಯನ್ನು ಮಾಡುತ್ತಿದ್ದಾರೆ. ಶಾಸಕ ಕೆ.ಆರ್. ರಮೇಶ್ ಕುಮಾರ್ ಕೂಡ ತಮ್ಮ ತೋಟದಲ್ಲಿ 500 ಕುರಿಗಳನ್ನು ಸಾಕುತ್ತಿದ್ದಾರೆ. ಕುರಿ ಸಾಕಣೆ ದೊಡ್ಡ ಸಂಖ್ಯೆಯ ಜನರಿಗೆ ಬದುಕಿನ ದಾರಿಯಾಗಿದೆ. ಕುರಿಗಳು ಸತ್ತಾಗ ಅವರು ಸಂಕಷ್ಟಕ್ಕೆ ಸಿಲುಕುತ್ತದೆ. ಅವರಿಗೆ ಶಕ್ತಿ ತುಂಬುವುದಕ್ಕಾಗಿ ತಮ್ಮ ಅವಧಿಯಲ್ಲಿ ಯೋಜನೆ ಜಾರಿಗೊಳಿಸಲಾಗಿತ್ತು. ಆದರೆ, ತಾವು ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸುವವರೆಗೂ ಯಡಿಯೂರಪ್ಪ ಅವರಿಗೆ ಯೋಜನೆಯ ಹೆಸರೇ ಗೊತ್ತಿರಲಿಲ್ಲ ಎಂದರು.

ಎಚ್ಚರಿಕೆ ಸೂಚನೆ

V-GUARD

M/s V-Guard Industries Ltd., 42/962, Vennala High School Road, Vennala, Cochin, Kerala 682 028 ಹೆಸರುವಾಸಿ ಟ್ರೇಡ್ ಮಾರ್ಕ್ V-GUARD ನ ನೋಂದಾಯಿತ ಮಾಲೀಕತ್ವ ಹೊಂದಿದೆ.

CS (COMM) 25/2021ರ ಅನ್ವಯ ಮಾನ್ಯ ದೆಹಲಿ ಉಚ್ಚ ನ್ಯಾಯಾಲಯವು V-Guard Industries Ltd. ಪರವಾಗಿ ಶ್ರೀ ಸುಕನ್ ರಾಜ್ ಜೈನ್ M/s N-GUARD ಎಲೆಕ್ಟ್ರಾನಿಕ್ಸ್ ಇಂಡಸ್ಟ್ರೀಸ್ ಮಾಲೀಕತ್ವದ N-GUARD, ಅವರ ವ್ಯವಹಾರದ ನಿಯೋಜಿತ ವ್ಯಕ್ತಿಗಳು, ಪರವಾನಗಿ ಪಡೆದವರು, ಫ್ರ್ಯಾಂಚೈಸೀಗಳು, ಹಂಚಿಕೆದಾರರು ಮತ್ತು ವ್ಯಾಪಾರಿಗಳು ನಮ್ಮ ಹೆಸರುವಾಸಿ ವಿ-ಗಾರ್ಡ್ ಟ್ರೇಡ್ ಮಾರ್ಕಿಗೆ ಚ್ಯುತಿ ತರುವಂತಹ 'www.nguard.in' ಡೊಮೇನ್ ಹೆಸರಿನ N-GUARD ಮಾರ್ಕಿನ, ಮಷೀನ್‌ಗಳು, ಇಲೆಕ್ಟ್ರಾನಿಕ್, ಎಲೆಕ್ಟ್ರಿಕ್ ಬಿಡಿಭಾಗಗಳು ಅಥವಾ ಫಿಟ್ಟಿಂಗ್‌ಗಳನ್ನು ಅಥವಾ ಇನ್ನಾವುದೇ ಉತ್ಪನ್ನಗಳು, ಟ್ರೇಡ್ ಮಾರ್ಕ್/ಟ್ರೇಡ್ ನೇಮ್ (ಹೆಸರು)/ ಟ್ರೇಡ್ ಡ್ರೆಸ್ (ಉಡುಪು)/ವಿನ್ಯಾಸಗಳನ್ನು ನೇರವಾಗಿ ಇಲ್ಲವೇ ಪರೋಕ್ಷವಾಗಿ ತಯಾರಿಸುವುದು, ಮಾರಾಟಮಾಡುವುದು, ಮಾರಾಟಕ್ಕಿಡುವುದು, ಜಾಹಿರಾತು ನೀಡುವುದರ ವಿರುದ್ಧ ಪ್ರತಿಬಂಧಕಾಜ್ಞೆ ನೀಡಿದೆ.

N-ಗಾರ್ಡ್ ಮಾರ್ಕು ಹೊಂದಿರುವ ಯಾವುದೇ ಉತ್ಪನ್ನವನ್ನು ಮಾರಾಟಕ್ಕಿಡುವುದು ಅಥವಾ ಸದರಿ ಮಾರ್ಕಿನ ಜಾಹಿರಾತು ನೀಡುವುದನ್ನು ಮೇಲಿನ ಆದೇಶದ ಉಲ್ಲಂಘನೆ ಮತ್ತು ನ್ಯಾಯಾಲಯದ ವಿರೋಧ ಎಂದು ಪರಿಗಣಿಸಲಾಗುವುದು. ಸಾರ್ವಜನಿಕರು, ಗ್ರಾಹಕರು ಹಾಗೂ ಮಾಧ್ಯಮಗಳಿಗೆ ಈ ಮೂಲಕ ಎಚ್ಚರಿಕೆಯಿಂದ ಇರುವಂತೆ ಕೋರಿ ಮೇಲ್ಕಂಡ ಆದೇಶದ ವಿರುದ್ಧ ಯಾವುದೇ ಬೆಳವಣಿಗೆಗಳು ಕಂಡುಬಂದಲ್ಲಿ M/s V-Guard Industries Ltd., ಅವರ ಗಮನಕ್ಕೆ ತರಬೇಕೆಂದು ವಿನಂತಿ. ದೂರು ಸಲ್ಲಿಸಬೇಕಾದ ವಿಳಾಸ:

V-GUARD INDUSTRIES LIMITED., Regd. Office: 42/962, Vennala High School Road, Vennala P.O, Ernakulam – 682 028, Kerala, India. | Ph: 0484-4335000. E-mail: mail@vguard.in | Website: www.vguard.in | CIN: L31200KL1996PLC010010

PUBLIC NOTICE

The General Public is hereby informed that my client intends to enter into Joint Development Agreement for the Schedule Property mentioned below with its Present Owner SRI. **C.R. VISWANATH** Son of Late C.N. Ramaiah & others, Who claims that they are the absolute owner having right, title and interest in the Schedule Property and they claim that apart from them no other person/s or entity have any right, title and interest.

Any person/s having objection/s asserting claim, right, title or interest, charge, lien, can contact the undersigned within 15 days with all documentary proof. If no objections are received within the prescribed time my client shall proceed with to enter into Joint Development Agreement as if no claims exist and that they have been waived or abandoned. Objection/s received thereafter shall not be binding on my client.

SCHEDULE PROPERTY

All that piece and parcel of the immovable property bearing **Sy.No. 33** measuring **1 Acres 39 Guntas** situated at Chikkanayakanahalli Village, Varthur Hobli, Bangalore East Taluk and bounded on the : East by : Huskur Road and Property of Thayappa ; West by : Property of Srinivasa Reddy ; North by : Property left for Road; South by : Property of Jogi Ramaiah ;

Kavitha A.B. Advocate
No.2577, 13th Cross, 26th Main, 1st Sector, 4th floor, HSR Layout, Bangalore - 560102, Ph:- 9900546686

ಮೇಲುಕೋಟೆ: 5ರಂದು ಸಹಸ್ರ ಕಳಶಾಭಿಷೇಕ

ಮೇಲುಕೋಟೆ: ಮೇಲುಕೋಟೆಯಲ್ಲಿ ಮಾರ್ಚ್ 5ರಂದು ಸಹಸ್ರ ಕಳಶಾಭಿಷೇಕ ನಡೆಯಲಿದೆ.

ಕೋವಿಡ್ ಕಾರಣದಿಂದಾಗಿ, ಕಳೆದ ವರ್ಷ ವೈರಮುಡಿ ಜಾತ್ರಾ ಮಹೋತ್ಸವ ನಡೆದಿರಲಿಲ್ಲ. ಆದ್ದರಿಂದ, ಪ್ರಾಯಶ್ಚಿತ್ತ ಪೂರ್ವಕವಾಗಿ ಶ್ರೀದೇವಿ-ಭೂದೇವಿ, ಆಚಾರ್ಯ ರಾಮಾನುಜರೊಂದಿಗೆ ಉತ್ಸವಮೂರ್ತಿ ಚೆಲುವನಾರಾಯಣಸ್ವಾಮಿಗೆ ಸಹಸ್ರಾಭಿಷೇಕ ವಿಶೇಷ ಮಹೋತ್ಸವ ನಡೆಯಲಿದೆ. ರಾಮಾನುಜರ ಸನ್ನಿಧಿ ಅರ್ಚಕ ವಿದ್ವಾನ್ ಬಿ.ವಿ ಆನಂದಾಳ್ವಾರ್ ಮೇಲುಸ್ತುವಾರಿಯಲ್ಲಿ ದೇಗುಲ ಸಜ್ಜುಗೊಳ್ಳುತ್ತಿದೆ.

ಮಾರ್ಚ್ 3ರಿಂದಲೇ ಆರಂಭವಾಗುವ ಧಾರ್ಮಿಕ ಕೈಂಕರ್ಯಗಳು ಮಾರ್ಚ್ 6ರವರೆಗೆ ನೆರವೇರಲಿದೆ ಎಂದು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಂಗಳಮ್ಮ ತಿಳಿಸಿದ್ದಾರೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ ಸಂಗ್ರಹದ ಪ್ರಮಾಣ ಕಡಿಮೆ

ಕುಡಿಯಲಷ್ಟೇ ನೀರು, ಕೃಷಿಗೆ ಇಲ್ಲ

• ಎಸ್.ರವಿಪ್ರಕಾಶ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೇಸಿಗೆ ಕಾಲಿಡುತ್ತಿರುವುದರಿಂದ ರಾಜ್ಯದ ಎಲ್ಲ ಜಲಾಶಯಗಳಲ್ಲೂ ಲಭ್ಯವಿರುವ ನೀರನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಮೀಸಲಿಡಬೇಕು; ಕೃಷಿ ಉದ್ದೇಶಕ್ಕೆ ಬಳಸಲು ಅವಕಾಶ ಕೊಡಬಾರದು ಎಂದು ಕಂದಾಯ ಇಲಾಖೆ ಕಟ್ಟಪ್ಪಣೆ ಮಾಡಿದೆ.

ಈ ಬಾರಿ ಬೇಸಿಗೆ ತೀವ್ರತೆ ಹೆಚ್ಚಾಗುವ ಸಾಧ್ಯತೆ ಇದ್ದು, ಅದಕ್ಕೆ ಪೂರಕವಾಗಿ ಕುಡಿಯುವ ನೀರಿನ ಕೊರತೆ ಆಗಬಾರದು ಎಂಬ ಕಾರಣಕ್ಕೆ ರಾಜ್ಯ ಹವಾಮಾನ ಕಾವಲು ಸಮಿತಿ (ವೆದರ್ ವಾಚ್ ಕಮಿಟಿ) ಈಗಾಗಲೇ ಸಭೆ ನಡೆಸಿ ಎಲ್ಲ ಜಲಾಶಯಗಳ ಪ್ರಾಧಿಕಾರಗಳಿಗೂ ಪತ್ರವನ್ನು ಬರೆದಿದೆ ಎಂದು ಕಂದಾಯ ಇಲಾಖೆಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪ್ರತಿ ಅಣೆಕಟ್ಟೆಗಳಲ್ಲಿ ಲಭ್ಯವಿರುವ ನೀರನ್ನು ಮೊದಲ ಆದ್ಯತೆಯಾಗಿ ಕುಡಿಯುವ ಉದ್ದೇಶಕ್ಕೆ ಅಗತ್ಯದಷ್ಟು ಸಂಗ್ರಹಿಸಿ ಇಟ್ಟುಕೊಳ್ಳಬೇಕು. ಮುಂಗಾರು ತಡವಾದರೂ ಪರಿಸ್ಥಿತಿಯನ್ನು ಎದುರಿಸಲು (ಜೂನ್ ಕೊನೆಯವರೆಗೆ) ತುರ್ತು ಸಂಗ್ರಹವಾಗಿ (ಬಫರ್) ಇಟ್ಟುಕೊಳ್ಳಬೇಕು ಎಂದು ಸೂಚಿಸಲಾಗಿದೆ.

ರಾಜ್ಯದ ಎಲ್ಲ ಜಲಾಶಯಗಳಲ್ಲಿ ಸಂಗ್ರಹವಾಗಿರುವ ನೀರಿನ ಪ್ರಮಾಣ ಅಂದಾಜಿಸಿದರೆ ಜೂನ್ ಕೊನೆಯವರೆಗೆ ಕುಡಿಯುವ ನೀರು ಪೂರೈಸಲು ಸಾಕಾಗುವಷ್ಟು ಮಾತ್ರ ಲಭ್ಯತೆ ಇದೆ. ನೀರಾವರಿಗೆ ಹರಿಸಿದರೆ ಕುಡಿಯುವುದಕ್ಕೆ ಕಷ್ಟ ಆಗಬಹುದು ಎಂದು ಮೂಲಗಳು ತಿಳಿಸಿವೆ.

ಕೃಷ್ಣರಾಜ ಜಲಾಶಯದಲ್ಲೂ ಅಗತ್ಯಕ್ಕೆ ತಕ್ಕಷ್ಟು ನೀರಿದೆ. ಬೆಂಗಳೂರು ನಗರಕ್ಕೆ ಒಂದು ತಿಂಗಳಿಗೆ 1.5 ಟಿಎಂಸಿ ಅಡಿ ನೀರು ಬೇಕಾಗುತ್ತದೆ. ಬೆಂಗಳೂರು ಅಲ್ಲದೆ, ಅಚ್ಚುಕಟ್ಟು ಪ್ರದೇಶದಲ್ಲಿ ಬರುವ 27 ವಿವಿಧ ಪಟ್ಟಣಗಳು, 3 ನಗರಗಳು ಮತ್ತು 625 ಗ್ರಾಮ ಪಂಚಾಯತ್‌ಗಳಿಗೆ ಕಾವೇರಿಯಿಂದ ಸುಮಾರು 3 ಟಿಎಂಸಿ ಅಡಿ ನೀರು ಬೇಕಾಗುತ್ತದೆ. ಅಷ್ಟು ಪ್ರಮಾಣವನ್ನು ಕಾಪಾಡಿಕೊಳ್ಳುವ ವ್ಯವಸ್ಥೆ ಮಾಡಲಾಗಿದೆ.

ಚಳಿಗಾಲ ಮುಗಿಯುವ ಮೊದಲೇ ಬೇಸಿಗೆಯ ವಾತಾವರಣ ಆರಂಭವಾಗಿದೆ. ಬೇಸಿಗೆಯಲ್ಲಿ ಜಲಾಶಯದ ನೀರು ಆವಿಯಾಗಿ ನಷ್ಟವಾಗುವ ಪ್ರಮಾಣ ಹೆಚ್ಚು. ಆ ನಷ್ಟವನ್ನು ಪರಿಗಣಿಸಿ, ನೀರಿನ ಸಂಗ್ರಹವನ್ನು ಇಟ್ಟುಕೊಳ್ಳುವ ಸವಾಲು ಇದೆ. ಹೀಗಾಗಿ ಯಾವುದೇ ತೊಂದರೆ ಆಗದಂತೆ ಕಟ್ಟುನಿಟ್ಟಿನ ಕ್ರಮವಹಿಸಬೇಕು ಎಂದು ಅಭಿವೃದ್ಧಿ ಆಯುಕ್ತರು ಜಿಲ್ಲಾಧಿಕಾರಿಗಳು ಮತ್ತು ವಿಭಾಗಾಧಿಕಾರಿಗಳಿಗೆ ಪ್ರತ್ಯೇಕ ಪತ್ರ ಬರೆದಿದ್ದಾರೆ ಎಂದು ಮೂಲಗಳು ಹೇಳಿವೆ.

ಕಳೆದ ವರ್ಷದ ನೀರಿನ ಸಂಗ್ರಹಕ್ಕೆ ಹೋಲಿಸಿದರೆ, ಈ ವರ್ಷ ಸಂಗ್ರಹದ ಮಟ್ಟ ಕೊಂಚ ತಗ್ಗಿರುವುದು ಜಲಾಶಯಗಳ ನೀರಿನ ಮಟ್ಟದ ಅಂಕಿ–ಅಂಶಗಳಿಂದ ಗೊತ್ತಾಗುತ್ತದೆ.

ಜಲಾಶಯಗಳಲ್ಲಿ ನೀರಿನ ಲಭ್ಯತೆ
(01.03.2021 ರಂತೆ ಟಿಎಂಸಿ ಅಡಿಗಳಲ್ಲಿ)

ಜಲಾಶಯ	ಸಾಮರ್ಥ್ಯ	ಇಂದಿನ ಮಟ್ಟ	2020 ರ ಮಾರ್ಚ್‌ನಲ್ಲಿ ಇದ್ದ ಮಟ್ಟ
ಹಾರಂಗಿ	8.50	2.98	3.54
ಹೇಮಾವತಿ	37.10	13.22	18.39
ಕೆಆರ್‌ಎಸ್	49.45	30.59	33.02
ಕಬಿನಿ	19.5	11.46	15.48
ಕೃಷ್ಣಾ	71.54	48.56	51.44
ಟಿ.ಬಿ ಡ್ಯಾಂ	100.86	28.50	28.37
ಘಟಪ್ರಭಾ	51.17	27.70	29.72
ಮಲಪ್ರಭಾ	37.73	15.78	18.96
ಆಲಮಟ್ಟಿ	123.08	56.83	56.94
ನಾರಾಯಣಪುರ	31.31	29.03	30.22

(ಕಾವೇರಿ ಕಣಿವೆ ಪ್ರದೇಶದಲ್ಲಿ 58.25 ಟಿಎಂಸಿ ಅಡಿ ಮತ್ತು ಕೃಷ್ಣಾ ಕಣಿವೆ ಪ್ರದೇಶದಲ್ಲಿ 206.40 ಟಿಎಂಸಿ ಅಡಿ ನೀರು ಲಭ್ಯವಿದೆ)

ಸುದ್ದಿ 2 ನಿಮಿಷ

ಫೆಬ್ರುವರಿಯಲ್ಲಿ ₹ 1.13 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): 2021ರ ಫೆಬ್ರುವರಿಯಲ್ಲಿ ₹ 1.13 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ ಆಗಿದೆ. 2020ರ ಫೆಬ್ರುವರಿಯಲ್ಲಿ ಸಂಗ್ರಹವಾಗಿದ್ದ ಮೊತ್ತಕ್ಕೆ ಹೋಲಿಸಿದರೆ ಶೇ 7ರಷ್ಟು ಏರಿಕೆ ಕಂಡುಬಂದಿದೆ.

ಜಿಎಸ್‌ಟಿ ಸಂಗ್ರಹವು ಸತತ ಐದನೇ ತಿಂಗಳಿನಲ್ಲಿಯೂ ₹ 1 ಲಕ್ಷ ಕೋಟಿಯನ್ನು ದಾಟಿದೆ. ಜಿಎಸ್‌ಟಿ ಸಂಗ್ರಹವು ಆರ್ಥಿಕ ಚೇತರಿಕೆಯ ಸೂಚನೆಯನ್ನು ನೀಡುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಜನವರಿಯಲ್ಲಿ ಸಂಗ್ರಹವಾಗಿದ್ದ ದಾಖಲೆಯ ₹ 1.19 ಲಕ್ಷ ಕೋಟಿಗೆ ಹೋಲಿಸಿದರೆ ಫೆಬ್ರುವರಿಯಲ್ಲಿ ಆಗಿರುವ ತೆರಿಗೆ ಸಂಗ್ರಹ ಕಡಿಮೆ ಇದೆ. 2021ರ ಫೆಬ್ರುವರಿಯಲ್ಲಿ ಸಂಗ್ರಹ ಆಗಿರುವ ಒಟ್ಟಾರೆ ತೆರಿಗೆಯಲ್ಲಿ ಸಿಜಿಎಸ್‌ಟಿ ₹ 21,092 ಕೋಟಿ, ಎಸ್‌ಜಿಎಸ್‌ಟಿ ₹ 27,273 ಕೋಟಿ, ಐಜಿಎಸ್‌ಟಿ ₹ 55,253 ಕೋಟಿ ಹಾಗೂ ಸೆಸ್ ₹ 9,525 ಕೋಟಿ ಇದೆ.

'ಕುತೂಹಲ ಆವಿಷ್ಕಾರಕ್ಕೆ ನಾಂದಿ'



ಶಿವಮೊಗ್ಗದ ಡಿ.ವಿ.ಎಸ್ ಕಾಲೇಜಿನ ವಿದ್ಯಾರ್ಥಿನಿಯರು ತಮ್ಮ ವಿಜ್ಞಾನದ ಮಾದರಿ ವಿವರಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಚಿಕ್ಕಂದಿನಿಂದ ಸದಾ ಪ್ರಶ್ನಿಸುವ ಕುತೂಹಲ ಬೆಳೆಸಿಕೊಳ್ಳುವುದರಿಂದ ಭವಿಷ್ಯದಲ್ಲಿ ದೊಡ್ಡ ಸಾಧನೆಗಳನ್ನು ಮಾಡಬಹುದು ಹಾಗೂ ಹೊಸ ಆವಿಷ್ಕಾರಗಳನ್ನು ಹೊರತರಬಹುದು' ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ನಿಕಟಪೂರ್ವ ಅಧ್ಯಕ್ಷ ಪ್ರೊ. ಎ.ಎಸ್.ಕಿರಣ್ ಕುಮಾರ್ ತಿಳಿಸಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ಸೋಮವಾರ ಆಯೋಜಿಸಿದ್ದ ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಾಮಾನ್ಯವಾಗಿ ಮನೆಗಳಲ್ಲಿ ಮಕ್ಕಳು ಕುತೂಹಲದಿಂದ ಕೇಳುವ ಪ್ರಶ್ನೆಗಳಿಗೆ ಹಿರಿಯರ ಬಳಿ ಉತ್ತರ ಇರುವುದಿಲ್ಲ. ಆಗ ತಮ್ಮ ನ್ಯೂನತೆ ಮುಚ್ಚಿಕೊಳ್ಳಲು ತಲೆಹರಟೆ ಎಂದು ಗದರಿಸಿ, ಬಾಯಿ ಮುಚ್ಚಿಸುತ್ತಾರೆ. ಅಷ್ಟಕ್ಕೇ ಪ್ರಶ್ನಿಸುವ ಕುತೂಹಲ ನಿಲ್ಲಬಾರದು. ಆ ಗುಣವೇ ನಿಮ್ಮನ್ನು ಭವಿಷ್ಯದ ಸಾಧಕರನ್ನಾಗಿ ಮಾಡುತ್ತದೆ' ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಎನ್.ನರಸಿಂಹ ಮೂರ್ತಿ,'ದೇಶದಲ್ಲಿ ಹಸಿವು ಮತ್ತು ಬಡತನ ಹೋಗಲಾಡಿಸುವ ವಿಜ್ಞಾನ ಅಭಿವೃದ್ಧಿಯಾಗಬೇಕು' ಎಂದು ಹೇಳಿದರು.

ನನಗೆ ಪಕ್ಷ ಬೆಂಬಲ ನೀಡುತ್ತಿಲ್ಲ: ಶಾಸಕ ಅಖಂಡ ಅಳಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನನ್ನನ್ನು ಗುರಿ ಮಾಡುತ್ತಿದ್ದು, ನನಗೆ ಪಕ್ಷದಿಂದ ಬೆಂಬಲ ಸಿಗುತ್ತಿಲ್ಲ' ಎಂದು ಪುಲಕೇಶಿನಗರ ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಹೇಳಿದರು.

ಶಾಸಕರ ಭವನದಲ್ಲಿ ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಡಿ.ಜೆ. ಹಳ್ಳಿ ಪ್ರಕರಣದಲ್ಲಿ ಪಕ್ಷ ನನ್ನ ಬೆಂಬಲಕ್ಕೆ ಬಾರದೇ ಇದ್ದರೂ, ನಾನೇ ಸಂಪತ್ ರಾಜ್ ವಿರುದ್ಧ ನ್ಯಾಯಾಲಯದಲ್ಲಿ ಹೋರಾಡುತ್ತೇನೆ. ನಾನು ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡಿದ್ದೇನೆ. ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಹೋಗವುದಿಲ್ಲ' ಎಂದ ಅವರು, 'ದೆಹಲಿಯಲ್ಲಿ ಹೈಕಮಾಂಡ್ ಭೇಟಿ ಮಾಡಿ ಡಿ.ಕೆ.ಶಿವಕುಮಾರ್ ವಿರುದ್ಧ ನಾನು ದೂರು ನೀಡುತ್ತೇನೆ' ಎಂದರು.

'ಮಾಜಿ ಶಾಸಕ ಪ್ರಸನ್ನ ಕುಮಾರ್ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಡಿ ಎಂದು ಹೇಳಿದ್ದೆ. ಆದರೂ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿದ್ದಾರೆ. ಒಬ್ಬ ಹಾಲಿ ಶಾಸಕ ಇರಬೇಕಾದರೆ ಮತ್ತೊಬ್ಬ ನಾಯಕನನ್ನು ಕರೆದುಕೊಂಡು ಬಂದಿದ್ದಾರೆ. ಇದರಿಂದ ಕ್ಷೇತ್ರದಲ್ಲಿ ಗುಂಪುಗಾರಿಕೆಗೆ ಅವಕಾಶ ಆಗುವುದು ಸಹಜ' ಎಂದರು.

'ಪ್ರಕರಣದ ಬಗ್ಗೆ ಕೆಪಿಸಿಸಿ ಅಧ್ಯಕ್ಷರು ನನ್ನನ್ನು ಕರೆದು ಮಾತನಾಡಿಲ್ಲ. ಪ್ರಕರಣವನ್ನು ಶಿಸ್ತು ಸಮಿತಿಗೆ ಒಪ್ಪಿಸಿದ್ದಾರೆ. ನನಗೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ನೀಡುವುದಾಗಿ ದೆಹಲಿಯಲ್ಲಿಯೂ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ' ಎಂದರು.

ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ತರಲು ಪಣ

ಪಾಂಚಜನ್ಯ ಮೊಳಗಿಸಲು ಸಜ್ಜು: ಡಿಕೆಶಿ

ಪ್ರಜಾವಾಣಿ ವಾರ್ತೆ

ಕೋಲಾರ: 'ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು 1999ರಲ್ಲಿ ಪಾಂಚಜನ್ಯ ಮೊಳಗಿಸಿ ಅಧಿಕಾರಕ್ಕೆ ಬಂದ ರೀತಿಯಲ್ಲಿಯೇ ನಾನೂ ಪಾಂಚಜನ್ಯ ಮೊಳಗಿಸಲು ಸಜ್ಜಾಗಿದ್ದೇನೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

'ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿಗಾದಿಗೆ ಪೈಪೋಟಿ ಇಲ್ಲ. ಮೊದಲು ಪಕ್ಷವನ್ನು ಅಧಿಕಾರಕ್ಕೆ ತರಬೇಕು.ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎಂಬುದು ಬಿಜೆಪಿಯವರಿಗೆ ಅರ್ಥವಾಗಿದೆ. ನಾಡಿನ ಜನ ಮತ್ತೆ ಕಾಂಗ್ರೆಸ್ ಕೈ ಹಿಡಿಯಲಿದ್ದಾರೆ. ಸೋತ ಕ್ಷೇತ್ರಗಳಲ್ಲಿ ಪಕ್ಷ ಸಂಘಟನೆಗೆ ಒತ್ತು ನೀಡಲಿದ್ದೇವೆ' ಎಂದರು.

ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಕುರುಡುಮಲೆಯ ವಿನಾಯಕ ದೇವಸ್ಥಾನದಲ್ಲಿ ಸೋಮವಾರ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಮೈತ್ರಿ ಗೊಂದಲ ಸಣ್ಣ ವಿಚಾರ: ಮೈಸೂರು ಮಹಾನಗರ ಪಾಲಿಕೆ ಮೇಯರ್ ಚುನಾವಣಾ ಮೈತ್ರಿ ಗೊಂದಲವು ಸಣ್ಣ ವಿಚಾರ. ಸ್ಥಳೀಯ ರಾಜಕೀಯದಲ್ಲಿ ಈ ರೀತಿ ಇದ್ದೇ ಇರುತ್ತದೆ. ಇದನ್ನು ಪಕ್ಷದೊಳಗೆ ಬಗೆಹರಿಸಿಕೊಳ್ಳುತ್ತೇವೆ' ಎಂದು ಶಿವಕುಮಾರ್ ತಿಳಿಸಿದರು.

'ಮೈಸೂರು ಮೇಯರ್ ಚುನಾವಣೆ ವಿಚಾರವಾಗಿ ಜೆಡಿಎಸ್ ಶಾಸಕ ಸಾ.ರಾ. ಮಹೇಶ್ ಅವರಿಗೆ ಕರೆ ಮಾಡಿದ್ದು ನಿಜ. ನಮಗೆ ಅವರು ಈ ಹಿಂದೆ ಮಾತು ಕೊಟ್ಟಿದ್ದರು. ಅವರು ಈ ವರ್ಷ ಮೈತ್ರಿ ಮುಂದುವರಿಸಿ ನಮಗೆ ಅಧಿಕಾರ ಬಿಟ್ಟು ಕೊಡಬೇಕಿತ್ತು. ಅದನ್ನು ನಡೆಸಿಕೊಡುತ್ತಾರೆ ಅಂತ ನಂಬಿದ್ದೆ. ಜೆಡಿಎಸ್ ಜತೆಗೆ ಮೈತ್ರಿ ವಿಚಾರವಾಗಿ ಶಾಸಕ ತನ್ವೀರ್ ಸೇಠ್ ಜತೆ ಚರ್ಚಿಸುತ್ತೇನೆ' ಎಂದು ಹೇಳಿದರು.

'ಸಿದ್ದರಾಮಯ್ಯ ಅವರು ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಅವರ ಪುತ್ರನ ಮದುವೆಗೆಂದು ದೆಹಲಿಗೆ ಹೋಗಿದ್ದರು ಅಷ್ಟೇ. ನಾನೂ ಹೋಗಬೇಕಿತ್ತು. ಆದರೆ, ಮನೆ ಕಾರ್ಯಕ್ರಮ ಇದ್ದಿದ್ದರಿಂದ ಹೋಗಲು ಆಗಲಿಲ್ಲ' ಎಂದರು.

ಯುವ ಕಾಂಗ್ರೆಸ್ ಮುಖಂಡರ ಜೊತೆ ಡಿಕೆಶಿ ಸಭೆ

ಬೆಂಗಳೂರು: ಪಕ್ಷ ಸಂಘಟನೆಗೆ ಒತ್ತು ನೀಡಿ, ಸಕ್ರಿಯವಾಗಿ ಕಾರ್ಯಪ್ರವೃತ್ತರಾಗುವಂತೆ ಯುವ ಕಾಂಗ್ರೆಸ್ ಪದಾಧಿಕಾರಿಗಳಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು.

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ಯುವ ಕಾಂಗ್ರೆಸ್ ಪದಾಧಿಕಾರಿಗಳ ಜೊತೆ ಸೋಮವಾರ ಸಭೆ ನಡೆಸಿದ ಅವರು, ಪಕ್ಷ ಸಂಘಟನೆಯಲ್ಲಿ ಯುವ ಕಾಂಗ್ರೆಸ್ ನಾಯಕರ ಪಾತ್ರದ ಬಗ್ಗೆ ವಿವರಿಸಿದರು. ಯುವ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯ ಕುರಿತ ಗೊಂದಲಗಳು ಬಗೆಹರಿದಿವೆ. ಮುಂಬರುವ ದಿನಗಳಲ್ಲಿ ಸಂಘಟನೆಯನ್ನು ಬಲಪಡಿಸಲು ಗಮನಹರಿಸಬೇಕು ಎಂದೂ ಅವರು ಸೂಚಿಸಿದರು.

ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ರಕ್ಷಾ ರಾಮಯ್ಯ, ಉಪಾಧ್ಯಕ್ಷ ಮಂಜುನಾಥ್ ಗೌಡ, ಮಿಥುನ್ ರೈ, ಮೊಹ್ಮದ್ ನಲಪಾಡ್, ಮುಕುಂದ್ ರಾಜ್ ಸೇರಿದಂತೆ ರಾಜ್ಯದ ಎಲ್ಲ ನೂತನ ಚುನಾಯಿತ ಸದಸ್ಯರು ಸಭೆಯಲ್ಲಿ ಇದ್ದರು.

ಎಲ್‌ಪಿಜಿ ಸಿಲಿಂಡರ್ ಬೆಲೆ ₹ 25 ಏರಿಕೆ

ಒಂದನೇ ಪುಟದಿಂದ...

ವಿಮಾನ ಇಂಧನ ದರ ಏರಿಕೆ: ವಿಮಾನ ಇಂಧನ (ಎಟಿಎಫ್) ದರವನ್ನು ಸೋಮವಾರ ಶೇ 6.5ರಷ್ಟು ಗರಿಷ್ಠ ಏರಿಕೆ ಮಾಡಲಾಗಿದೆ.

ದೆಹಲಿಯಲ್ಲಿ ವಿಮಾನ ಇಂಧನ ದರ ಪ್ರತಿ ಕಿಲೊ ಲೀಟರ್‌ಗೆ ₹ 3,663ರಷ್ಟು (ಶೇ 6.5) ಹೆಚ್ಚಿಸಲಾಗಿದ್ದು, ₹ 59,400.91ಕ್ಕೆ ತಲುಪಿದೆ. ಫೆಬ್ರುವರಿಯಿಂದ ಈವರೆಗೆ ಮೂರನೇ ಬಾರಿ ದರ ಏರಿಕೆ ಮಾಡಿದಂತಾಗಿದೆ.

ಜಾಗತಿಕ ಆರ್ಥಿಕತೆಯು ಚೇತರಿಸಿಕೊಳ್ಳುವ ಆಶಾವಾದ ಮತ್ತು ಕೋವಿಡ್–19ಗೆ ಲಸಿಕೆ ನೀಡುವ ಕಾರ್ಯಕ್ರಮ ಆರಂಭವಾಗಿರುವ ಕಾರಣಗಳಿಂದಾಗಿ ತೈಲ ಬೇಡಿಕೆಯಲ್ಲಿ ಸುಧಾರಣೆ ಕಂಡುಬರುವನಿರೀಕ್ಷೆಮಾಡಲಾಗುತ್ತಿದೆ.


ಬ್ರೆಂಟ್ ಕಚ್ಚಾ ತೈಲ ದರವು ಸೋಮವಾರ ಒಂದು ಬ್ಯಾರಲ್‌ಗೆ 65.49 ಡಾಲರ್‌ಗಳಿಗೆ ತಲುಪಿದೆ. ಒಂದು ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ ಗರಿಷ್ಠ ದರ ಇದಾಗಿದೆ.

ಗಡಿ ವಿವಾದ: 'ಸುಪ್ರೀಂ' ನಲ್ಲಿ ವಾದ

ಮಹಾರಾಷ್ಟ್ರ ರಾಜ್ಯಪಾಲರ ಭಾಷಣದಲ್ಲಿ ಪ್ರತಿಪಾದನೆ

ಮುಂಬೈ (ಪಿಟಿಐ) : ಕರ್ನಾಟಕದ ಜತೆಗಿನ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥವಾಗಿ ವಾದ ಮಂಡಿಸಲಾಗಿದೆ ಎಂದು ಮಹಾರಾಷ್ಟ್ರ ಸರ್ಕಾರ ತಿಳಿಸಿದೆ.

ಮಹಾರಾಷ್ಟ್ರ ವಿಧಾನಮಂಡಲದಲ್ಲಿ ಸೋಮವಾರ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ರಾಜ್ಯಪಾಲ ಭಗತ್ ಸಿಂಗ್ ಕೊಶಿಯಾರಿ, 'ಮಹಾರಾಷ್ಟ್ರ–ಕರ್ನಾಟಕ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ನನ್ನ ಸರ್ಕಾರ ಸಮರ್ಥವಾಗಿ ಮತ್ತು ಬಲವಾಗಿ ವಾದ ಮಂಡಿಸಿದೆ. ಮುಂದೆಯೂ ಇದೇ ರೀತಿ ವಾದ ಮಂಡಿಸಲಾಗುವುದು' ಎಂದು ಹೇಳಿದರು.



ಭಗತ್ ಸಿಂಗ್ ಕೊಶಿಯಾರಿ

'ಗಡಿ ಪ್ರದೇಶಗಳಲ್ಲಿ ಮರಾಠಿ ಮಾತನಾಡುವವರ ಹಿತಾಸಕ್ತಿ ಕಾಪಾಡಲು ಮತ್ತು ನ್ಯಾಯ ದೊರಕಿಸಿಕೊಡಲು ಸರ್ಕಾರ ಬದ್ಧವಾಗಿದೆ' ಎಂದು ತಿಳಿಸಿದರು.

'ಸರ್ಕಾರ ಇತ್ತೀಚೆಗೆ 'ಮಹಾರಾಷ್ಟ್ರ–ಕರ್ನಾಟಕ ಗಡಿ ವಿವಾದ: ಸಂಘರ್ಷ ಮತ್ತು ಸಂಕಲ್ಪ' ಎನ್ನುವ ಪುಸ್ತಕವನ್ನು ಪ್ರಕಟಿಸಿದೆ. ಈ ಪುಸ್ತಕವನ್ನು ಶಾಸಕರಿಗೆ ಒದಗಿಸಲಾಗುವುದು' ಎಂದು ಹೇಳಿದರು.

ಜಿಎಸ್‌ಟಿ: ಜಿಎಸ್‌ಟಿ ಪರಿಹಾರವಾಗಿ ಮಹಾರಾಷ್ಟ್ರಕ್ಕೆ ಕೇಂದ್ರವು ₹ 46,950 ಕೋಟಿ ಬಾಕಿ ಕೊಡಬೇಕಿದ್ದು, ಫೆಬ್ರುವರಿ ಅಂತ್ಯದವರೆಗೆ ಕೇವಲ ರೂ. 6,140 ಕೋಟಿಯಷ್ಟೇ ನೀಡಿದೆ ಎಂದು ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಹೇಳಿದರು.

ಸಾಲವಾಗಿ ₹ 11,520 ಕೋಟಿ ನೀಡಿದೆ. ಕೇಂದ್ರವು ಜಿಎಸ್‌ಟಿ ಪರಿಹಾರದ ಮೊತ್ತ ₹ 29,290 ಕೋಟಿ ಬಾಕಿ ಉಳಿಸಿಕೊಂಡಿದೆ. ಇದರ ಹೊರತಾಗಿ, ಕೊರೊನಾ ಪರಿಸ್ಥಿತಿ ಮತ್ತು ಪ್ರಾಕೃತಿಕ ವಿಕೋಪಗಳು ರಾಜ್ಯದ ಅರ್ಥವ್ಯವಸ್ಥೆಯ ಮೇಲೆ ಪರಿಣಾಮ ಬೀರಿವೆ ಎಂದೂ ಹೇಳಿದರು.

ಸಿದ್ದರಾಮಯ್ಯ ವಿರುದ್ಧ ನಿಯಮ ಉಲ್ಲಂಘನೆ ಪ್ರಕರಣ

ಮೇಲ್ಮನವಿ ವಜಾಗೊಳಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು 23 ವರ್ಷಗಳ ಹಿಂದೆ ಮೈಸೂರಿನಲ್ಲಿ ಭೂಮಿ ಖರೀದಿಸಿದ ಸಂದರ್ಭ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ದೂರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ಸಾಮಾಜಿಕ ಕಾರ್ಯಕರ್ತ ಎನ್. ಗಂಗರಾಜು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠ ಈ ಆದೇಶ ನೀಡಿದೆ.



ಅಧೀನ ನ್ಯಾಯಾಲಯ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಸಿದ್ದರಾಮಯ್ಯ ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ್ದ ರಾಜ್ಯ ಹೈಕೋರ್ಟ್ ಕಳೆದ ಅಕ್ಟೋಬರ್ 30ರಂದು ಪ್ರಕರಣವನ್ನು ವಜಾಗೊಳಿಸಿ ಆದೇಶಿಸಿತ್ತು.

ಹೈಕೋರ್ಟ್‌ನ ಆದೇಶ ಪ್ರಶ್ನಿಸಲಾದ ಮೇಲ್ಮನವಿಯನ್ನು ವಿಚಾರಣೆಗೆ ಪರಿಗಣಿಸಲು ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ.ರಾಮಸುಬ್ರಹ್ಮಣ್ಯ ಅವರಿದ್ದ ಪೀಠ ನಿರಾಕರಿಸಿತು.

1997ರಲ್ಲಿ ಸಿದ್ದರಾಮಯ್ಯ ಅವರು ಉಪ ಮುಖ್ಯಮಂತ್ರಿಯಾಗಿದ್ದ ಸಂದರ್ಭ ಮೈಸೂರಿನಲ್ಲಿ 10 ಗುಂಟೆ ಜಮೀನು ಖರೀದಿಸಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿಯಮ ಉಲ್ಲಂಘಿಸಿದ್ದಾರೆ ಎಂದು ದೂರಿ ಗಂಗರಾಜು ಅವರು 2018ರಲ್ಲಿ ದೂರು ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ ಪೊಲೀಸರು ಸಾಕ್ಷ್ಯಾಧಾರಗಳಿಲ್ಲ ಎಂದು ತಿಳಿಸಿ ಪ್ರಕರಣವನ್ನು ಇತ್ಯರ್ಥಪಡಿಸಿದ್ದರು.

ಆದರೆ, ಪೊಲೀಸರು ಪ್ರಕರಣ ಇತ್ಯರ್ಥಪಡಿಸಿದ್ದರೂ, ಚುನಾಯಿತ ಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಸಮನ್ಸ್ ಜಾರಿಗೊಳಿಸಿತ್ತು. ಸಮನ್ಸ್ ಪ್ರಶ್ನಿಸಿ ಸಿದ್ದರಾಮಯ್ಯ ಅವರು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

ಕಾಲೇಜು ಕಟ್ಟಡದಿಂದ ಜಿಗಿದು ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿಯ ಕೆ.ಆರ್.ರಸ್ತೆಯಲ್ಲಿರುವ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಐಟಿ) ಕಾಲೇಜು ಕಟ್ಟಡದ ಏಳನೇ ಮಹಡಿಯಿಂದ ಜಿಗಿದು ವಿದ್ಯಾರ್ಥಿ ಜಯಂತ್ ರೆಡ್ಡಿ (21) ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಆಂಧ್ರಪ್ರದೇಶದ ಜಯಂತ್, ದೊಡ್ಡಬೊಮ್ಮಸಂದ್ರದಲ್ಲಿ ನೆಲೆಸಿದ್ದರು. ಎಂಜಿನಿಯರಿಂಗ್ (ಕಂಪ್ಯೂಟರ್ ಸೈನ್ಸ್) 3ನೇ ಸೆಮಿಸ್ಟರ್ ವ್ಯಾಸಂಗ ಮಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಾ.6ರಿಂದ ಸೆಮಿಸ್ಟರ್ ಪರೀಕ್ಷೆ ನಿಗದಿಯಾಗಿತ್ತು. ಪರೀಕ್ಷೆಗೂ ಮುನ್ನ ಲ್ಯಾಬ್‌ನ ನಿಯೋಜಿತ ಕಾರ್ಯದ ವರದಿ ಸಲ್ಲಿಸಲೆಂದು ಜಯಂತ್, ಸೋಮವಾರ ಬೆಳಿಗ್ಗೆ 9 ಗಂಟೆಗೆ ಕಾಲೇಜಿಗೆ ಬಂದಿದ್ದರು. ಅದೇ ಸಂದರ್ಭದಲ್ಲಿ ಕಟ್ಟಡದಿಂದ ಜಿಗಿದಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು. ವಿ.ವಿ.ಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಜೇಬಿನಲ್ಲಿ ಮರಣಪತ್ರ: 'ಜಯಂತ್ ಜೇಬಿನಲ್ಲಿ ಮರಣಪತ್ರ ಸಿಕ್ಕಿದೆ. 'ದಿನವೂ ಸಾಯುವ ಬದಲು, ಒಮ್ಮೆಯೇ ಸಾಯುವುದು ಒಳ್ಳೆಯದು' ಎಂದು ಪತ್ರದಲ್ಲಿ ಬರೆಯಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದ್ದು, ಶಾಲಾ ಆಡಳಿತ ಮಂಡಳಿ ಹಾಗೂ ಪೋಷಕರನ್ನು ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.


ವಿದ್ಯಾರ್ಥಿಗಳ ಪ್ರತಿಭಟನೆ

ಜಯಂತ್ ಆತ್ಮಹತ್ಯೆ ಸುದ್ದಿ ತಿಳಿಯುತ್ತಿದ್ದಂತೆ ಕಾಲೇಜಿನಲ್ಲಿ ಸೇರಿದ್ದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

'ತರಾತುರಿಯಲ್ಲಿ ಪರೀಕ್ಷೆಗಳನ್ನು ನಿಗದಿ ಮಾಡಲಾಗಿದೆ. ಈ ಹಿಂದೆ ಒಂದೊಂದು ಪರೀಕ್ಷೆಗೆ ನಾಲ್ಕು ದಿನಗಳ ಅಂತರವಿರುತ್ತಿತ್ತು. ಆದರೆ, ಈ ಬಾರಿ ಒಂದು ದಿನ ಮಾತ್ರ ಅಂತರವಿದೆ. ಪರೀಕ್ಷಾ ಭಯದಿಂದಲೇ ಮಾನಸಿಕವಾಗಿ ನೊಂದು ಜಯಂತ್ ಆತ್ಮಹತ್ಯೆ ಮಾಡಿಕೊಂಡಿದ್ದು, ಇದಕ್ಕೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಹೊಣೆ' ಎಂದು ದೂರಿದರು.

ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಕಾಲೇಜು ಆಡಳಿತ ಮಂಡಳಿ, 'ವಿದ್ಯಾರ್ಥಿಗಳು, ಪೋಷಕರು ಹಾಗೂ ತಜ್ಞರ ಜೊತೆ ಚರ್ಚಿಸಿಯೇ ವಿಶ್ವವಿದ್ಯಾಲಯ ಪರೀಕ್ಷೆ ನಿಗದಿ ಮಾಡಿದೆ. ವಿದ್ಯಾರ್ಥಿಗಳ ಬೇಡಿಕೆಗಳನ್ನು ಕುಲಪತಿ ಹಾಗೂ ಕುಲಸಚಿವರಿಗೆ ತಿಳಿಸಲಾಗುವುದು' ಎಂದಿದೆ.

ಬಸವ ಸಮಿತಿಗೆ ಅರವಿಂದ ಜತ್ತಿ ಅಧ್ಯಕ್ಷ



ಬೆಂಗಳೂರು: ಬಸವ ಸಮಿತಿಯ ಅಧ್ಯಕ್ಷರಾಗಿ ಅರವಿಂದ ಜತ್ತಿ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ. ಅವರ ಅಧಿಕಾರಾವಧಿ 2025ರವರೆಗೆ ಇರಲಿದೆ.

681 ಕೆ.ಜಿ ಗಾಂಜಾ ಜಪ್ತಿ: 8 ಮಂದಿ ಸೆರೆ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ಕಾರ್ಯಾಚರಣೆ ಮುಂದುವರಿಸಿರುವ ಮಾದಕ ವಸ್ತು ನಿಗ್ರಹ ಘಟಕದ (ಎನ್‌ಸಿಬಿ) ಅಧಿಕಾರಿಗಳು, ಫೆ. 24ರಂದು ಡ್ರಗ್ಸ್ ಜಾಲವೊಂದನ್ನು ಭೇದಿಸಿದ್ದಾರೆ. ಜಾಲದಲ್ಲಿದ್ದ ಎಂಟು ಮಂದಿಯನ್ನು ಬಂಧಿಸಿ, 681 ಕೆ.ಜಿ. ಗಾಂಜಾ ಜಪ್ತಿ ಮಾಡಿದ್ದಾರೆ.

'ಎಸ್.ಪವಾರ್, ವಿ. ಪವಾರ್, ಬಿ. ವಾರೆ, ಎಂ.ಧೋತ್ರೆ, ಡಿ. ದೇಶಮುಖ್, ಆರ್. ಗುಂಜಳ, ಎ. ಗಾಂಧಿ ಹಾಗೂ ಎಸ್. ಸನಪ್ ಬಂಧಿತರು. ಇವರೆಲ್ಲರೂ ಗುಂಪು ಕಟ್ಟಿಕೊಂಡು ಹಲವು ತಿಂಗಳಿನಿಂದ ಡ್ರಗ್ಸ್ ದಂಧೆ ನಡೆಸುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಹೈದರಾಬಾದ್ ಉಪ ವಲಯದ ಅಧಿಕಾರಿಗಳ ತಂಡವು ಆರೋಪಿಗಳನ್ನು ಬಂಧಿಸಿದೆ' ಎಂದು ಎನ್‌ಸಿಬಿ ಬೆಂಗಳೂರು ವಲಯ ನಿರ್ದೇಶಕ ಅಮಿತ್ ಘಾವಟೆ ತಿಳಿಸಿದ್ದಾರೆ.

'ಒಡಿಶಾ ಹಾಗೂ ಆಂಧ್ರಪ್ರದೇಶದಲ್ಲಿ ಗಾಂಜಾ ಖರೀದಿ ಮಾಡುತ್ತಿದ್ದ ಆರೋಪಿಗಳು, ಅದನ್ನೇ ಮಹಾರಾಷ್ಟ್ರ ಹಾಗೂ ಇತರೆಡೆ ಸರಬರಾಜು ಮಾಡುತ್ತಿದ್ದರು. ಅದೇ ಗಾಂಜಾವನ್ನು ಕೆಲ ಏಜೆಂಟರು ಮಾರಾಟ ಮಾಡುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳು ಹಾಗೂ ಕೆಲ ಕೂಲಿ ಕಾರ್ಮಿಕರು ಆರೋಪಿಗಳ ಬಳಿ ಗಾಂಜಾ ಖರೀದಿ ಮಾಡುತ್ತಿದ್ದ ಮಾಹಿತಿ ಇದೆ' ಎಂದೂ ಹೇಳಿದ್ದಾರೆ.

'ಪಾರ್ಸೆಲ್ ರೀತಿಯಲ್ಲಿ ಗಾಂಜಾವನ್ನು ಪೊಟ್ಟಣದಲ್ಲಿ ತುಂಬುತ್ತಿದ್ದ ಆರೋಪಿಗಳು, ತಮ್ಮದೇ ಸ್ವಂತ ವಾಹನದಲ್ಲಿ ಸಾಗಣೆ ಮಾಡುತ್ತಿದ್ದರು. ಅದನ್ನು ಪತ್ತೆ ಮಾಡಲು ಫೆ. 24ರಂದು ತೆಲಂಗಾಣದ ರಂಗರೆಡ್ಡಿ ಜಿಲ್ಲೆಯ ಚೆಕ್‌ಪೋಸ್ಟ್‌ನಲ್ಲಿ ವಾಹನಗಳ ತಪಾಸಣೆ ನಡೆಸಲಾಯಿತು. ಅದೇ ವೇಳೆ ಆರೋಪಿಗಳು ಸಿಕ್ಕಿಬಿದ್ದರು. ಅವರ ವಾಹನಗಳನ್ನೂ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದ್ದಾರೆ.

ಚಿತ್ರಾವಳಿ



ನವನಗರೋತ್ಥಾನ ಯೋಜನೆಯಡಿ ಜಲದರ್ಶಿನಿ ಬಡಾವಣೆ ಹಾಗೂ ಬಸವೇಶ್ವರ ಬಡಾವಣೆಗಳಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಗೆ ಶಾಸಕ ಬೈರತಿ ಸುರೇಶ್ ಸೋಮವಾರ ಚಾಲನೆ ನೀಡಿದರು. ಹೆಬ್ಬಾಳ ಬ್ಲಾಕ್ ಕಾಂಗ್ರೆಸ್‌ನ ಪದಾಧಿಕಾರಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಇದ್ದರು



ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆಮಹಾಲಕ್ಷ್ಮೀಪುರ ವೀರಶೈವಲಿಂಗಾಯತ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಂಘದ ಅಧ್ಯಕ್ಷ ಅವಿನ್ ಆರಾಧ್ಯ, ಹೊನ್ನಮ್ಮಗವಿ ಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಅಬಕಾರಿ ಸಚಿವ ಕೆ.ಗೋಪಾಲಯ್ಯ, ವೀರಶೈವ ಲಿಂಗಾಯತ ನಿಗಮದ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ ಹಾಗೂ ಸಂಘದ ಪದಾಧಿಕಾರಿಗಳು ಇದ್ದರು.

ರಾಜಸ್ಥಾನ, ಉತ್ತರ ಪ್ರದೇಶದಿಂದ ಪಿಸ್ತೂಲ್ ಸಾಗಣೆ: 8 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಸ್ಥಾನ ಹಾಗೂ ಉತ್ತರ ಪ್ರದೇಶದಿಂದ ನಾಡ ಪಿಸ್ತೂಲ್‌ಗಳನ್ನು ತಂದು ರಾಜ್ಯದಲ್ಲಿ ಮಾರಾಟ ಮಾಡುತ್ತಿದ್ದ ಜಾಲವನ್ನು ಪಶ್ಚಿಮ ವಿಭಾಗದ ಪೊಲೀಸರು ಭೇದಿಸಿದ್ದು, ಜಾಲದಲ್ಲಿದ್ದ ಎಂಟು ಮಂದಿಯನ್ನು ಬಂಧಿಸಿದ್ದಾರೆ.

'ಆರ್.ಕೆ. ಹೆಗ್ಡೆ ನಗರದ ಕದೀರ್ ಖಾನ್ (32), ಫೈಯಾಜುಲ್ಲಾ ಖಾನ್ (31), ಚೆನ್ನೈನ ವಿನಯ್ (29), ಉತ್ತರಪ್ರದೇಶದ ಪರಾಗ್‌ಕುಮಾರ್ (39), ಗುಜರಾತ್‌ನ ಶಹನವಾಜ್ ಅನ್ಸಾರಿ (29), ಮಧ್ಯಪ್ರದೇಶದ ನಾಸೀರ್ ಶೇಖ್ (50), ಸಲ್ಮಾನ್ ಖಾನ್ (28) ಹಾಗೂ ಫಕ್ರುದ್ದೀನ್ (37) ಬಂಧಿತರು. ಅವರಿಂದ 13 ನಾಡ ಪಿಸ್ತೂಲ್ ಹಾಗೂ 52 ಜೀವಂತ ಗುಂಡುಗಳನ್ನು ಜಪ್ತಿ ಮಾಡಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

'ಆರೋಪಿಗಳು, ತಮ್ಮದೇ ಗ್ಯಾಂಗ್ ಕಟ್ಟಿಕೊಂಡು ಕೃತ್ಯ ಎಸಗುತ್ತಿದ್ದರು. ನಗರ ಹಾಗೂ ಹೊರ ಜಿಲ್ಲೆಗಳಲ್ಲಿ ಇವರು ಪಿಸ್ತೂಲ್ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಇದೆ. ಈ ಜಾಲ ಪತ್ತೆ ಮಾಡಿರುವ ಪಶ್ಚಿಮ ವಿಭಾಗದ ಪೊಲೀಸರ ತಂಡಕ್ಕೆ ₹ 75 ಸಾವಿರ ಬಹುಮಾನ ಘೋಷಿಸಲಾಗಿದೆ' ಎಂದೂ ಅವರು ಹೇಳಿದರು.

ವಸತಿಗೃಹದಲ್ಲಿ ಸಿಕ್ಕಿಬಿದ್ದ: 'ಅಕ್ರಮವಾಗಿ ಪಿಸ್ತೂಲ್ ಸಾಗಣೆ ಮಾಡಿಕೊಂಡು ಬಂದಿದ್ದ ಆರೋಪಿ ಕದೀರ್ ಖಾನ್, ಸಿಟಿ ಮಾರ್ಕೆಟ್ ಠಾಣೆ ವ್ಯಾಪ್ತಿಯ ಜೆ.ಪಿ. ಸ್ಟ್ರೀಟ್‌ನಲ್ಲಿರುವ ವಸತಿಗೃಹವೊಂದರಲ್ಲಿ ಉಳಿದುಕೊಂಡಿದ್ದ. ಆತನ ಬಳಿ ಪಿಸ್ತೂಲ್ ಹಾಗೂ ಗುಂಡುಗಳು ಇದ್ದು, ಯಾರಿಗೂ ಮಾರಾಟ ಮಾಡಲು ಬಂದಿರುವುದಾಗಿ ಠಾಣೆಗೆ ಮಾಹಿತಿ ಬಂದಿತ್ತು' ಎಂದು ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

'ಇನ್‌ಸ್ಪೆಕ್ಟರ್ ಬಿ.ಜಿ. ಕುಮಾರಸ್ವಾಮಿ ನೇತೃತ್ವದ ತಂಡ, ವಸತಿಗೃಹಕ್ಕೆ ಹೋಗಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗಲೇ ಜಾಲದ ಕೃತ್ಯಗಳು ಬಯಲಾದವು. ಆತ ನೀಡಿದ್ದ ಮಾಹಿತಿ ಆಧರಿಸಿ ಉಳಿದ ಆರೋಪಿಗಳನ್ನು ಸೆರೆಹಿಡಿಯಲಾಯಿತು' ಎಂದೂ ತಿಳಿಸಿದರು.

ಕೊಲೆ ಪ್ರಕರಣದ ಆರೋಪಿ: 'ಬಂಧಿತ ಆರೋಪಿ ಫೈಯಾಜುಲ್ಲಾ ಖಾನ್ ವಿರುದ್ಧ ಸಂಪಿಗೆಹಳ್ಳಿ ಠಾಣೆಯಲ್ಲಿ ಕೊಲೆ ಪ್ರಕರಣ ಹಾಗೂ ಬಾಗಲೂರು ಠಾಣೆಯಲ್ಲಿ ಅಕ್ರಮ ಶಸ್ತ್ರಾಸ್ತ್ರ ಹೊಂದಿದ್ದ ಪ್ರಕರಣ ದಾಖಲಾಗಿವೆ' ಎಂದೂ ಪಾಟೀಲ ಹೇಳಿದರು.

'ರಾಜಸ್ಥಾನ ಹಾಗೂ ಉತ್ತರ ಪ್ರದೇಶದ ಮುಜಾಫರ್ ನಗರದಲ್ಲಿ ನಾಡ ಪಿಸ್ತೂಲ್ ತಯಾರಿಕೆ ಮಾಡಲಾಗುತ್ತಿದೆ. ಅಲ್ಲಿಯ ನಿವಾಸಿಗಳಾಗಿರುವ ಕೆಲ ಆರೋಪಿಗಳು, ನಗರದಲ್ಲಿರುವ ಆರೋಪಿಗಳಿಗೆ ಪಿಸ್ತೂಲ್ ಸರಬರಾಜು ಮಾಡುತ್ತಿದ್ದರು. ಒಂದು ಪಿಸ್ತೂಲ್‌ಗೆ ₹80 ಸಾವಿರದಿಂದ ₹ 1 ಲಕ್ಷದವರೆಗೂ ನಿಗದಿ ಮಾಡಿ ಮಾರಾಟ ಮಾಡುತ್ತಿದ್ದರು.'

'ಅಪರಾಧ ಹಿನ್ನೆಲೆಯುಳ್ಳ ಕೆಲವರು, ಆರೋಪಿಗಳ ಬಳಿ ಪಿಸ್ತೂಲ್ ಖರೀದಿಸಿ ಅಪರಾಧ ಕೃತ್ಯಗಳಿಗೆ ಬಳಸಿರುವ ಮಾಹಿತಿ ಇದೆ' ಎಂದೂ ಪಾಟೀಲ ತಿಳಿಸಿದರು.

ಪೊಲೀಸರ ಎದುರೇ ಪ್ಯಾಂಟ್ ಬಿಚ್ಚಿ ಅಸಭ್ಯ ವರ್ತನೆ

ಬೆಂಗಳೂರು: ತನ್ನನ್ನು ವಶಕ್ಕೆ ಪಡೆಯಲು ಬಂದ ಪೊಲೀಸರ ಎದುರೇ ಆರೋಪಿಯೊಬ್ಬ ಪ್ಯಾಂಟ್ ಬಿಚ್ಚಿ ಅಸಭ್ಯವಾಗಿ ವರ್ತಿಸಿರುವ ಘಟನೆ ಹುಳಿಮಾವು ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

'ಠಾಣೆ ವ್ಯಾಪ್ತಿಯಲ್ಲಿ ಬೇಕರಿ ಮಾಲೀಕರ ಜೊತೆ ಜಗಳ ಮಾಡಿಕೊಂಡು ಅಸಭ್ಯವಾಗಿ ವರ್ತಿಸಿದ್ದ ಆರೋಪದಡಿ ನಾಗೇಶ್ ಎಂಬಾತನನ್ನು ಬಂಧಿಸಲಾಗಿದೆ. ಇದೀಗ ಆತ, ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ಥಳೀಯ ನಿವಾಸಿ ನಾಗೇಶ್, ಕುಡಿದ ಅಮಲಿನಲ್ಲಿ ಫೆ. 26ರಂದು ರಾತ್ರಿ ಬಸವನಪುರ ವೃತ್ತ ಬಳಿಯ ಬೇಕರಿಯೊಂದಕ್ಕೆ ಹೋಗಿ ಗಲಾಟೆ ಮಾಡಿದ್ದ. ಬೇಕರಿ ಮಾಲೀಕ ಹರೀಶ್ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದ್ದರು. ಗಸ್ತಿನಲ್ಲಿದ್ದ ಸಿಬ್ಬಂದಿ, ಸ್ಥಳಕ್ಕೆ ಹೋಗಿದ್ದರು.'

'ಪೊಲೀಸರ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ನಿಂದಿಸಿ ಸಮವಸ್ತ್ರ ಹಿಡಿದು ಎಳೆದಾಡಿದ್ದ. ಪತ್ನಿ,ಮಕ್ಕಳನ್ನು ಸ್ಥಳಕ್ಕೆ ಕರೆಸಿದ್ದ ಆರೋಪಿ, ಹೊಯ್ಸಳ ಗಸ್ತು ವಾಹನದ ಮುಂದೆ ಮಲಗಿ ಪ್ರತಿಭಟನೆ ಮಾಡುವಂತೆ ಹೇಳಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುಪಾರಿ ಹತ್ಯೆ: ಪತ್ನಿ, ಪುತ್ರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುತ್ರಿಯರ ಜೊತೆ ಅಸಭ್ಯವಾಗಿ ವರ್ತಿಸುತ್ತಿದ್ದನೆಂಬ ಕಾರಣಕ್ಕೆ ಮೊಹಮ್ಮದ್ ಹಂಜಲ್ (52) ಎಂಬುವರನ್ನು ಹತ್ಯೆ ಮಾಡಿಸಿದ್ದ ಆರೋಪದಡಿ, ಅವರ ಪತ್ನಿ ಹಾಗೂ ಮಗ ಸೇರಿ ಐವರನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹೆಗ್ಗನಹಳ್ಳಿ ನಿವಾಸಿ ಮೊಹಮ್ಮದ್ ಹಂಜಲ್ ಅವರನ್ನು ಫೆ. 10ರಂದು ಉಸಿರುಗಟ್ಟಿಸಿ ಕೊಲೆ ಮಾಡಲಾಗಿತ್ತು. ಹೃದಯಾಘಾತವೆಂದು ಪತ್ನಿ ಹಾಗೂ ಮಗ ನಾಟಕವಾಡಿದ್ದರು. ತನಿಖೆ ಕೈಗೊಂಡಾಗ ಕೊಲೆ ಎಂಬುದು ಸಾಬೀತಾಯಿತು' ಎಂದು ಪೊಲೀಸರು ಹೇಳಿದರು.

'ಕೊಲೆ ಆರೋಪದಡಿ ಪತ್ನಿ ಸರ್ವರಿ ಬೇಗಂ (42), ಪುತ್ರ ಶಫಿ ರೆಹಮಾನ್ (20), ಥಣಿಸಂದ್ರದ ನಿವಾಸಿ ಅಫ್ತಾಬ್ (21), ಪೀಣ್ಯದ ಸೈಯದ್ ಅವೆಜ್ ಪಾಷಾ (23) ಹಾಗೂ ಮಹಮ್ಮದ್ ಸೈಫ್ (20) ಬಂಧಿಸಲಾಗಿದೆ. ಅವರಿಂದ ₹ 98 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದೂ ಹೇಳಿದರು.

ಇಣುಕಿ ನೋಡುತ್ತಿದ್ದ ಹಂಜಲ್: 'ಚಪ್ಪಲಿ ತಯಾರಿಕೆ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮೊಹಮ್ಮದ್ ಹಂಜಲ್, ಪತ್ನಿ, ಮಗ ಹಾಗೂ ಮೂವರು ಪುತ್ರಿಯರ ಜೊತೆ ವಾಸವಿದ್ದರು. ಪುತ್ರಿಯರು ಬಟ್ಟೆ ಬದಲಾಯಿಸುವಾಗ ಹಾಗೂ ಸ್ನಾನಕ್ಕೆ ಹೋದಾಗ ಮೊಹಮ್ಮದ್ ಹಂಜಲ್ ಇಣುಕಿ ನೋಡುತ್ತಿದ್ದರು ಎನ್ನಲಾಗಿದೆ. ಅಲ್ಲದೆ ಪತ್ನಿಯ ಶೀಲದ ಬಗ್ಗೆಯೂ ಮೊಹಮ್ಮದ್ ಅನುಮಾನ ವ್ಯಕ್ತಪಡಿಸುತ್ತಿದ್ದರು. ಅದರಿಂದ ಬೇಸತ್ತ ಪತ್ನಿ ಹಾಗೂ ಮಗ ಕೊಲೆಗೆ ಸಂಚು ರೂಪಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ಪತಿಯನ್ನು ಹತ್ಯೆ ಮಾಡುವುದಕ್ಕಾಗಿ ಸರ್ವರಿ ಬೇಗಂ, ಅಫ್ತಾಬ್ ಹಾಗೂ ಆತನ ಸಹಚರರಿಗೆ ₹4.50 ಲಕ್ಷ ನೀಡುವುದಾಗಿ ಮಾತನಾಡಿದ್ದಳು. ಫೆ. 10ರಂದು ರಾತ್ರಿ ಊಟದಲ್ಲಿ ನಿದ್ರೆ ಮಾತ್ರೆ ಬೆರೆಸಿ ಪತಿಗೆ ತಿನ್ನಿಸಿದ್ದಳು. ತಡರಾತ್ರಿ ಮನೆಗೆ ಬಂದಿದ್ದ ಇತರೆ ಆರೋಪಿಗಳು, ಉಸಿರುಗಟ್ಟಿಸಿ ಮೊಹಮ್ಮದ್ ಅವರನ್ನು ಕೊಂದು ಪರಾರಿಯಾಗಿದ್ದರು.'

ತಿಗರಳರಾಳ್ಯದಲ್ಲಿ ಅಂತ್ಯಕ್ರಿಯೆಯನ್ನೂ ಮಾಡಲಾಗಿತ್ತು.

ರೌಡಿ ಬಳಿ ಹೇಳಿಕೊಂಡಿದ್ದ ಆರೋಪಿ: 'ಹತ್ಯೆ ಮಾಡಿದ್ದ ಆರೋಪಿಗಳಿಗೆ ₹ 1 ಲಕ್ಷ ಮಾತ್ರ ನೀಡಿದ್ದರು. ಇದೇ ವಿಷಯವನ್ನು ಆರೋಪಿಯೊಬ್ಬ, ರೌಡಿಯೊಬ್ಬನ ಬಳಿ ಹೇಳಿದ್ದ. ಆ ಸಂಗತಿ ತಿಳಿಯುತ್ತಿದ್ದಂತೆ ಪೊಲೀಸರು ತನಿಖೆಗೆ ಇಳಿದಿದ್ದರು. ಆರೋಪಿಗಳನ್ನು ವಿಚಾರಣೆ ನಡೆಸಿದಾಗ ಕೊಲೆ ರಹಸ್ಯ ಬಯಲಾಯಿತು' ಎಂದೂ ಪೊಲೀಸ್ ಮೂಲಗಳು ಹೇಳಿವೆ.



ಪ್ರೀತಿ ಇಲ್ಲದಿದ್ದರೂ ಬದುಕಬಹುದು; ಆದರೆ ನೀರಿಲ್ಲದೆ ಬದುಕೇ ಇಲ್ಲ.



ಇಂದು ಎಲ್ಲರನ್ನೂ ಕಾಡುತ್ತಿರುವ ಸಮಸ್ಯೆ ಎಂದರೆ ಒತ್ತಡ. ಇದು ಆಧುನಿಕ ಜೀವನವಿಧಾನದ ಅಡ್ಡಪರಿಣಾಮ ಎಂದರೂ ತಪ್ಪಾಗದು. ಇದರಿಂದ ಪರಿಹಾರಕ್ಕೆ ಇಲ್ಲಿದೆ ಸರಳ ದಾರಿಗಳು...

ಚಿಂತೆ ಬಿಡಿ

ಚಿಂತೆ ಎನ್ನುವುದು ತೂಗುವ ಕುರ್ಚಿಯಿದ್ದಂತೆ, ಏನೋ ಒಂದು ಕೆಲಸವನ್ನು ಮಾಡುತ್ತಿದ್ದರೂ, ನಾವು ಇದ್ದಲ್ಲೇ ಇರುತ್ತೇವೆ. ಆದ್ದರಿಂದ ಆ ಸಮಯದಲ್ಲಿ ಚಿಂತೆಯಿಂದ ಮುಕ್ತಿ ಪಡೆಯಲು ನಮಗಿಷ್ಟವಾದ ಕೆಲಸದ ಬಗ್ಗೆ, ಇಷ್ಟವಾದ ಜನರ ಬಗ್ಗೆ ಮನನ ಮಾಡಬೇಕು. ನಮ್ಮ ಗಮನವನ್ನು ಬೇರೆಡೆಗೆ ಹರಿಸಬೇಕು. ಏಕಾಗ್ರತೆಯಿಂದ ಧ್ಯಾನ ಮಾಡುವುದರಿಂದಲೂ ಒತ್ತಡವನ್ನು ಕಡಿಮೆ ಮಾಡಬಹುದು.

ಒತ್ತಡದಿಂದ ಬಿಡುಗಡೆ

ಲಾವಣ್ಯಗೌರಿ ವೆಂಕಟೇಶ್

ಜೀವನ ಸುಖಮಯವಾದಷ್ಟೂ ಒತ್ತಡ ಹೆಚ್ಚಾಗುತ್ತಿದೆ. ಈ ಒತ್ತಡ ಅಥವಾ ಸ್ಟ್ರೆಸ್ ಎಂದು ಯಾವುದಕ್ಕೆ ಕರೆಯುತ್ತೇವೆಯೋ ಅದನ್ನು ಈ ಪೀಳಿಗೆಯಲ್ಲಿ ಅನುಭವಿಸದವರೇ ಇಲ್ಲ ಎನ್ನಬಹುದು.

ಒತ್ತಡದಿಂದ ಮುಕ್ತಿಯೇ ಇಲ್ಲವೇ? ಒತ್ತಡ ಹೇಗೆ ಬರುತ್ತದೆ?

ಒತ್ತಡರಹಿತ ಜೀವನ ಖಂಡಿತ ಸಾಧ್ಯವಿದೆ. ಎಷ್ಟೇ ಭಾರವಾದರೂ, ಹೇರಿಕೆಯಾದರೂ ಅದನ್ನು ನಾವು ಹೇಗೆ ನಿರ್ವಹಿಸುತ್ತೇವೆ ಹಾಗೂ ಹೇಗೆ ನಿಭಾಯಿಸುತ್ತೇವೆ ಎಂಬುದರ ಮೇಲೆ ನಮ್ಮ ಒತ್ತಡದ ಪ್ರಮಾಣ ಅವಲಂಬಿತವಾಗಿರುತ್ತದೆ. ಹಿಂದಿನ ಕಾಲದಲ್ಲಿ ದೈಹಿಕ ಕೆಲಸವನ್ನು ಮಾಡಿ ಅದಕ್ಕೆ ತಕ್ಕಂತೆ ವಿಶ್ರಾಂತಿಯನ್ನು ಪಡೆಯುತ್ತಿದ್ದರು. ಸಲ್ಲದ ಚಿಂತೆ ಮಾಡಲು ಅವರು ಅವಕಾಶವನ್ನೇ ಕೊಡುತ್ತಿರಲಿಲ್ಲ. ಆದರೀಗ ತಂತ್ರಜ್ಞಾನದ ಸಹಾಯದಿಂದ ದೈಹಿಕ ಕೆಲಸ ಕಡಿಮೆ ಹಾಗೂ ಮಾನಸಿಕ ಕೆಲಸ ಹೆಚ್ಚು! ಅಂದುಕೊಂಡದ್ದು ಸಿಗದಾದಾಗ ಆಗುವ ಹತಾಶೆಯೇ ಒತ್ತಡ. ಪ್ರತಿಯೊಂದಕ್ಕೂ ಒಂದು ಮಿತಿ ಇರುತ್ತದೆ. ಅದು ಮೀರಿದಾಗ ಒತ್ತಡ ಉಂಟಾಗುತ್ತದೆ. ದೇಹದ ಮೇಲಾಗಲೀ, ಮನಸ್ಸಿನ ಮೇಲಾಗಲೀ ಅದು ತಡೆಯುವಷ್ಟು ಮಾತ್ರ ಭಾರ ಅಥವಾ ಶ್ರಮವನ್ನು ಹಾಕಬೇಕು. ಹೆಚ್ಚಾದಾಗ ಒತ್ತಡವು ಕೋಪ, ದುಃಖ, ಖಿನ್ನತೆಯ ರೂಪದಲ್ಲಿ ಹೊರಗೆ ಬರುತ್ತದೆ.

ಹಾಗಾದರೆ ಇದಕ್ಕೆ ಪರಿಹಾರವೇನು?

ಒತ್ತಡವಾಗಲೀ, ಸಂತೋಷವಾಗಲೀ ನಮ್ಮೊಳಗೇ ಇದೆ. ಇದರ ಅರಿವಾದಲ್ಲಿ ಮನಸ್ಸಿನ ನಿಯಂತ್ರಣ ನಮ್ಮ ಕೈಲಿರುತ್ತದೆ.

- **ಉಸಿರಾಟ**

ಒತ್ತಡದಲ್ಲಿದ್ದಾಗ ನಿಮ್ಮ ಉಸಿರಾಟವನ್ನು ಗಮನಿಸಿ. ಉಸಿರಾಟ ತೀವ್ರವಾಗಿರುತ್ತದೆ. ರಕ್ತದೊತ್ತಡವೂ ಹೆಚ್ಚಿರುತ್ತದೆ. ಇಂತಹ ಸಮಯದಲ್ಲಿ ಒತ್ತಡವನ್ನು ಕಡಿಮೆ ಮಾಡಲು ದೀರ್ಘವಾದ ಉಚ್ಛ್ವಾಸ ಹಾಗೂ ನಿಃಶ್ವಾಸವನ್ನು ಮಾಡಬೇಕು. ಇದರಿಂದ ರಕ್ತ ಪರಿಚಲನೆ ಸರಿಯಾಗಿ ಆಗುತ್ತದೆ. ಆಗ ನರಗಳ ಬಿಗಿತ ಕಡಿಮೆಯಾಗಿ ಮಸ್ತಿಷ್ಕ ಪ್ರಶಾಂತವಾಗುತ್ತದೆ.

- **ವ್ಯಾಯಾಮ**

ವ್ಯಾಯಾಮ ಮಾಡುವುದರಿಂದಲೂ ಒತ್ತಡವನ್ನು ಕಡಿಮೆ ಮಾಡಬಹುದು. ಒತ್ತಡ ದೇಹಕ್ಕಾಗಲೀ ಅಥವಾ ಮನಸ್ಸಿಗಾಗಲೀ ಆದಾಗ ದೇಹದ ಮಾಂಸಖಂಡಗಳ ಬಿಗಿತ ಉಂಟಾಗುತ್ತದೆ. ವ್ಯಾಯಾಮದಿಂದ ದೇಹದ ಮಾಂಸಖಂಡಗಳು ಸಡಿಲಗೊಳ್ಳುತ್ತವೆ. ಆಗ ಒತ್ತಡದ ನಿವಾರಣೆಯಾಗುತ್ತದೆ.

- **ಹವ್ಯಾಸಗಳು**

ನಮ್ಮಿಷ್ಟದ ವಿರುದ್ಧದ ಕೆಲಸ ಅಥವಾ ಚಿಂತೆ ಮಾಡಿದಾಗ ಒತ್ತಡ ಹೆಚ್ಚಾಗುತ್ತದೆ. ಒತ್ತಡವಾದಾಗ, ನಿಮಗಿಷ್ಟವಾದ ಕೆಲಸವನ್ನು ಮಾಡಿ. ನಿಮಗಿಷ್ಟವಾದ ಹವ್ಯಾಸವನ್ನು ರೂಢಿಸಿಕೊಳ್ಳಿ. ಅದೇನೇ ಆಗಿರಲಿ, ಹಾಡು, ನರ್ತನ, ಅಡುಗೆ, ಚಿತ್ರಕಲೆ, ಓದು, ಬರೆಹ – ಹೀಗೆ ಯಾವುದು ನಿಮಗಿಷ್ಟವೋ ಅದನ್ನು ಮಾಡಿ.

- **ಧೂಮಪಾನ, ಮದ್ಯಪಾನ, ಕೆಫೇನ್‌ನಿಂದ ದೂರವಿರಿ**

ಒತ್ತಡವಾದಾಗ ಬಹಳಷ್ಟು ಜನರು ಹೆಚ್ಚಾಗಿ ತೆಗೆದುಕೊಳ್ಳುವ ಬೇಡದ ವಸ್ತುಗಳು ಇವು. ಆ ನಿಮಿಷಕ್ಕೆ ನಿಮ್ಮನ್ನು ಒತ್ತಡದ ಚಿಂತೆಯ ಹೇರಿಕೆಯಿಂದ ದೂರವಿಟ್ಟರೂ, ಇವು ಅಪಾಯಕಾರಿ! ಇವುಗಳ ಸೇವನೆಯಿಂದ ಒತ್ತಡ ಹೆಚ್ಚಾಗುತ್ತದೆ.

- **ನಿದ್ರೆ**

ನಿದ್ರಾಹೀನತೆ ಕೂಡ ಒತ್ತಡಕ್ಕೆ ಎಡೆಮಾಡಿಕೊಡುತ್ತದೆ. ವಿಪರ್ಯಾಸವೆಂದರೆ ಒತ್ತಡದಿಂದ ನಿದ್ರಾಹೀನತೆ ಉಂಟಾಗುತ್ತದೆ! ಒತ್ತಡವಾದಾಗ ಬಾಧಿಸುವ ಚಿಂತೆಗಳಿಂದ ನಿದ್ರಾಹೀನತೆ ಬರುತ್ತದೆ. ಒತ್ತಡದ ಚಿಂತೆಗಳಿಂದ ನಮ್ಮ ಗಮನವನ್ನು ಬೇರೆಡೆಗೆ ಹರಿಸಿದಾಗ ನಿದ್ರೆ ಬರುತ್ತದೆ. ಈ ನಿಟ್ಟಿನಲ್ಲಿ ಗಮನ ಯಾವಾಗಲೂ ಧನಾತ್ಮಕವಾಗಿರಬೇಕು. ಸಕಾರಾತ್ಮಕ ಚಿಂತನೆಯಿಂದ ದೇಹ ಹಾಗೂ ಮನಸ್ಸು ಎರಡಕ್ಕೂ ಶಾಂತಿ ಸಿಗುತ್ತದೆ. ಆಗ ನಿದ್ರೆ ತಾನಾಗೇ ಬರುತ್ತದೆ.

- **ವಿಶ್ವಾಸದಿಂದಿರಿ**

ನಿಮ್ಮ ಮೇಲೆ ನಿಮಗೆ ವಿಶ್ವಾಸವಿರಲಿ. ನಿಮ್ಮ ದೈಹಿಕ ಬಲದ ಅರಿವು ನಿಮಗಿರಲಿ. ಅತಿಯಾದ ಕೆಲಸದಿಂದಲೂ ಒತ್ತಡ ಉಂಟಾಗುತ್ತದೆ. ನಿಮಗೆ ಸಾಕು ಎಂದೆನ್ನಿಸಿದಾಗ ನಿಲ್ಲಿಸಿ. ಬೇರೆಯವರ ಒತ್ತಾಯಕ್ಕಾಗಿ ಕೆಲಸವನ್ನು ಮಾಡಬೇಡಿ. ಬೇಡವೆನ್ನಿಸಿದಾಗ 'ಬೇಡ' ಎಂದು ಹೇಳುವುದನ್ನು ರೂಢಿಸಿಕೊಳ್ಳಿ.

- **ನಗು**

ಹಿತೈಷಿಗಳೊಂದಿಗೆ ಒಳ್ಳೆಯ ಸಮಯವನ್ನು ಕಳೆಯಿರಿ. ನಗುವ ಅವಕಾಶವನ್ನು ಕಳೆದುಕೊಳ್ಳಬೇಡಿ.

ನೀರು ಏಕೆ ಬೇಕು? ಹೇಗೆ ಕುಡಿಯಬೇಕು?

ಡಾ. ವಿನಯ ಶ್ರೀನಿವಾಸ್

ನಾವು ಕುಡಿಯುವ ನೀರಿಗೆ ಮಾಂತ್ರಿಕ ಶಕ್ತಿ ಇದೆ. ದಿನವೂ ಸರಿಯಾದ ಪ್ರಮಾಣದಲ್ಲಿ, ಸೂಕ್ತರೀತಿಯಲ್ಲಿ ಕುಡಿದಾಗ ದೇಹ ಹಾಗೂ ಮನಸ್ಸನ್ನು ಪ್ರಫುಲ್ಲವಾಗಿರಿಸಿ ವ್ಯಕ್ತಿಯ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಶಕ್ತಿ ಅದಕ್ಕಿದೆ.

ವ್ಯಕ್ತಿ ದಿನವೊಂದರಲ್ಲಿ ಕನಿಷ್ಠ 2.5ರಿಂದ 3.5 ಲೀಟರ್‌ಗಳಷ್ಟು ನೀರು ಕುಡಿಯಬೇಕು. ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿಯೆ ಕುಡಿಯುವ ಎರಡರಿಂದ ಮೂರು ಲೋಟ ನೀರು ನಮ್ಮನ್ನು ದಿನವಿಡೀ ಚೈತನ್ಯಶಾಲಿಗಳನ್ನಾಗಿರಿಸಬಲ್ಲದು. ಆಹಾರ ಸೇವಿಸುವ ಅರ್ಧ ಗಂಟೆಯ ಮೊದಲು ಹಾಗೂ ಆಹಾರ ಸೇವಿಸಿದ ಅರ್ಧ ತಾಸಿನ ಬಳಿಕ ನೀರನ್ನು ಕುಡಿಯುವುದು ಜೀರ್ಣಕ್ರಿಯೆಗೆ ಕೂಡ ಸಹಕಾರಿ. ಬೇಸಿಗೆಯಲ್ಲೇನೋ ಬಾಯಾರಿಕೆಯಾದಾಗಲೆಲ್ಲ ನೀರನ್ನು ಕುಡಿಯುತ್ತೇವೆ. ಮಳೆ ಹಾಗೂ ಚಳಿಗಾಲದಲ್ಲಿ ಕೂಡ ಅಷ್ಟೇ ಪ್ರಮಾಣದ ನೀರು ಕುಡಿಯಬೇಕೆಂಬುದನ್ನು ಪ್ರತಿಯೊಬ್ಬರೂ ನೆನಪಿನಲ್ಲಿಟ್ಟುಕೊಳ್ಳಬೇಕು.

ನಮ್ಮ ಶರೀರಕ್ಕೆ ಅಗತ್ಯವಾದ ನೀರಿನಾಂಶವು ಹಣ್ಣು, ತರಕಾರಿ, ಕಾಫಿ, ಚಹ, ಇತರ ಪಾನೀಯಗಳ ರೂಪದಲ್ಲಿಯೂ ತಲುಪುತ್ತದೆ. ಹಾಗಾಗಿ ಆಯಾ ಕಾಲದಲ್ಲಿ ದೊರಕುವ ತಾಜಾ ಕಲ್ಲಂಗಡಿ, ಕರಬೂಜ, ಕಿತ್ತಳೆ ಮೊದಲಾದ ಹಣ್ಣುಗಳ ಸೇವನೆ ಕೂಡ ಮುಖ್ಯ. ಆದರೆ ಪಾನೀಯಗಳನ್ನು ಕುಡಿಯುವಾಗ ಚಹ-ಕಾಫಿ ಅತಿಯಾಗದಂತೆ ಗಮನ ವಹಿಸಬೇಕು. ಅಂತೆಯೇ ಇಂಗಾಲಯುಕ್ತ ಪಾನೀಯಗಳು ನೀರಿನಾಂಶದ ಜೊತೆಯಲ್ಲಿ ಹೆಚ್ಚಾದ ಕ್ಯಾಲೊರಿಗಳನ್ನು ಹೊಂದಿರುವುದರಿಂದ ಅವುಗಳ ಸೇವನೆ ಅಪಾಯ.

ನೀರು ನಮ್ಮ ಆರೋಗ್ಯವನ್ನು ಕಾಪಾಡಲು ಹೇಗೆ ನೆರವಾಗಬಲ್ಲದು?

- ಶರೀರದ ಕಲ್ಮಶಗಳನ್ನು ಹೊರ ಹಾಕಲು ನೀರು ಅತ್ಯಗತ್ಯ. ಮಲ, ಮೂತ್ರ, ಉಸಿರು ಹಾಗೂ ಬೆವರಿನ ಮೂಲಕ ದೇಹದಿಂದ ವಿಷಕಾರಿಕ ವಸ್ತುಗಳ ವಿಸರ್ಜನೆಗೆ ನೀರು ಬೇಕೇ ಬೇಕು.
- ಮಲಬದ್ಧತೆಗೆ ನೀರೇ ಅತ್ಯುತ್ತಮ ಔಷಧ.
- ಎಲ್ಲ ಅಂಗಾಂಗ ವ್ಯವಸ್ಥೆಗಳ, ಅದರಲ್ಲಿಯೂ ಮೂತ್ರಪಿಂಡಗಳ ಸಮರ್ಪಕ ಕಾರ್ಯನಿರ್ವಹಣೆಗೆ ನೀರು ಅತ್ಯವಶ್ಯ.
- ಮೂತ್ರಪಿಂಡ, ಮೂತ್ರ ಕೋಶ ಹಾಗೂ ಮೂತ್ರ ಚೀಲಗಳಲ್ಲಿ ಕಾಣಿಸಿಕೊಳ್ಳುವ ಸಣ್ಣ ಗಾತ್ರದ ಕಲ್ಲುಗಳನ್ನು ಹೊರಹಾಕಲು ನೀರಿನ ಚಿಕಿತ್ಸೆಯೇ ಸಾಕಾಗುತ್ತದೆ.
- ರಕ್ತದೊತ್ತಡ ಕಡಿಮೆ ಇರುವಂತಹ ಸಮಸ್ಯೆ ಇರುವವರು ಯಥೇಚ್ಛವಾಗಿ ನೀರನ್ನು ಕುಡಿಯಬೇಕು.
- ಮೈಮನಸ್ಸಿಗೆ ಚೈತನ್ಯವನ್ನು ತುಂಬಿ ಶರೀರದ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ನೀರು ಅಗತ್ಯ.
- ದೇಹದ ತೂಕ ಇಳಿಸಲೂ ಸಹಕಾರಿ.
- ದಿನವೂ ಸೂಕ್ತ ಪ್ರಮಾಣದಲ್ಲಿ ನೀರನ್ನು ಕುಡಿಯುವುದರಿಂದ ಕೆಲವೊಂದು ರೀತಿಯ ತಲೆನೋವು ಕೂಡ ಮಾಯವಾಗಬಲ್ಲದು.
- ದೇಹಕ್ಕಾದ ಆಯಾಸದಿಂದ ಚೇತರಿಸಿಕೊಳ್ಳಲು, ಮೈಮನಸ್ಸಿಗೆ ತಾಜಾತನವನ್ನು ತುಂಬಿಕೊಳ್ಳಲು ನೀರು ಸಹಕಾರಿ.
- ಸಮರ್ಪಕವಾಗಿ ನೀರನ್ನು ಕುಡಿದಾಗ ಆಗುವ ರಭಸದ ಮೂತ್ರ ವಿಸರ್ಜನಾ ಪ್ರಕ್ರಿಯೆ ಮೂತ್ರಕೋಶದ ತುದಿಯಲ್ಲಿನ ಸೂಕ್ಷ್ಮಾಣುಗಳನ್ನು ಸಹ ಹೊರಹಾಕಬಲ್ಲದು. ಇದರಿಂದ ಮೂತ್ರನಾಳಗಳ ಸೋಂಕನ್ನು ತಡೆಯಬಹುದು.
- ಶರೀರದ ಉಷ್ಣಾಂಶದ ಮಟ್ಟವನ್ನು ನಿಯಂತ್ರಿಸುವಲ್ಲಿಯೂ ನೀರು ಸಹಕಾರಿ.

ನೀರನ್ನು ಯಾರು ಹೆಚ್ಚು ಕುಡಿಯಬೇಕು?

- ವ್ಯಾಯಾಮ ಮಾಡುವವರು. ವ್ಯಾಯಾಮದ ಮೊದಲು, ವ್ಯಾಯಾಮ ಮಾಡುವಾಗ ಹಾಗೂ ನಂತರ
- ಆರ್ದ್ರತೆ (ಹ್ಯುಮಿಡಿಟಿ) ಹಾಗೂ ಉಷ್ಣಾಂಶ ಹೆಚ್ಚಿರುವ ಮತ್ತು ಎತ್ತರದ ಪ್ರದೇಶಗಳಲ್ಲಿ ವಾಸಿಸುವವರು
- ಅತಿಸಾರ, ವಾಂತಿ, ಮೂತ್ರಪಿಂಡದ ಕಲ್ಲು, ಮೂತ್ರನಾಳದ ಸೋಂಕು ಮೊದಲಾದ ಸಮಸ್ಯೆಗಳಿಂದ ಬಳಲುವವರು
- ಗರ್ಭಿಣಿಯರು ಹಾಗೂ ಮಗುವಿಗೆ ಹಾಲುಣಿಸುವ ತಾಯಂದಿರು

ಅಗತ್ಯತೆಗೆ ತಕ್ಕಂತೆ ನೀರನ್ನು ಕುಡಿಯದಿದ್ದಾಗ ವ್ಯಕ್ತಿ ನಿರ್ಜಲೀಕರಣದಿಂದ ಬಳಲಬಹುದು. ಅತಿಯಾದ ಬಾಯಾರಿಕೆ, ಆಯಾಸ, ಚರ್ಮ ಬಿಳಿಚಿಕೊಳ್ಳುವುದು, ಮೂತ್ರ ಗಾಢವಾದ ಬಣ್ಣಕ್ಕೆ ತಿರುಗುವುದು, ತಲೆ ಸುತ್ತುವಿಕೆ, ತಲೆನೋವು, ಕಣ್ಣು ಕತ್ತಲೆ ಬಂದಂತಾಗುವುದು, ರಕ್ತದೊತ್ತಡ ಕಡಿಮೆಯಾಗುವುದು – ಇವೇ ಮೊದಲಾದುವು ನಿರ್ಜಲೀಕರಣದ ಗುಣಲಕ್ಷಣಗಳು. ಇಂತಹ ಸಂದರ್ಭದಲ್ಲಿ ಒಂದು ಲೋಟ ಸ್ವಚ್ಛವಾದ ನೀರಿಗೆ ಒಂದು ಚಿಟಿಕೆ ಉಪ್ಪು ಮತ್ತು ಒಂದು ಚಮಚ ಸಕ್ಕರೆಯನ್ನು ಬೆರೆಸಿ ಕುಡಿಯುವುದು ಉತ್ತಮ. ಬೇಕಿದ್ದಲ್ಲಿ ಸ್ವಲ್ಪ ನಿಂಬೆ ರಸವನ್ನೂ ಬೆರೆಸಿದರೆ ಆಯಾಸ ಬೇಗನೇ ಮಾಯವಾಗಬಲ್ಲದು.

ನಿರಂತರವಾಗಿ ಕಾಡುವ ಅತಿಯಾದ ಬಾಯಾರಿಕೆ ಒಮ್ಮೊಮ್ಮೆ ಮಧುಮೇಹದ ಲಕ್ಷಣವಿದ್ದರೂ ಇರಬಹುದು. ಅದರ ಜೊತೆಯಲ್ಲಿ ಅತಿಯಾದ ಹಸಿವು ಮತ್ತು ಹೆಚ್ಚು ಬಾರಿ ಮೂತ್ರ ವಿಸರ್ಜನೆಯಾಗುತ್ತಿದ್ದರೆ ವೈದ್ಯರಲ್ಲಿ ಸಲಹೆ ಪಡೆಯುವುದು ಸೂಕ್ತ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎರಡು ಚರಾಕ್ಷಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

(ಮುಂದುವರಿದ ಭಾಗ)

ಗಣಿತ

ಎಸ್ಸೆಸ್ಸೆಲ್ಸಿ

ಸರಳರೇಖೆ ಮೇಲಿರುವ ಪ್ರತಿಯೊಂದು ಬಿಂದುವೂ ಸಮೀಕರಣಕ್ಕೆ ಸರಿಹೊಂದುತ್ತದೆ ಮತ್ತು ಸಮೀಕರಣದ ಪ್ರತಿಯೊಂದು ಪರಿಹಾರವೂ ಸರಳರೇಖೆಯ ಮೇಲಿನ ಒಂದು ಬಿಂದುವಾಗಿದೆ ಎಂದು ತೀರ್ಮಾನಿಸಬಹುದು. ಎರಡು ಚರಾಕ್ಷರಗಳಿರುವ ಒಂದು ರೇಖಾತ್ಮಕ ಸಮೀಕರಣವನ್ನು ಒಂದು ಸರಳರೇಖೆಯ ಮೂಲಕ ರೇಖಾಗಣಿತೀಯವಾಗಿ ಪ್ರತಿನಿಧಿಸುತ್ತೇವೆ.


ಒಂದನೆಯ ಘಾತದಲ್ಲಿರುವ ಬಹು ಪರೋಕ್ಷ ಸಮೀಕರಣ $ax + by + c = 0$ ಯನ್ನು ರೇಖಾತ್ಮಕ ಸಮೀಕರಣ ಎನ್ನುವ ಅದರ ರೇಖಾಗಣಿತೀಯ ಪ್ರತಿನಿಧಿಸುವಿಕೆಯು ಒಂದು ಸರಳ ರೇಖೆಯಾಗಿರುವುದು.

ಉದಾಹರಣೆ: $x + y = 7$ ನಕ್ಷೆಯನ್ನು ಬರೆಯಿರಿ:

ಪರಿಹಾರ: ನಕ್ಷೆಯನ್ನು ರಚಿಸಲು ಆ ಸಮೀಕರಣದ ಕನಿಷ್ಠ ಎರಡು ಪರಿಹಾರಗಳು ನಮಗೆ ಬೇಕು. $x = 0, y = 7$ ಮತ್ತು $x = 7, y = 0$ ಇವುಗಳ ದತ್ತ ಸಮೀಕರಣ.

ಪರಿಹಾರ


x	0	7
y	7	0



x ಅಕ್ಷ y ಮತ್ತು ಅಕ್ಷಗಳಿಗೆ ಸಮಾಂತರವಾಗಿರುವ ರೇಖೆಗಳ ಸಮೀಕರಣಗಳು

x ಎಂಬ ಒಂದು ಚರಾಕ್ಷರವನ್ನು ಮಾತ್ರ ಹೊಂದಿರುವ ಒಂದು ಸಮೀಕರಣವೆಂದು ನಾವಿದನ್ನು ತೆಗೆದುಕೊಂಡರೆ ಇದಕ್ಕೆ $x = 2$ ಎಂಬ ಏಕೈಕ ಪರಿಹಾರವಿರುತ್ತದೆ ಮತ್ತು ಇದು ಸಂಖ್ಯಾರೇಖೆಯ ಮೇಲಿನ ಒಂದು ಬಿಂದುವಾಗಿದೆ. ಎರಡು ಚರಾಕ್ಷರಗಳಿರುವ ಒಂದು ಸಮೀಕರಣವೆಂದು ಪರಿಗಣಿಸಿದರೆ ಇದನ್ನು $x + 0. y-2 = 0$ ಎಂದು ವ್ಯಕ್ತಪಡಿಸಬಹುದು. ಇದಕ್ಕೆ ಅಪರಿಮಿತ ಪರಿಹಾರಗಳಿವೆ. ವಾಸ್ತವದಲ್ಲಿ ಇವುಗಳೆಲ್ಲಾ (2, r)ರೂಪದಲ್ಲಿರುತ್ತವೆ. ಮತ್ತು r ಯಾವುದೇ ವಾಸ್ತವ ಸಂಖ್ಯೆಯಾಗಿದೆ.

(2, r) ರೂಪದಲ್ಲಿರುವ ಪ್ರತಿಯೊಂದು ಬಿಂದುವೂ ಈ ಸಮೀಕರಣಕ್ಕೆ ಪರಿಹಾರವಾಗುತ್ತದೆ.



ಉದಾಹರಣೆ: $2x + 1 = x-3$ ಸಮೀಕರಣವನ್ನು ಬಿಡಿಸಿ ಪರಿಹಾರವನ್ನು ಕಾರ್ಟೀಷಿಯನ್‌ಯನ್ನು ಸಮತಲದ ಮೇಲೆ ಪ್ರತಿನಿಧಿಸಿ.


ಪರಿಹಾರ: $2x + 1 = x-3$ ನ್ನು ನಾವು ಬಿಡಿಸಿದಾಗ ಸಿಗುವುದು

$2x-x = -3 -1$

$x = -4$ ಇದನ್ನು $x + 0. y = -4$ ಎಂದು ಬರೆಯಬಹುದು.

ಇದು x ಮತ್ತು y ಚರಾಕ್ಷರಗಳಲ್ಲಿನ ಒಂದು ರೇಖಾತ್ಮಕ ಸಮೀಕರಣವಾಗಿದೆ. ಈಗ y ನ ಯಾವುದೇ ಬೆಲೆಯನ್ನು ತೆಗೆದುಕೊಂಡರೂ $x = -4$ ಸಮೀಕರಣಕ್ಕೆ x ನ ಬೆಲೆ ಸರಿಹೊಂದಬೇಕು.

x	−4	−4	−4
y	0	2	3



ನಕ್ಷೆ AB ಯ ಸಮಾಂತರವಾದ ಒಂದು ಸರಳರೇಖೆ ಮತ್ತು y ಅಕ್ಷದಿಂದ ಏಕಮಾನ 4 ರೂಪದಲ್ಲಿ ಎಡಭಾಗದಲ್ಲಿದೆ.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ಜೀವಶಾಸ್ತ್ರ ವಿಭಾಗದ 'ಲೈಫ್ ಪ್ರೊಸೆಸ್: ಡೈಜೆಸ್ಟಿವ್ ಸಿಸ್ಟಂ' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://bit.ly/2ZY6THE

ಮಾತೃಕೆಗಳ ಸಮಾನತೆ

(ಮುಂದುವರಿದ ಭಾಗ)

ದ್ವಿತೀಯ ಪಿಯುಸಿ

ಗಣಿತ

ಎರಡು ಮಾತೃಕೆಗಳಾದ A = [aij] ಮತ್ತು B = [bij] ಗಳು ಸಮವಾಗಿವೆ ಎನ್ನುವುದಾದರೆ ಅವುಗಳ ದರ್ಜೆಗಳು ಸಮಾನವಾಗಿರಬೇಕು ಮತ್ತು A ಮಾತೃಕೆಯ ಪ್ರತಿಯೊಂದು ಅಂಶವು B ಮಾತೃಕೆಯ ಅನುರೂಪ ಅಂಶಕ್ಕೆ ಸಮವಾಗಿರಬೇಕು.

ಉದಾಹರಣೆ:

$$\begin{bmatrix} 2 & 3 \\ 0 & 1 \end{bmatrix} \text{ ಮತ್ತು } \begin{bmatrix} 2 & 3 \\ 0 & 1 \end{bmatrix}$$

ಈ ಮಾತೃಕೆಗಳು ಸಮವಾಗಿವೆ.

$$\text{ಆದರೆ } \begin{bmatrix} 3 & 2 \\ 0 & 1 \end{bmatrix} \text{ ಮತ್ತು } \begin{bmatrix} 2 & 3 \\ 0 & 1 \end{bmatrix} \text{ ಗಳು}$$

ಸಮವಾಗಿರುವುದಿಲ್ಲ.

ಉದಾಹರಣೆ:

$$\begin{bmatrix} x+3 & z+4 & 2y-7 \\ -6 & a-1 & 0 \\ b-3 & -21 & 0 \end{bmatrix} = \begin{bmatrix} 0 & 6 & 3y-2 \\ -6 & -3 & 2c+2 \\ 2b+4 & -21 & 0 \end{bmatrix}$$

ಆದಾಗ ಮತ್ತು a,b,c,x,y ಮತ್ತು z ಗಳ ಬೆಲೆಯನ್ನು ಕಂಡು ಹಿಡಿಯಿರಿ.

ಪರಿಹಾರ: ದತ್ತ ಮಾತೃಕೆಗಳು ಸಮವಾಗಿರುವುದರಿಂದ ಅವುಗಳ ಅನುರೂಪ ಅಂಶಗಳು ಸಮವಾಗಿರುತ್ತವೆ.

ಅನುರೂಪ ಅಂಶಗಳ ಹೋಲಿಕೆ ನೋಡಿದಾಗ

$$x+3 = 0 \quad z+4 = c \quad 2y-7 = 3y-2,$$
$$a-1 = -3 \quad 0 = 2c+2 \quad b-3 = 2b+4$$

ಪಡೆಯುತ್ತೇವೆ.

ಇವುಗಳನ್ನು ಸರಳಗೊಳಿಸಿದಾಗ

$a = -2, b = 7, c = -1, x = -3, y = -5, z = 2$

ಮಾತೃಕೆಗಳ ಪ್ರಕ್ರಿಯೆಗಳು

ಈ ವಿಭಾಗದಲ್ಲಿ ನಾವು ಮಾತೃಕೆಗಳ ಸಂಕಲನ, ಸ್ಥಿರಾಂಕದಿಂದ ಗುಣಾಕಾರ ಮಾತೃಕೆಗಳ ವ್ಯತ್ಯಾಸ ಮತ್ತು ಮಾತೃಕೆಗಳ ಗುಣಾಕಾರಗಳನ್ನು ಪರಿಚಯಿಸೋಣ.

ಮಾತೃಕೆಗಳ ಸಂಕಲನ

ಎರಡು ಮಾತೃಕೆಗಳ ಮೊತ್ತವು ಆ ಎರಡು ಮಾತೃಕೆಗಳ ಅನುರೂಪ ಅಂಶಗಳನ್ನು ಕೂಡಿಸುವುದರಿಂದ ಬರುವ ಮಾತೃಕೆಗಳಾಗಿರುತ್ತದೆ.

ಹಾಗೆಯೇ ಆ ಎರಡೂ ಮಾತೃಕೆಗಳು ಒಂದೇ ದರ್ಜೆಯ ಮಾತೃಕೆಗಳಾಗಿರಬೇಕು.

$$\text{ಹೀಗೆ } A = \begin{bmatrix} a_{11} & a_{12} & a_{13} \\ a_{21} & a_{22} & a_{23} \end{bmatrix} \text{ ಯು}$$

ಒಂದು ಮಾತೃಕೆ

$$\text{ಮತ್ತು } B = \begin{bmatrix} b_{11} & b_{12} & b_{13} \\ b_{21} & b_{22} & b_{23} \end{bmatrix} \text{ ಯು}$$

ಇನ್ನೊಂದು 2x3 ಮಾತೃಕೆಯಾಗಿರಲಿ

$$\text{ಆಗ } A + B = \begin{bmatrix} a_{11}+b_{11} & a_{12}+b_{12} & a_{13}+b_{13} \\ a_{21}+b_{21} & a_{22}+b_{22} & a_{23}+b_{23} \end{bmatrix}$$

ಎಂದು ವ್ಯಾಖ್ಯಾನಿಸುತ್ತೇವೆ.

ಉದಾಹರಣೆ:

$$A = \begin{bmatrix} \sqrt{3} & 1 & -1 \\ 2 & 3 & 0 \end{bmatrix} \text{ ಮತ್ತು } B = \begin{bmatrix} 2 & \sqrt{5} & 1 \\ -2 & 3 & 1/2 \end{bmatrix}$$

ಆದರೆ A + B ಯನ್ನು ಕಂಡುಹಿಡಿಯಿರಿ.

ಪರಿಹಾರ: A ಮತ್ತು B ಗಳ ದರ್ಜೆಯು 2x3 ಒಂದೇ ಆದ್ದರಿಂದ A + B ಯನ್ನು ಕಂಡು ಹಿಡಿಯಬಹುದು.

$$A + B = \begin{bmatrix} \sqrt{3} & 1 & -1 \\ 2 & 3 & 0 \end{bmatrix} + \begin{bmatrix} 2 & \sqrt{5} & 1 \\ -2 & 3 & 1/2 \end{bmatrix} =$$

$$\begin{bmatrix} 2+\sqrt{3} & 1+\sqrt{5} & 0 \\ 0 & 6 & 1/2 \end{bmatrix}$$

ಸಾಮಾನ್ಯವಾಗಿ $A = (a_{ij})$ ಮತ್ತು $B = (b_{ij})$ ಎಂಬ ಎರಡು ಒಂದೇ ದರ್ಜೆಯ ಅಂದರೆ mxn ದರ್ಜೆಯ

ಮಾತೃಕೆಗಳಾದರೆ ಆಗ A ಮತ್ತು B ಮಾತೃಕೆಗಳ ಮೊತ್ತವು $c = (c_{ij})$ ಯು ದರ್ಜೆಯ mxn ಮಾತೃಕೆಯಾಗುತ್ತದೆ.

ಮಾತೃಕೆ ಸಂಕಲನವು ಒಂದೇ ದರ್ಜೆಯ ಮಾತೃಕೆಗಳ ಗಣದಲ್ಲಿ ದ್ವಿಚೇರಿಯ ಪರಿಕರ್ಮಕ್ಕೆ ಒಂದು ಉದಾಹರಣೆಯಾಗಿದೆ.

ಮಾತೃಕೆಗಳ ಸಂಕಲನದ ಗುಣಲಕ್ಷಣಗಳು

1. ಪರಿವರ್ತನೀಯ ನಿಯಮ: A ಮತ್ತು B ಗಳು ಒಂದೇ ದರ್ಜೆಯ ಎರಡು ಮಾತೃಕೆಗಳಾಗಿರಲಿ. ಆಗ $A + B = B + A$ ಆಗಿರುತ್ತದೆ.

2. ಸಹವರ್ತನೀಯ ನಿಯಮ: A,B ಮತ್ತು C ಗಳು ಒಂದೇ ದರ್ಜೆಯ ಯಾವುದೇ ಮೂರು ಮಾತೃಕೆಗಳಾಗಿದ್ದಲ್ಲಿ $(A + B) + C = A + (B + c)$ ಆಗುತ್ತದೆ.

ಸಂಕಲನದ ಕ್ರಿಯೆಯಲ್ಲಿ ಏಕದ ಅಸ್ತಿತ್ವ

$A = (a_{ij})$ ಯು mxn ದರ್ಜೆಯ ಮಾತೃಕೆಗಳಾಗಿರಲಿ ಮತ್ತು 0 ಒಂದು mxn ಶೂನ್ಯ ಮಾತೃಕೆಯಾಗಿದ್ದಾಗ $A + 0 = 0 + A = A$ ಇನ್ನೊಂದು ರೀತಿಯಲ್ಲಿ 0 ಇದು ಮಾತೃಕೆಗಳ ಸಂಕಲನದ ಸಂಕಲನೀಯ ಏಕವಾಗಿರುತ್ತದೆ.


ಸಂಕಲನೀಯ ವಿಲೋಮದ ಅಸ್ತಿತ್ವ

$A = (a_{ij})$ ಯಾವುದೋ ಒಂದು ಮಾತೃಕೆಯಾಗಿರಲಿ ಆಗ $- A = (a_{ij})$ ಎಂಬ ಮಾತೃಕೆ ದೊರೆಯುತ್ತದೆ ಮತ್ತು ಆಗ $A + (A) = 0$ ಆಗುತ್ತದೆ. ಆಗ -A ಯನ್ನು A ಮಾತೃಕೆಯು ಸಂಕಲನೀಯ ವಿಲೋಮ ಎನ್ನುವರು.

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಆಲ್ಟರ್‌ನೇಟಿಂಗ್ ಕರೆಂಟ್: ಎಸಿ ವೋಲ್ಟೇಜ್ ಅಪ್ಲೈಡ್ ಟು ಆರ್, ಎಲ್ ಅಂಡ್ ಸಿ ಕರೆಂಟ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://bit.ly/3dU1SYR



'ಮೀಸಲಾತಿಗಾಗಿ ಬೀದಿಗಿಳಿಯೊಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮುದಾಯದಲ್ಲಿರುವ ಕಡು ಬಡವರ ಶ್ರೇಯೋಭಿವೃದ್ಧಿಗಾಗಿ ಅಭಿವೃದ್ಧಿ ನಿಗಮ ಸ್ಥಾಪಿಸಬೇಕಿದೆ. ಮೀಸಲಾತಿಯ ಅಗತ್ಯವೂ ಹೆಚ್ಚಿದೆ. ಇದಕ್ಕಾಗಿ ಶಾಂತಿ ಮಾರ್ಗ ಅನುಸರಿಸುತ್ತೇವೆ. ಬೀದಿಗಿಳಿದು ಹೋರಾಡುವ ಅಗತ್ಯ ಸದ್ಯಕ್ಕಂತೂ ಇಲ್ಲ' ಎಂದು ಒಕ್ಕಲಿಗ ಸ್ವಾಮೀಜಿಗಳು ಅಭಿಪ್ರಾಯಪಟ್ಟರು.

ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಸೋಮವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಸ್ಫಟಿಕಪುರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ ಹಾಗೂ ಇತರ ಯತಿಗಳು ಪಾಲ್ಗೊಂಡಿದ್ದರು.

ಒಕ್ಕಲಿಗರ ಸಂಘಕ್ಕೆ ಚುನಾವಣೆ ನಡೆಯಲಿ

'ಒಕ್ಕಲಿಗರ ಸಂಘಕ್ಕೆ ಆದಷ್ಟು ಬೇಗ ಚುನಾವಣೆ ನಡೆಯಲಿ' ಎಂದು ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

'ಶಂಕರಲಿಂಗೇಗೌಡ ಅವರು ಆಡಳಿತಾಧಿಕಾರಿಯಾಗಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅವರ ಅಧಿಕಾರಾವಧಿ ಮುಗಿದಿದೆ. ಹೀಗಿದ್ದರೂ ಅವರನ್ನು ಈ ಹುದ್ದೆಯಲ್ಲಿ ಮುಂದುವರಿಸಲಾಗಿದೆ. ಶೀಘ್ರವೇ ಚುನಾವಣೆ ನಡೆಸಿ ಪದಾಧಿಕಾರಿಗಳನ್ನು ಆಯ್ಕೆ ಮಾಡುವಂತೆ ಅವರಿಗೆ ಮನವಿ ಮಾಡಲಾಗಿದೆ' ಎಂದರು.

ದೇವೇಗೌಡರಿಗೆ 'ಭಾರತ ರತ್ನ'ಕ್ಕೆ ಆಗ್ರಹ

'ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ದೇಶಕ್ಕೆ ಹಲವು ಕೊಡುಗೆಗಳನ್ನು ಕೊಟ್ಟಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು ಅವರಿಗೆ 'ಭಾರತ ರತ್ನ' ನೀಡಬೇಕು' ಎಂದು ನಂಜಾವಧೂತ ಸ್ವಾಮೀಜಿ ಒತ್ತಾಯಿಸಿದರು. ನಿರ್ಮಲಾನಂದನಾಥ ಸ್ವಾಮೀಜಿ ಕೂಡ ಇದಕ್ಕೆ ದನಿಗೂಡಿಸಿದರು.

'ನಮ್ಮದು ಸುಸಂಸ್ಕೃತ ಮತ್ತು ನಾಗರಿಕ ಪ್ರಜ್ಞೆ ಬೆಳೆಸಿಕೊಂಡಿರುವ ಸಮುದಾಯ. ಸಮಾವೇಶ ಆಯೋಜಿಸಿ ಹೋರಾಡುವುದರಿಂದ, ಸಾಮಾಜಿಕ ಜಾಲತಾಣಗಳಲ್ಲಿ ಚರ್ಚಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಹಾಗೆ ಮಾಡಿದರೆ ಜನ ನಮ್ಮನ್ನು ನೋಡಿ ನಗುತ್ತಾರೆ. ಅದಕ್ಕೆ ಅಸ್ತ್ರ ನೀಡಬಾರದು' ಎಂದು ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

'ನಿರ್ದಿಷ್ಟ ಗುರಿ ಮತ್ತು ಚೌಕಟ್ಟು ಇಲ್ಲದ ಹೋರಾಟಕ್ಕೆ ಯಶಸ್ಸು ಸಿಗುವುದಿಲ್ಲ. ನಮ್ಮ ಸಮಾಜ ಸಂವಿಧಾನ ತಜ್ಞರು, ನ್ಯಾಯಮೂರ್ತಿಗಳು ಹಾಗೂ ಉತ್ತಮ ಆಡಳಿತಗಾರರನ್ನು ಸೃಷ್ಟಿ ಮಾಡಿದೆ. ಅವರನ್ನೆಲ್ಲ ಮುಂದಿಟ್ಟುಕೊಂಡು ಸೂಕ್ತ ರೂಪುರೇಷೆ ಸಿದ್ಧಪಡಿಸಬೇಕು. ಹೀಗಾಗಿಯೇ ಅವರ ಜೊತೆ ಮೊದಲು ಸಭೆ ನಡೆಸಿ ಚರ್ಚಿಸಿದ್ದೇವೆ. ಪ್ರಸ್ತುತ ಸರ್ಕಾರದಲ್ಲಿ ಜವಾಬ್ದಾರಿ ಹೊತ್ತಿರುವ ಮನೆ ಮಕ್ಕಳನ್ನು ಕರೆಸಿ ನಮ್ಮ ಬೇಡಿಕೆಗಳನ್ನು ಮನವರಿಕೆ ಮಾಡಿಕೊಟ್ಟಿದ್ದೇವೆ' ಎಂದರು.

'ನಮ್ಮ ಸಮುದಾಯದ ಅನೇಕರು ಇಂದು ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದಾರೆ. ನಗರವಾಸಿಗಳು ಎಂಬ ಕಾರಣಕ್ಕೆ ಅವರನ್ನು ಒಬಿಸಿಯಿಂದ ಹೊರಗಿಟ್ಟಿರುವುದು ಸರಿಯಲ್ಲ. ಪಕ್ಕದ ಮನೆಯವರಿಗೆ (ಮೀಸಲಾತಿ) ಕೊಟ್ಟಿದ್ದನ್ನು ನಮಗೇಕೆ ಕೊಡೋಲ್ಲ' ಎಂದು ಪ್ರಶ್ನಿಸಿದರು.

ನಂಜಾವಧೂತ ಸ್ವಾಮೀಜಿ 'ಒಕ್ಕಲಿಗರು ಜಡತ್ವ ಬಿಡಬೇಕು. ಒಂದಷ್ಟು ವಿಚಾರಗಳ ಕುರಿತು ಪ್ರಬುದ್ಧರಾಗಿ ಮಾತನಾಡುವ ಗುಣ ಮೈಗೂಡಿಸಿಕೊಳ್ಳಬೇಕು' ಎಂದರು.

ಹಿಂದುಳಿದ ಜಾತಿಗಳ ಒಕ್ಕೂಟದಿಂದ ಆಯೋಗಕ್ಕೆ ಮನವಿ ಸಲ್ಲಿಕೆ

'2ಎ'ಗೆ ಬಲಿಷ್ಠರ ಸೇರ್ಪಡೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದಿರುವಿಕೆಯ ಕುರಿತು ವೈಜ್ಞಾನಿಕವಾದ ವರದಿಗಳ ಆಧಾರವಿಲ್ಲದೆ ಯಾವುದೇ ಸಮುದಾಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಪಟ್ಟಿಗೆ ಸೇರಿಸಬಾರದು ಎಂದು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟವು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರಿಗೆ ಮನವಿ ಸಲ್ಲಿಸಿದೆ.

ಸೋಮವಾರ ಆಯೋಗದ ಅಧ್ಯಕ್ಷರನ್ನು ಭೇಟಿಯಾದ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ಎಚ್ಚರಿಕೆ ಆರ್. ವೆಂಕಟರಾಮಯ್ಯ ನೇತೃತ್ವದ ನಿಯೋಗ, 'ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಪಟ್ಟಿಗೆ ಸೇರಿಸುವಂತೆ ಕೆಲವು ಪ್ರಬಲ ಸಮುದಾಯಗಳು ಇಟ್ಟಿರುವ ಬೇಡಿಕೆಯನ್ನು ಅಧ್ಯಯನ ವರದಿಗಳ ಆಧಾರವಿಲ್ಲದೆ ಒಪ್ಪಿಕೊಳ್ಳಬಾರದು' ಎಂಬ ಆಕ್ಷೇಪಣೆ ದಾಖಲಿಸಿತು.

ಪ್ರವರ್ಗ '3ಎ' ಮತ್ತು '3ಬಿ' ಪಟ್ಟಿಯಲ್ಲಿರುವ ಕೆಲವು ಪ್ರಬಲ ಸಮುದಾಯಗಳು ಪ್ರವರ್ಗ '2ಎ' ಅಡಿಯಲ್ಲಿ ಮೀಸಲಾತಿ ನೀಡುವಂತೆ ಒತ್ತಾಯಿಸುತ್ತಿವೆ. ಪ್ರವರ್ಗ '2ಎ'ಗೆ ಈಗ ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇಕಡ 15ರಷ್ಟು ಮೀಸಲಾತಿ ಇದೆ. ಆ ಪ್ರಮಾಣವು ಜನಸಂಖ್ಯೆಗೆ ಅನುಗುಣವಾಗಿ ನಿಗದಿಯಾದದ್ದಲ್ಲ. '2ಎ' ಪಟ್ಟಿಯಲ್ಲಿರುವ 102 ಸಮುದಾಯಗಳಿಗೇ ಈ 15ರಷ್ಟು ಮೀಸಲಾತಿಯಿಂದ ನ್ಯಾಯ ದೊರಕುತ್ತಿಲ್ಲ ಎಂದು ಒಕ್ಕೂಟ ಮನವಿಯಲ್ಲಿ ಹೇಳಿದೆ.

'ಪ್ರಬಲ ಸಮುದಾಯಗಳು '2ಎ' ಮೀಸಲಾತಿಗಾಗಿ ಸರ್ಕಾರದ ಮೇಲೆ ಒತ್ತಡ ತರುತ್ತಿವೆ. ಸರ್ಕಾರ ಕೂಡ ಅವರ ಬೇಡಿಕೆ ಈಡೇರಿಸುವ ಆಶ್ವಾಸನೆ ನೀಡುತ್ತಿದೆ. ಹಿಂದುಳಿದ ವರ್ಗಗಳ ಕಾಯ್ದೆ–1995ರ ಪ್ರಕಾರ ಪ್ರಕ್ರಿಯೆ ನಡೆಸದೇ ಬಲಿಷ್ಠ ಜಾತಿಯನ್ನು '2ಎ' ಪಟ್ಟಿಗೆ ಸೇರಿಸುವುದು ಸಾಮಾಜಿಕ ನ್ಯಾಯ ಮತ್ತು ದೇಶದ ಸಂವಿಧಾನಕ್ಕೆ ಮಾಡುವ ಅಪಚಾರ' ಎಂದು ಒಕ್ಕೂಟ ಆಕ್ಷೇಪಿಸಿದೆ.

ಯಾವುದೇ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳ ಹಾಗೂ ಅವರ ಹಿಂದುಳಿದಿರುವಿಕೆಯ ಕುರಿತು ವೈಜ್ಞಾನಿಕ ಅಧ್ಯಯನ ವರದಿ ಪಡೆದ ಬಳಿಕವೇ ಮೀಸಲಾತಿ ನೀಡಲು ಸಂವಿಧಾನದಲ್ಲಿ ಅವಕಾಶವಿದೆ. ವೈಜ್ಞಾನಿಕ ಆಧಾರವಿಲ್ಲದೇ ಮೀಸಲಾತಿ ಪಟ್ಟಿಗೆ ಸೇರಿಸುವುದರಿಂದ ಸಾಮಾಜಿಕ ನ್ಯಾಯದಲ್ಲಿ ಅಸಮತೋಲನ ಉಂಟಾಗುವ ಅಪಾಯವಿದೆ ಎಂದು ಆತಂಕ ವ್ಯಕ್ತಪಡಿಸಿದೆ.

'ಮೀಸಲಾತಿ ಹೆಚ್ಚುತ್ತಿದ್ದರೆ ಪ್ರತಿಭಾ ಪಲಾಯನ'

ಶಿರಸಿ: 'ಮೀಸಲಾತಿ ಅತಿಯಾದರೆ ಅಪಾಯ. ದೊಡ್ಡ ಸಮುದಾಯಗಳು ಮೀಸಲಾತಿ ಪಡೆಯುತ್ತ ಹೋದಂತೆ ಸಣ್ಣ ಸಮುದಾಯಗಳ ಸೌಲಭ್ಯ ಕುಂಠಿತವಾಗಬಹುದು. ಇದು ಪ್ರತಿಭಾ ಪಲಾಯನಕ್ಕೂ ಅವಕಾಶವಾಗಬಹುದು' ಎಂದು ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಅಭಿಪ್ರಾಯಪಟ್ಟರು.


ಗಂಗಾಧರೇಂದ್ರ ಸರಸ್ವತಿ ಶ್ರೀ

ಪೀಠಾರೋಹಣದ ತ್ರಿದಶಮಾನೋತ್ಸವದಲ್ಲಿ ಮಾತನಾಡಿದ ಅವರು, 'ಯಾವ ಸಮುದಾಯಕ್ಕೂ ಅನ್ಯಾಯವಾಗದಂತೆ ಮೀಸಲಾತಿ ನಿಯಮ ಪರಿಷ್ಕರಿಸುವ ಬಗ್ಗೆ ಅಧಿಕಾರದಲ್ಲಿದ್ದವರು ಚಿಂತಿಸಬೇಕು' ಎಂದರು.

ಒಬಿಸಿ ಪಟ್ಟಿಗೆ ಕುಂಚಿಟಿಗರು: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಂಚಿಟಿಗ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಸಮಿತಿ ಸೂಚಿಸಿರುವಂತೆ ಕೇಂದ್ರದ ಹಿಂದುಳಿದ ವರ್ಗಗಳ ಜಾತಿ (ಒಬಿಸಿ) ಪಟ್ಟಿಗೆ ಸೇರಿಸಲು ಶಿಫಾರಸು ಮಾಡಬೇಕು. ರಾಜ್ಯ ಹಿಂದುಳಿದ ವರ್ಗಗಳ ಪ್ರವರ್ಗ 3ಎಯಿಂದ ಪ್ರವರ್ಗ–1ಕ್ಕೆ ಸೇರಿಸಲು ಕ್ರಮ ತೆಗೆದುಕೊಳ್ಳಬೇಕು' ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗ್ಡೆ ಬಳಿ ಕುಂಚಿಟಿಗರ ಮಹಾಸಭಾ ಮನವಿ ಮಾಡಿದೆ.

ಹೆಗ್ಡೆ ಅವರನ್ನು ಸೋಮವಾರ ಭೇಟಿ ಮಾಡಿದ ಮಹಾಸಭಾದ ಅಧ್ಯಕ್ಷ ಮುರಳೀಧರ ಹಾಲಪ್ಪ ನೇತೃತ್ವದ ನಿಯೋಗ ಮನವಿ ಸಲ್ಲಿಸಿದೆ.

'ರಾಜ್ಯ ಸರ್ಕಾರ 17 ಜಿಲ್ಲೆಗಳ 37 ತಾಲ್ಲೂಕುಗಳಲ್ಲಿ ₹ 8 ಲಕ್ಷ ವೆಚ್ಚ ಮಾಡಿ ಕುಂಚಿಟಿಗ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ನಡೆಸಿದೆ. ಅಲ್ಲದೆ, ಸಮುದಾಯದ ಸ್ಥಿತಿಗತಿಯ ಸಮಗ್ರ ಮಾಹಿತಿಗಳನ್ನು ಒಳಗೊಂಡ 362 ಪುಟಗಳ ವರದಿ ಮತ್ತು ಅದರ ಆಧಾರದಲ್ಲಿ ಸಮುದಾಯವನ್ನು ಒಬಿಸಿ ಪಟ್ಟಿಗೆ ಸೇರಿಸುವಂತೆ ಕೇಂದ್ರ ಹಿಂದುಳಿದ ವರ್ಗಗಳ ಆಯೋಗಕ್ಕೆ (ಎನ್‌ಸಿಬಿಸಿ) ರಾಜ್ಯ ಹಿಂದುಳಿದ ವರ್ಗಗಳ ಇಲಾಖೆ ಶಿಫಾರಸು ಮಾಡಿತ್ತು' ಎಂದು ಮುರಳೀಧರ ಹಾಲಪ್ಪ ತಿಳಿಸಿದರು.


ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರನ್ನು ಕುಂಚಿಟಿಗರ ಮಹಾಸಭಾದ ಅಧ್ಯಕ್ಷ ಮುರಳೀಧರ ಹಾಲಪ್ಪ ನೇತೃತ್ವದ ನಿಯೋಗ ಸೋಮವಾರ ಭೇಟಿ ಮಾಡಿ ಕುಲಶಾಸ್ತ್ರೀಯ ಅಧ್ಯಯನ ವರದಿ ಶಿಫಾರಸಿನ ಅನುಷ್ಠಾನಕ್ಕೆ ಒತ್ತಾಯಿಸಿತು. ಆಯೋಗದ ಸದಸ್ಯ ಅರುಣ್ ಕುಮಾರ್, ಕುಂಚಿಟಿಗ ಸಮುದಾಯದ ಮುಖಂಡರಾದ ನಾರಾಯಣಪ್ಪ, ಆಯೋಗದ ಸದಸ್ಯ ರಾಜಶೇಖರ್ ಇದ್ದರು –ಪ್ರಜಾವಾಣಿ ಚಿತ್ರ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ. ದೂರವಾಣಿ: 08539–220054
ಸಂ: ಕಾನಿಅ/ಸನೀಅವಿ/ಕೊಪ್ಪಳ/ತಾಶಾ/2020–21/524 ದಿನಾಂಕ: 25.02.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಜಿಲ್ಲೆಯ 04 ಕಾಮಗಾರಿಗಳು ಮತ್ತು ರಾಯಚೂರು ಜಿಲ್ಲೆಯ 01 ಕಾಮಗಾರಿಗಳಿಗೆ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಟೆಂಡರ್ ಕರೆಯಲಾಗಿದೆ. ಕಾಮಗಾರಿಯ ಟೆಂಡರ್‌ಗಿಟ್ಟ ಒಟ್ಟು ಮೊತ್ತ ರೂ. 70.18 ಹಾಗೂ ಒಟ್ಟು ಮೊತ್ತ ರೂ. 88.36 ಲಕ್ಷಗಳಾಗಿರುತ್ತದೆ. ಟೆಂಡರುಗಳನ್ನು ದಿನಾಂಕ: 03.03.2021 ರಿಂದ ದಿನಾಂಕ: 10.03.2021 ಸಂಜೆ 5.30 ಗಂಟೆಯವರೆಗೆ ಸಲ್ಲಿಸಬಹುದು. ತಾಂತ್ರಿಕ ಬಿಡ್ಡನ್ನು ದಿನಾಂಕ: 12.03.2021 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: 15.03.2021 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಇ–ಪ್ರಕ್ಯೂರ್‌ಮೆಂಟ್" ವೆಬ್‌ಸೈಟ್ http://eproc. karntaka.gov.in/ e-portal/index.seam ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/426/ಎಂಸಿಎ/2020–21

KARNATAK UNIVERSITY, DHARWAD
P.G. Dept. of Studies in Zoology
Pavate Nagar, Dharwad - 580003. Karnataka
KU/PG/ZOO/DST/CBG/Tender/2021-22/5 Date: 01/03/2021

TENDER NOTIFICATION
(Through e-Procurement System only)

Tenders are invited from reputed Manufacturing Companies / Authorized dealers for the supply of Scientific Equipments to Dr. Ganesh C.B., Principal Investigator (SERB-DST Project), Dept. of Zoology, Karnataka University, Dharwad, for the year 2021-22. Last date for submission of online tender form is 15/03/2021. For more details visit www.kud.ac.in and download the information from website: www.eproc.karnataka.gov.in

Sd/- Registrar

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಚಪ್ಪರದಕಲ್ಲು, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110
ಸಂ:ಬೆಂಗ್ರಾಜಿಪಂ/ಸಿ.3/ಸಿಆರ್–99/2020–21 ದಿನಾಂಕ: 24–02–2021

ಟೆಂಡರ್ ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಜಿಲ್ಲಾಡಳಿತಭವನ, ಬೀರಸಂದ್ರ, ದೇವನಹಳ್ಳಿ ತಾಲ್ಲೂಕು ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ:01–03–2021 ಹಾಗೂ ಅಂತಿಮ ದಿನಾಂಕ:15–03–2021 ರಂದು ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಜಿಲ್ಲಾಡಳಿತಭವನ, ಬೀರಸಂದ್ರ, ದೇವನಹಳ್ಳಿ ತಾಲ್ಲೂಕು ಇಲ್ಲಿ ಕಛೇರಿಯ ಸಮಯದಲ್ಲಿ ವಿವರವನ್ನು ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ:080–29781057 ಹಾಗೂ ಇ–ಮೇಲ್ ಐಡಿ: ceoruralzp5@gmail.com

ಸಹಿ/–
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/377/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2020–21/6913 ದಿನಾಂಕ:25/02/2021

ಅವಧಿ ವಿಸ್ತರಣೆ ಗುತ್ತಿಗೆ ಅಧಿಸೂಚನೆ (ಇ–ಪ್ರೊಕ್ಯೂರಮೆಂಟ್‌ನಲ್ಲಿ)

ಉಲ್ಲೇಖ:ಈ ಕಚೇರಿಯ ಟೆಂಡರ್ ಅಧಿಸೂಚನೆ ಸಂ:ಲೋಇ:ಬೆವಿ: ತಾಂಸ:ಸಇಂ:ಗುತ್ತಿಗೆ/2020–21/6116 ದಿನಾಂಕ: 29–01–2021.

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಉಲ್ಲೇಖಿತ ಅಧಿಸೂಚನೆಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟ ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 4 ರಲ್ಲಿ ಲೆಕ್ಕ ಶೀರ್ಷಿಕೆ 5054 ರಾಜ್ಯ ಹೆದ್ದಾರಿ ಸುಧಾರಣೆಯಡಿ 1 ಕಾಮಗಾರಿಗೆ ಕರೆಯಲಾದ ಗುತ್ತಿಗೆಯ ಅವಧಿಯನ್ನು ವಿಸ್ತರಿಸಲಾಗಿದೆ. ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 29.03.2020 ರ ಸಂಜೆ 4.30 ಘಂಟೆಯರೆಗೆ ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 30.03.2021 ರ ಸಂಜೆ 4.45 ಘಂಟೆ ನಂತರ ಮುಂಗಡ ಠೇವಣಿ ಮೊತ್ತವು ಸರ್ಕಾರದ ಆದೇಶ ಸಂಖ್ಯೆ: ಆಇ 675/ವೆಚ್ಚ–12/2020 ರಂತೆ ಇರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ದಿನಾಂಕ:05.03.2021 ರ ನಂತರ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-1465/MCA/2020-21

ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳವರ ಕಛೇರಿ, ಗಾ.ಕೃ.ವಿ.ಕೆ, ಬೆಂಗಳೂರು–560 065.
ಸಂ: ಎಸ್.ಪಿ.ಒ/ಇ-ಪ್ರೊಕ್ಯೂರ್‌ಮೆಂಟ್/104/2020-21 ದಿನಾಂಕ: 22-02-2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಉಪಕರಣಗಳು ಕ್ರಮ ಸಂಖ್ಯೆ 1 ರಿಂದ 18ರ ವರೆಗೆ ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ–1 ಮತ್ತು ಕೆ.ಜಿ–2 ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: www.eproc.karnataka.gov.in ಮುಖಾಂತರ ಭಾಗವಹಿಸಬಹುದು. ಕೆ.ಜಿ-1 ಮತ್ತು ಕೆ.ಜಿ-2 ಟೆಂಡರ್ ಡಾಕ್ಯುಮೆಂಟ್, ಟೆಂಡರ್ ನೊಟಿಫಿಕೇಷನ್, ಟೆಂಡರ್ ಶೆಡ್ಯೂಲ್, ಇ.ಎಂ.ಡಿ ದರ, ಟೆಂಡರ್ ಫಾರ್ಮ್‌ಗಳನ್ನು ಈ ಮೇಲಿನ ವೆಬ್‌ಸೈಟ್ ಮುಖಾಂತರ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 22–03–2021 ಸಂಜೆ 4.00 ಘಂಟೆಯವರೆಗೆ ಮತ್ತು ಟೆಂಡರನ್ನು ತೆರೆಯುವ ದಿನಾಂಕ: 25–03–2021 ಬೆಳಗ್ಗೆ 10.30 ಘಂಟೆಗೆ ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವನ್ನು ಹೊಂದಿರುತ್ತದೆ. ಹೆಚ್ಚಿನ ಮಾಹಿತಿಗಾಗಿ www.uasbangalore.edu.in or www.eproc.karnataka.gov.in ಮತ್ತು ಇ-ಪ್ರೊಕ್ಯೂರ್ ಮೆಂಟ್ ಸಹಾಯವಾಣಿ ಸಂಖ್ಯೆ: 080–8046010000/8022631200 ಮತ್ತು ಸರಕು ಖರೀದಿ ಅಧಿಕಾರಿಗಳು, ಯು.ಎ .ಎಸ್. ಜಿ.ಕೆ.ವಿ.ಕೆ., ಬೆಂಗಳೂರು – 560065. ದೂರವಾಣಿ ಸಂಖ್ಯೆ: 080–23630128 ಸಂಪರ್ಕಿಸಿ.

DIPR/DDU/RONo.2959/AAPL/20-21
ಸಹಿ/- ಆಸ್ತಿ ಅಧಿಕಾರಿ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
ಲಿಂಗನಮಕ್ಕಿ ಯೋಜನಾ ಪ್ರದೇಶ, ಕಾರ್ಗಲ್.
ಸಿಐಎನ್: U85110KA1970SGC001919
KARNATAKA POWER CORPORATION LTD.
ಸಂಖ್ಯೆ: ಸಿಇಸಿಎಸ್/ಪಿ1ಎ/1466(a) ದಿನಾಂಕ: 24.02.2021

ನೋಟೀಸ್
ವಿಷಯ: ಅನಧಿಕೃತಗೈರು ಹಾಜರಾಗಿರುವ – ಕುರಿತು

ಶ್ರೀಮತಿ ವರಲಕ್ಷ್ಮಿ ಸಿ.ಎಸ್., (ಇ.ಸಿ.ಸಂ.30021)/ಎಇ(ಸಿವಿಲ್)/ಇಇ(ಸಿ)ಕಾರ್ಗಲ್‌ರವರ ಕಚೇರಿ ಆದ ನೀವು ದಿನಾಂಕ: 13.03.2020 ರಿಂದ 20.04.2020 ರವರಗೆ ವೈದ್ಯಕೀಯ ಕಾರಣದ ಆಧಾರದ ಮೇಲೆ 39 ದಿನಗಳ ಪರಿವರ್ತಿತ ರಜೆಯನ್ನು ಪಡೆದಿದ್ದು, ತದನಂತರ ದಿನಾಂಕ: 21.04.2020 ರಿಂದ 10.05.2020 ರವರೆಗೆ 20 ದಿನಗಳ ಗಳಿಕೆ ರಜೆ ಹಾಗೂ ದಿನಾಂಕ: 11.05.2020 ರಿಂದ 10.06.2020 ರವರೆಗೆ ಗಳಿಕೆ ರಜೆಯನ್ನು ವಿಸ್ತರಿಸುತ್ತ ಒಟ್ಟು 90 ದಿನಗಳ ರಜೆ ಪಡೆದಿರುತ್ತೀರಿ. ಮುಂದುವರೆದಂತೆ ದಿನಾಂಕ: 11.06.2020 ರಂದು ಇಇ(ಸಿ) ಕಾರ್ಗಲ್ ಕಚೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಬೇಕಾಗಿತ್ತು. ಆದರೆ, ನೀವು ದಿನಾಂಕ: 11.06.2020 ರಿಂದ ಇಲ್ಲಿಯವರೆಗೆ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತೀರಿ. ತಮ್ಮ ಈ ಅನಧಿಕೃತ ಗೈರು ಹಾಜರಾತಿಯು ನಿಗಮದ ಸ್ಥಾಯಿ ನಿಯಮಾವಳಿಗಳನ್ವಯ ಅಶಿಸ್ತಿನ ವರ್ತನೆಯಾಗಿರುತ್ತದೆ. ಆದ್ದರಿಂದ ಈ ಕುರಿತು ಸೂಕ್ತ ವಿವರಣೆಯೊಂದಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ದಿನಾಂಕ: 16.06.2020, 06.07.2020. 18.07.2020 ರಂದು ಇಇ(ಸಿ)ಕಾರ್ಗಲ್‌ರವರು ಜ್ಞಾಪನಾ ಪತ್ರಗಳನ್ನು ನಿಮ್ಮ ವಿಳಾಸಕ್ಕೆ (ಖಾಯಂ ವಿಳಾಸ: ಬಿನ್ ಶಿವಪ್ಪ ಎನ್., ಚೊಕ್ಕರೆಡ್ಡಿಹಳ್ಳಿ, ಕಾಗತಿ ಪೋಸ್ಟ್, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ – 563121 ಹಾಗೂ ಕಾಲೋನಿ ವಿಳಾಸ: #ಸಿ ಟೈಪ್–1/4, ಬ್ಲಾಕ್ ಸಿ–1, ಕೆ.ಪಿ.ಸಿ ಕಾಲೋನಿ, ಕಾರ್ಗಲ್) ಕಳುಹಿಸಲಾಗಿತ್ತು. ಖಾಯಂ ವಿಳಾಸಕ್ಕೆ ರವಾನಿಸಲಾದ ಪತ್ರಗಳು ನಿಮ್ಮವರಿಂದ ಸ್ವೀಕೃತವಾಗಿರುತ್ತದೆ. ತಮ್ಮಿಂದ ಯಾವುದೇ ವಿವರಣೆ ಬಂದಿರುವುದಿಲ್ಲ ಹಾಗೂ ತಾವು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ. ಆದ್ದರಿಂದ, ನಿಗಮದ ಸ್ಥಾಯಿ ನಿಯಮಾವಳಿ 026 ಹಾಗೂ 036 ರನ್ವಯ ನಿಮ್ಮ ಮೇಲೆ ದೋಷಾರೋಪಣೆಯ ಪಟ್ಟಿಯನ್ನು ಸಹ ನಿಮ್ಮ ಖಾಯಂ ವಿಳಾಸಕ್ಕೆ ರವಾನಿಸಲಾಗಿದ್ದು ಅದನ್ನು ಖುದ್ದಾಗಿ ನೀವೇ ಸ್ವೀಕರಿಸಿದ್ದರೂ ಸಹ ಯಾವುದೇ ಪ್ರತಿರಕ್ಷಣಾ ಹೇಳಿಕೆಗಳನ್ನು ನೀವು ನೀಡಿರುವುದಿಲ್ಲ. ಆದ್ದರಿಂದ, ಅನಧಿಕೃತ ಗೈರು ಹಾಜರಾತಿಯ ಬಗ್ಗೆ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳನ್ನು ನೇಮಿಸಿ ತಮಗೆ ತಿಳಿಸಲಾಗಿತ್ತು. ವಿಚಾರಣಾಧಿಕಾರಿಗಳೂ ಸಹ ವಿಚಾರಣೆಗೆ ಹಾಜರಾಗುವಂತೆ ತಮಗೆ ಮೂರು ಜ್ಞಾಪನಾ ಪತ್ರಗಳನ್ನು ಕಳುಹಿಸಲಾಗಿದ್ದು ಅದನ್ನು ನಿಮ್ಮವರು ಸ್ವೀಕರಿಸಿದ್ದರೂ ಸಹ ವಿಚಾರಣೆಗೆ ಹಾಜರಾಗದ ಕಾರಣ ವಿಚಾರಣೆಯನ್ನು ಏಕಪಕ್ಷೀಯವಾಗಿ ಕೈಗೊಳ್ಳಲಾಗಿದೆ. ಆದಾಗ್ಯೂ, ಸೂಕ್ತ ಸಮಜಾಯಿಷಿ ಇದ್ದಲ್ಲಿ ಹಾಜರಾಗಲು ಸೂಚಿಸಿ ಈ ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 07 ದಿನಗಳ ಅಂತಿಮ ಕಾಲಾವಕಾಶ ನೀಡಲಾಗಿದ್ದು, ಸಮಂಜಸ ವಿವರಣೆಯೊಂದಿಗೆ ಹಾಜರಾಗದಿದ್ದಲ್ಲಿ ನಿಗಮದ ನಿಯಮಾವಳಿಗಳನ್ವಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಲಾಗಿದೆ.

ಸಹಿ/–
ಮುಖ್ಯ ಅಭಿಯಂತರರು(ಕಾಮಗಾರಿ)ಶರಾವತಿ,
ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕಾರ್ಗಲ್– 577421.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ
ನಂ:ಗ್ರಾಕುನೀಮತ್ತುನೈವಿ/ಬಾಗಲಕೋಟ/ಪಿಬಿ–3/ಟೆಂಡರ್/2020–21/1833 ದಿನಾಂಕ: 24–02–2021

ಅಲ್ಪಾವಧಿ ಇ-ಪ್ರೋಕ್ಯೂರಮೆಂಟ್ ಟೆಂಡರ ಪ್ರಕಟಣೆ (ದ್ವಿ-ಲಕೋಟೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ:

1) Indent No-32248 (Mudhol Taluka Kulali) APT-155.95 Lakhs (Call-2) 2) Indent No-32258 (Mudhol Taluka Saidapur) APT-173.58 Lakhs (Call-2) 3) Indent No-32842(Mudhol Taluka Bisanal) APT-116.72 Lakhs 4) Indent No-32841 (Mudhol Taluka Nagaral) APT-112.19Lakhs) 5) Indent No-32840 (Mudhol Taluka Yadahalli) APT-89.72 Lakhs) 6) Indent No-32839 (Mudhol Taluka Mantur) APT-202.61 Lakhs) 7) Indent No-32843 (Mudhol Taluka Kesarakoppa) APT-125.50 Lakhs) 8) Indent No-32845 (Jamakhandi Taluka Konnur) APT-147.18 Lakhs) 9) Indent No-32456 (Jamakhandi Taluka Mareguddi) APT-107.64 Lakhs) 10) Indent No-32844 (Jamakhandi Taluka Hunnur) APT-213.05 Lakhs) 11) Indent No-32457 (Jamakhandi Taluka Jagadal) APT-134.67 Lakhs) 12) Indent No-29314 (Badami Taluka Hirenasabi) APT-55.68 Lakhs (Call-4) 13) Indent No-31087 (Badami Taluka Kerakalmatti) APT-77.10 Lakhs (Call-2) 14) Indent No-27403 (Badami Taluka Layadagundi) APT-62.78 Lakhs (Call-4) 15) Indent No-30209 (Badami Taluka Padanakatti) APT-52.26 Lakhs (Call-2) 16) Indent No-30202 (Badami Taluka Haladur) APT-52.26 Lakhs (Call-2) 17) Indent No-30198 (Badami Taluka Saraswatinagar) APT-52.83 Lakhs (Call-2) 18) Indent No-30558 (Badami Taluka Hiremuchalagudda) APT-52.09 Lakhs (Call-2) 19) Indent No-32801 (Badami Taluka Jalageri) APT-55.19 Lakhs 20) Indent No-32860(Badami Taluka Halakurki) APT-130.95 Lakhs 21) Indent No-32861(Badami Taluka Belur) APT-163.47 Lakhs 22) Indent No-32862(Badami Taluka Jalihal) APT-157.75 Lakhs 23) Indent No-32863(Badami Taluka Sulikeri) APT-108.85 Lakhs 24) Indent No-32864(Badami Taluka Hullikeri) APT-99.03 Lakhs 25) Indent No-32865(Badami Taluka Hangaragi) APT-101.48 Lakhs 26) Indent No-32866(Badami Taluka Hosur) APT-95.30 Lakhs 27) Indent No-32867(Badami Taluka Kagalagomb) APT-94.00 Lakhs 28) Indent No-32868(Badami Taluka Katageri) APT-104.04 Lakhs 29) Indent No-32869(Badami Taluka Anawal) APT-100.28 Lakhs 30) Indent No-27336 (Hunagund Taluk Amaravadagi) -APT-15.01 Lakhs (Call-3) 31) Indent No-27338 (Hunagund Taluk Anapakatti) -APT-12.01 Lakhs (Call-3) 32) Indent No-26322 (Hunagund Taluk Hireadawadagi) -APT-19.71 Lakhs (Call-2) 33) Indent No-29069 (Hunagund Taluk Binjavadagi)-APT-21.56 Lakhs (Call-2) 34) Indent No-27339 (Hunagund Taluk Chinnapur SK) -APT-13.29 Lakhs (Call-2) 35) Indent No-28570 (Hunagund Taluk Koujaganur) -APT-12.08 Lakhs(Call-2) 36) Indent No-26388 (Hunagund Taluk Hireyaranakeri) -APT-10.51 Lakhs (Call-3) 37) Indent No-32086 (Hunagund Taluk Hireadapur) -APT-9.68 Lakhs(Call-2) 38) Indent No-26388 (Hunagund Taluk Hireyaranaker)-APT-10.51 Lakhs(Call-2) 39) Indent No-27333 (Hunagund Taluk Dasabal) -APT-12.85 Lakhs(Call-2) 40) Indent No-29313 (Badami Taluk Lingapur) APT-41.64 Lakhs 41) Indent No-30204 (Badami Taluka Hullikeri SP) APT-40.23 Lakhs 42) Indent No-32802 (Badami Taluka Melin Halakurki) APT-18.22 Lakhs 43) Indent No-32800 (Badami Taluka Mattikatti RC) APT-12.81 Lakhs 44) Indent No-32799 (Badami Taluka Dhanakashirur) APT-5.13 Lakhs 45) Indent No-32798 (Badami Taluka Subbalahunashi) APT-34.44 Lakhs

1) ಲೆಕ್ಕ ಶೀರ್ಷಿಕೆ: ಜಲ ಜೀವನ ಮಿಷನ್ –2020–21 2) ಗುತ್ತಿಗೆದಾರರ ಅರ್ಹತೆ: 3 & ನೇ ದರ್ಜೆ ಹಾಗೂ ಮೇಲ್ಪಟ್ಟ 3) ಟೆಂಡರ ಪಾರಂ ಪಡೆಯುವ ದಿನಾಂಕ:06–03–2021 ರಿಂದ 08–03–2021 4) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್ ಡಿ ಮೊತ್ತ ಇ–ಪ್ರೋಕ್ಯೂರಮೆಂಟ್ ಪ್ರಕಾರ 5) ಟೆಂಡರ್ ಪಾರಂ ಸಲ್ಲಿಸುವ ಅಂತಿಮ ದಿನಾಂಕ: 06–03–2021 ಸಾಯಂಕಾಲ 5.30 ಗಂಟೆಯ ವರೆಗೆ 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:08–03–2021 ಮಧ್ಯಾಹ್ನ 11.00 ಗಂಟೆಯ ನಂತರ 7) ಆರ್ಥಿಕ ಬಿಡ್ ತೆರೆಯುವ ದಿನಾಂಕ: 10–03–2021 11.00 ಗಂಟೆಯ ನಂತರ 8) ಪ್ರಿ ಬಿಡ್ ಮೀಟಿಂಗ್ ಸ್ಥಳ: ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ದಿನಾಂಕ: 04–03–2021, 11:00 Hrs 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ 10) ಅಂತರ್ಜಾಲ ತಾಣದ ವಿಳಾಸ www.eproc.karnataka.gov.in.

ಟಿಪ್ಪಣಿ:- 1) ಟೆಂಡರ ಮೊತ್ತಕ್ಕಿಂತ ಕಡಿಮೆ ದರವನ್ನು ನಮೂದಿಸಿದಲ್ಲಿ ಒಟ್ಟು ವ್ಯತ್ಯಾಸ ಮೊತ್ತದ DD/FDR ನ್ನು ಕಾರ್ಯನಿರ್ವಾಹಕ ಇಂಜಿನೀಯರರು,ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ಇವರ ಹೆಸರಿನಲ್ಲಿ ಪಡೆದು ಸ್ಕ್ಯಾನ್ ಮಾಡಿ ಆನ್‌ಲೈನ್ ಮುಖಾಂತರ ಟೆಂಡರ ಜೊತೆಗೆ ಅಪ್‌ಲೋಡ್ ಮಾಡಬೇಕು. ಟೆಂಡರ ಅನುಮೋದನೆಗಿಂತ ಮುಂಚಿತವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.

2) ಗುತ್ತಿಗೆ ಮೊತ್ತಕ್ಕೆ 12% GST ಯನ್ನು ಸೇರಿಸಿ ಕೆಲಸದ ಆದೇಶ ನೀಡಲಾಗುವುದು.

ಸಹಿ/–
ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾಕುನೀಮತ್ತುನೈ ವಿಭಾಗ, ಬಾಗಲಕೋಟ
ವಾ.ಸಾ.ಇ./ಬಾಗಲಕೋಟ/554/2020–21/ದೇಶಪಾಂಡೆಪಬ್ಲಿಸಿಟಿ

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ವಿಜಯಪುರ
ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in
ಸಂಖ್ಯೆ: ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2020–21/2977 ದಿನಾಂಕ:26.02.2021

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2020–21 ನೇ ಸಾಲಿನ ರಾಜ್ಯ ಸಭಾ ಸದಸ್ಯರ ಪ್ರದೇಶಾಭಿವೃದ್ಧಿ ಅನುದಾನ ಯೋಜನೆಯಡಿಯಲ್ಲಿ ಸಾಮಾನ್ಯ ಗುತ್ತಿಗೆದಾರರ ಕಾಮಗಾರಿಗಳು: (1) ವಿಜಯಪುರ ತಾಲೂಕಿನ ಕಗ್ಗೋಡ ಗ್ರಾಮದ ಶ್ರೀ ರಾಮನಗೌಡ ಬಿ ಪಾಟೀಲ (ಯತ್ನಾಳ) ಗೋರಕ್ಷಾ ಕೇಂದ್ರಕ್ಕೆ ದೇಶಿ ತಳಿಗಳ ಸಾಕಾಣಿಕೆ ಸಂತತಿ ಅಭಿವೃದ್ಧಿ ಹಾಗೂ ಸಂಶೋಧನಾ ಕೇಂದ್ರ ಮುಂದುವರೆದ ಕಾಮಗಾರಿ (2017–18) ರಾಜ್ಯಸಭಾ ಸದಸ್ಯರ ಪ್ರದೇಶಾಭಿವೃದ್ಧಿ ಯೋಜನೆ ರೂ.10.00 ಲಕ್ಷ ಕಾಮಗಾರಿಯನ್ನು ಇ–ಟೆಂಡರ್‌ನ್ನು ಅಹ್ವಾನಿಸಿದ್ದು. ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.eproc.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾ.ಇಂ. ವಿಭಾಗ,ವಿಜಯಪುರ.
ವಾಸಾಸಂಇ/ವಿಜಯಪುರ/ಆರ್.ಒ.ಸಂ.582/ಎಂಸಿಎ/2020–21

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
"NAAC Accredited with 'A' Grade"
ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ
1ನೇ ಮಹಡಿ, ಬೆಳ್ಳಿಮಹೋತ್ಸವದ ಕಟ್ಟಡ, ಪಾವಟೆನಗರ, ಧಾರವಾಡ–580003.
Ph.: 0836-2215311, E-mail: pmeb@kud.ac.in, Website: www.kud.ac.in
Ref.No.: KU/PMEB/HJK/2020-21/162 Date: 01-03-2021

ಟೆಂಡರ್ ಪ್ರಕಟಣೆ

ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ವಿಭಾಗಕ್ಕೆ 02 ಯು.ಪಿ.ಎಸ್., ಬ್ಯಾಟರಿ ಹಾಗೂ 02 ಸ್ಟೆಬಿಲೈಸರ್ ಪೂರೈಸಲು ಅಲ್ಪಾವಧಿ ಟೆಂಡರ ಪ್ರಕಟಣೆ
(ಕವಿವಿ ಸಾಮಾನ್ಯ ಲೆಕ್ಕ ಶೀರ್ಷಿಕೆ ಸಂಖ್ಯೆ 1450 ಸಾಫ್ಟ್‌ವೇರ್/ಹಾರ್ಡ್‌ವೇರ್ ಖರೀದಿ ಅಡಿಯಲ್ಲಿ)

ಕರ್ನಾಟಕ ವಿಶ್ವವಿದ್ಯಾಲಯದ ಆಯ್.ಟಿ. ವಿಭಾಗಕ್ಕೆ 02 ಯು.ಪಿ.ಎಸ್., ಬ್ಯಾಟರಿ ಹಾಗೂ 02 ಸ್ಟೆಬಿಲೈಸರ್ ಖರೀದಿಸಲು 10 ದಿನಗಳ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ 12.03.2021. ಹೆಚ್ಚಿನ ವಿವರಗಳಿಗಾಗಿ ಅಂತರ್ಜಾಲ https://eproc.karnataka.gov.in. ನ್ನು ನೋಡುವುದು.

1	ಬಿಡ್ ಪೂರ್ವಭಾವಿ ಸಭೆ	05.03.2021 ರಂದು 3.00 ಗಂಟೆಗೆ
2	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	12.03.2021 ಸಾಯಂಕಾಲ 6.00 ಗಂಟೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	13.03.2021 ಬೆಳಿಗ್ಗೆ 11.00 ಗಂಟೆಗೆ
4	ಆರ್ಥಿಕ ದಾಖಲೆಗಳನ್ನು ತೆರೆಯುವ ದಿನಾಂಕ	15.03.2021 ಬೆಳಿಗ್ಗೆ 11.00 ಗಂಟೆಗೆ

ಸಹಿ/– ಕುಲಸಚಿವರು
ಕವಿವಿ, ಧಾರವಾಡ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಡಗಲಿ
ಸಂ:ಕಾನಿಅ/ಪಂರಾಇಂವಿ/ಹಡಗಲಿ/ಪಿಬಿ–1/ಟೆಂಡರ್/ವಿವಿಲೆಶಿ/2020–2021/1916 ದಿನಾಂಕ:26.02.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through Government of Karnataka e-procurement)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಡಗಲಿ ಬಳ್ಳಾರಿ ಜಿಲ್ಲೆ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ – 2000 ಹಡಗಲಿ ಮತ್ತು ಹರಪನಹಳ್ಳಿ ತಾಲೂಕುಗಳಿಗೆ ಕೆ.ಕೆ.ಆರ್.ಡಿ.ಬಿ & ಡಿ.ಎಂ.ಎಫ್ ಅನುದಾನದಡಿ ಅನುಮೋದನೆಯಾದ ಕಾಮಗಾರಿಗಳಿಗೆ KW-I,II,&III ರ ನಿಯಮಗಳ ನಿಬಂದನೆಗೊಳಪಟ್ಟು GOK e- procurement ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಟೆಂಡರ್ ಪ್ರಕಟಣೆಯ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಿ, ಪರಿಹರಿಸಿಕೊಳ್ಳಲು ನಿಗಧಿಪಡಿಸಿದ ಕೊನೆಯ ದಿನಾಂಕ: 18.03.2021 ರ ಸಂಜೆ: 17.00ರವರೆಗೆ. ಮತ್ತು ಅರ್ಜಿಗಳನ್ನು ಸ್ವೀಕರಿಸುವ ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ : 20.03.2021 ರ ಸಂಜೆ:17.00 ಗಂಟೆ ಹಾಗೂ ಟೆಂಡರ್‌ಗಳನ್ನು ತೆರೆಯುವ ನಿಗಧಿಪಡಿಸಿದ ದಿನಾಂಕ: 22.03.2021 ಸಂಜೆ: 17.00 ಗಂಟೆಗೆ ಇದ್ದು, ಟೆಂಡರ್ ಪ್ರಕಟಣೆಯ ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ಮತ್ತು ಕಛೇರಿ ವೇಳೆಯಲ್ಲಿ ಖುದ್ದಾಗಿ ಸಂಪರ್ಕಿಸಬಹುದು.

ಸಹಿ/– ಕಾನಿಅ ಪಂರಾಇಂ ವಿಭಾಗ, ಹಡಗಲಿ.
ಡಿಐಪಿಆರ್/ಬಳ್ಳಾರಿ/415/ಎಂಸಿಎ/2020–21

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ
ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ–1/ಟೆಂಡರ್:34/2020–21/1558 ದಿನಾಂಕ : 26–02–2021

ಅಲ್ಪಾವಧಿ ಟೆಂಡರ ಪ್ರಕಟಣೆ (1ನೇ,2 ನೇ ಹಾಗೂ 3ನೇ ಕರೆ)
(E-GOK ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

NRDWP JJM ಯೋಜನೆಯಡಿ ಹಾವೇರಿ, ಹಿರೇಕೆರೂರ , ರಾಣೇಬೆನ್ನೂರ ಮತ್ತು ಸವಣೂರ ತಾಲೂಕುಗಳ ಈ ಕೆಳಕಂಡ ಗ್ರಾಮಗಳಲ್ಲಿ ಟೆಂಡರ್ ಕರೆಯಲಾಗಿದೆ.
(1) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ : ದಿನಾಂಕ: 10–03–2021 ರ 17:30 ಗಂಟೆವರೆಗೆ
(2) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಕ್ರಸಂ 1 ರಿಂದ 22) ತಾಂತ್ರಿಕ ಬಿಡ್ ತೆರೆಯುವ (ಕ್ರ.ಸಂ 23 ರಿಂದ 40) (ಸಾಧ್ಯವಾದಲ್ಲಿ) : ದಿನಾಂಕ: 12–03–2021ರ 10:00 ಗಂಟೆ ನಂತರ (3) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಕ್ರಸಂ 23 ರಿಂದ 40) (ಸಾಧ್ಯವಾದಲ್ಲಿ) : ದಿನಾಂಕ: 15–03–2021ರ 10:30 ಗಂಟೆ ನಂತರ (4) ಪ್ರೀ ಬಿಡ್ ಮೀಟಿಂಗ್ ಸ್ಥಳ : Office of the Executive Engineer, Rural Drinking Water & Sanitation Division, Vidyanagar, Old ZP Compound, Haveri-581110.: ದಿನಾಂಕ 05–03–2021 ರಂದು ಬೆಳಿಗ್ಗೆ 11:00 ಗಂಟೆಗೆ.
ಸಾಮಾನ್ಯ : ಇಂಡೆಂಟ್ ನಂ :– (1) 26605/CALL-2, (2) 32591/CALL-2, (3) 32938, (4) 33002, (5) 26609/CALL-2, (6) 32593/CALL-2, (7) 32375/CALL-2, (8) 32594/CALL-2, (9) 29010/CALL-3, (10) 32598/CALL-2, (11) 32804, (12) 32702, (13) 33003, (14) 32703, (15) 33024, (16) 32743, (17) 32376/CALL-2, (18) 32599/CALL-2, (19) 32035/CALL-2, (20) 32600/CALL-2, (21) 33030, (22) 32955, (23) 33027, (24) 32872, (25) 32901, (26) 33000, (27) 33028, (28) 33029, (29) 32827, (30) 32759, (31) 32878, (32) 32760, (33) 32832, (34) 32870.
ಎಸ್.ಸಿ : ಇಂಡೆಂಟ್ ನಂ :– (1) 33004, (2) 32596/CALL-2, (3) 33025, (4) 33005, (5) 32680.
ಎಸ್.ಟಿ : ಇಂಡೆಂಟ್ ನಂ :– (1) 33026.
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/371/2020–21

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ–2 ವಾರಾಹಿ ಜಲಾಶಯ ಯೋಜನಾ ವಿಭಾಗ
ಸಿದ್ಧಾಪುರ–576229 ಕುಂದಾಪುರ (ತಾ), ಉಡುಪಿ (ಜಿಲ್ಲೆ), ಕರ್ನಾಟಕ
ಸಂ: ಕಾಇಂ/ಕನೀನಿನಿ/ವಾಜಯೋವಿ–2/ಪಿಬಿ/ಟೆಂಡರ್/31/2020–21/1787 ದಿನಾಂಕ: 24.02.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ) (ಡಬಲ್ ಕವರ್ ಸಿಸ್ಟಂ)

ಕರ್ನಾಟಕದ ಉಡುಪಿ ಜಿಲ್ಲೆಯ ವಾರಾಹಿ ನೀರಾವರಿ ಯೋಜನಾ ವ್ಯಾಪ್ತಿಯಲ್ಲಿ 4701–ಲೆಕ್ಕಶೀರ್ಷಿಕೆಯಡಿ ವಾರಾಹಿ ಎಡದಂಡೆ ನಾಲಾ ಸ.38.00ರಿಂದ 43.694ಕಿ.ಮೀವರೆಗಿನ ನಾಲಾ ಅಗೆತ, ಸಿಸಿ ಲೈನಿಂಗ್ ಮತ್ತು ಸಿಡಿ ಕಾಮಗಾರಿಗಳನ್ನು ಕೈಗೊಳ್ಳಲು ಸಂಬಂಧಪಟ್ಟ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಆಹ್ವಾನಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ:
(1) ಗುತ್ತಿಗೆದಾರರು www.eproc.karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. (2) ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ ರೂ. 2398.37ಲಕ್ಷ. (3) ಕಾಮಗಾರಿಯ ಇ.ಎಂ.ಡಿ. ಮೊತ್ತ ಕ್ರಮವಾಗಿ ರೂ.2700000.00, (4) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಬಹುದಾದ ದಿನಾಂಕ: 03.03.2021 (5.)ಕಾಮಗಾರಿ ಸಂಬಂಧಿಸಿದ ಟೆಂಡರ್ ಪ್ರಿ–ಬಿಡ್ ಸಭೆಯನ್ನು ದಿನಾಂಕ: 10.03.2021 ರಂದು ಸಮಯ 11.00 ಘಂಟೆಗೆ, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.2 ವಾಜಯೋವಿ ಇವರ ಕಛೇರಿಯಲ್ಲಿ ನಡೆಸಲಾಗುವುದು. (6.) ಟೆಂಡರ್ ಷರತ್ತುಗಳ ಕುರಿತಾದ ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ: 10.03.2021 (7) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಲು ಕೊನೆಯ ದಿನಾಂಕ: 15.03.2021. (8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17.03.2021 (9) ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in, www.knnlindia.com ಅಂತರ್ಜಾಲ ಅಥವಾ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ–2 ವಾರಾಹಿ ಜಲಾಶಯ ಯೋಜನಾ ವಿಭಾಗ, ಇವರನ್ನು ಸಂಪರ್ಕಿಸುವುದು. (10) ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ, www.eproc.karnataka.gov.in ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ.,
ನಂ.2 ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ಧಾಪುರ, ಉಡುಪಿ ಜಿಲ್ಲೆ
ವಾಸಾಇ/ಸನಿಉ/ಎಂಸಿಎ/772/20–21 ದಿ: 01.03.2021

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ–2, ವಾರಾಹಿ ಜಲಾಶಯ ಯೋಜನಾ ವಿಭಾಗ
ಸಿದ್ಧಾಪುರ–576229 ಕುಂದಾಪುರ (ತಾ), ಉಡುಪಿ (ಜಿಲ್ಲೆ), ಕರ್ನಾಟಕ
ಸಂ: ಕಾಇಂ/ಕನೀನಿನಿ/ವಾಜಯೋವಿ–2/ಪಿಬಿ/ಟೆಂಡರ್/28,29&30/2020–21/1765, 1785 ಮತ್ತು 1786 ದಿ:23.02.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ) (ಡಬಲ್ ಕವರ್ ಸಿಸ್ಟಂ)

ಕರ್ನಾಟಕದ ಉಡುಪಿ ಜಿಲ್ಲೆಯ ವಾರಾಹಿ ನೀರಾವರಿ ಯೋಜನಾ ವ್ಯಾಪ್ತಿಯಲ್ಲಿ 4701–ಲೆಕ್ಕಶೀರ್ಷಿಕೆಯಡಿ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲು ಸಂಬಂಧಪಟ್ಟ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಆಹ್ವಾನಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ:
(1) ಗುತ್ತಿಗೆದಾರರು www.eproc.karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. (2) ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ ಕ್ರಮವಾಗಿ ರೂ. 174.15ಲಕ್ಷ, ರೂ.444.47ಲಕ್ಷ ಮತ್ತು ರೂ.445.65ಲಕ್ಷ. (3) ಕಾಮಗಾರಿಯ ಇ.ಎಂ.ಡಿ. ಮೊತ್ತ ಕ್ರಮವಾಗಿ ರೂ.200000.00, ರೂ.500000.00 ಮತ್ತು ರೂ.500000.00 (4) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಬಹುದಾದ ದಿನಾಂಕ: 01.03.2021 (5.)ಕಾಮಗಾರಿ ಸಂಬಂಧಿಸಿದ ಟೆಂಡರ್ ಪ್ರಿ–ಬಿಡ್ ಸಭೆಯನ್ನು ದಿನಾಂಕ: 04.03.2021 ರಂದು ಸಮಯ 11.00ಘಂಟೆಗೆ, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.2 ವಾಜಯೋವಿ ಇವರ ಕಛೇರಿಯಲ್ಲಿ ನಡೆಸಲಾಗುವುದು. (6.) ಟೆಂಡರ್ ಷರತ್ತುಗಳ ಕುರಿತಾದ ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ: 04.03.2021 (7) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಲು ಕೊನೆಯ ದಿನಾಂಕ: 08.03.2021. (8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.03.2021 (9) ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in, www.knnlindia.com ಅಂತರ್ಜಾಲ ಅಥವಾ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ–2 ವಾರಾಹಿ ಜಲಾಶಯ ಯೋಜನಾ ವಿಭಾಗ, ಇವರನ್ನು ಸಂಪರ್ಕಿಸುವುದು. (10) ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ, www.eproc.karnataka.gov.in ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ.,
ನಂ.2 ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ಧಾಪುರ, ಉಡುಪಿ ಜಿಲ್ಲೆ
ವಾಸಾಇ/ಸನಿಉ/ಎಂಸಿಎ/776/20–21 ದಿ: 01.03.2021

ವಿವಿಧ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣಾ ಪ್ರಚಾರಕ್ಕೆ ಚುರುಕು: ಭಾಷೆ, ಸಂಸ್ಕೃತಿಗೆ ವಿರುದ್ಧವಾಗಿರುವ ಶಕ್ತಿಗಳನ್ನು ಮಣಿಸಲು ರಾಹುಲ್ ಕರೆ

‘ತಮಿಳುನಾಡು ದೇಶಕ್ಕೆ ದಿಕ್ಕು ತೋರಲಿ’

ಪ್ರಜಾವಾಣಿ ವಾರ್ತೆ

ನಾಗರಕೋಯಿಲ್ (ತಮಿಳುನಾಡು): ‘ಒಂದು ಸಂಸ್ಕೃತಿ, ಒಂದು ರಾಷ್ಟ್ರ, ಒಂದು ಇತಿಹಾಸ’ ಪರಿಕಲ್ಪನೆಯನ್ನು ಮುಂದಿರಿಸುತ್ತಿರುವ ಹಾಗೂ ಭಾಷೆ–ಸಂಸ್ಕೃತಿಗೆ ವಿರುದ್ಧವಾಗಿರುವ ಶಕ್ತಿಗಳನ್ನು ಮಣಿಸುವ ಮೂಲಕ ತಮಿಳುನಾಡು ರಾಜ್ಯವು ಭಾರತಕ್ಕೆ ಹೊಸ ದಿಕ್ಕು ತೋರಬೇಕಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಕರೆ ನೀಡಿದ್ದಾರೆ.

ತಮಿಳು ಜನರನ್ನು ಹೊರತುಪಡಿಸಿ ಬೇರೆ ಯಾರೂ ತಮಿಳುನಾಡನ್ನು ಆಳಲು ಸಾಧ್ಯವಾಗಿಲ್ಲ ಎಂಬುದನ್ನು ಇತಿಹಾಸ ತೋರಿಸಿದೆ ಎಂದು ಅವರು ಹೇಳಿದರು. ತಮಿಳುನಾಡು ಪ್ರವಾಸದಲ್ಲಿರುವ ರಾಹುಲ್ ಇಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿ, ‘ತಮಿಳು ಜನರನ್ನು ನಿಜವಾಗಿಯೂ ಪ್ರತಿನಿಧಿಸುವ ವ್ಯಕ್ತಿ ಮಾತ್ರ ತಮಿಳುನಾಡಿನ ಮುಖ್ಯಮಂತ್ರಿಯಾಗಬಲ್ಲರು ಎಂಬುದನ್ನು ಈ ಚುನಾವಣೆಯು ತೋರಿಸಲಿದೆ’ ಎಂದರು.

‘ಪ್ರಧಾನಿ ನರೇಂದ್ರ ಮೋದಿಯವರಿಗೆ ನಮಸ್ಕರಿಸುವ ತಮಿಳುನಾಡು ಮುಖ್ಯಮಂತ್ರಿ ರಾಜ್ಯದ ಜನರಿಗೆ ತಲೆಬಾಗಬೇಕು. ಆರ್‌ಎಸ್‌ಎಸ್ ಮತ್ತು ಮೋದಿ ಅವರು ತಮಿಳು ಭಾಷೆ ಮತ್ತು ಸಂಸ್ಕೃತಿಯನ್ನು ಅವಮಾನಿಸಿದ್ದಾರೆ. ಅವರಿಗೆ ಇಲ್ಲಿ ಅವಕಾಶ ನೀಡಬಾರದು’ ಎಂದು ಕರೆ ಕೊಟ್ಟರು.

‘ತಮಿಳು ಭಾರತೀಯ ಭಾಷೆಯಲ್ಲವೇ. ಬಂಗಾಳಿ ಭಾರತೀಯ ಭಾಷೆಯಲ್ಲವೇ. ತಮಿಳು ಸಂಸ್ಕೃತಿ ಭಾರತೀಯ ಸಂಸ್ಕೃತಿಯಲ್ಲವೇ. ಈ ಚುನಾವಣೆಯಲ್ಲಿ ನಡೆಯುತ್ತಿರುವ ಯುದ್ಧವಿದು’ ಎಂದು ರಾಹುಲ್ ಹೇಳಿದರು.

‘ಭಾರತದ ಎಲ್ಲಾ ಭಾಷೆ ಮತ್ತು ಧರ್ಮಗಳನ್ನು ರಕ್ಷಿಸುವುದು ನನ್ನ ಕರ್ತವ್ಯ. ಅಂತೆಯೇ ತಮಿಳು ಭಾಷೆ, ಸಂಸ್ಕೃತಿ ಮತ್ತು ಇತಿಹಾಸವನ್ನು ರಕ್ಷಿಸುವುದು ನನ್ನ ಕರ್ತವ್ಯ. ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಮತ್ತು ಪಳನಿಸ್ವಾಮಿ ಸರ್ಕಾರವು ತಮಿಳು ಭಾಷೆ, ಸಂಸ್ಕೃತಿ– ಸಂಪ್ರದಾಯವನ್ನು ಗೌರವಿಸುತ್ತಿಲ್ಲ’ ಎಂದು ಅವರು ಆರೋಪಿಸಿದರು.

ಎರಡಂಕಿ ಬಿಜೆಪಿ ಶಾಸಕರು–ಮುರುಘನ್:

(ಚೆನ್ನೈ ವರದಿ): ಆಡಳಿತಾರೂಢ ಎಐಎಡಿಎಂಕೆ ಹಾಗೂ ಬಿಜೆಪಿ ನಡುವಿನ ಸೀಟು ಹೊಂದಾಣಿಕೆ ಮಾತುಕತೆ ವಿಳಂಬವಾಗುತ್ತಿಲ್ಲ ಎಂದು ತಮಿಳುನಾಡು ಬಿಜೆಪಿ ಘಟಕದ ಮುಖ್ಯಸ್ಥ ಎಲ್. ಮುರುಘನ್ ಸೋಮವಾರ ಸ್ಪಷ್ಟಪಡಿಸಿದ್ದಾರೆ. ಸೀಟು ಹಂಚಿಕೆ ವಿಚಾರವನ್ನು ಎಳೆದಾಡಲಾಗುತ್ತಿದೆ ಎಂಬುದನ್ನು ಅವರು ಅಲ್ಲಗಳೆದರು.

‘ಎಐಎಡಿಎಂಕೆ–ಬಿಜೆಪಿ ಮೈತ್ರಿಕೂಟ ಸರ್ಕಾರ ಅಸ್ತಿತ್ವಕ್ಕೆ ಬರುವಂತೆ ಮಾಡುವುದೇ ನಮ್ಮ ಮುಂದಿರುವ ಗುರಿ’ ಎಂದಿರುವ ಮುರುಘನ್, ಎಷ್ಟು ಸೀಟುಗಳನ್ನು ನೀಡುವಂತೆ ಎಐಎಡಿಎಂಕೆ ಮುಂದೆ ಪ್ರಸ್ತಾವ ಇರಿಸಲಾಗಿದೆ ಎಂಬುದಕ್ಕೆ ನೇರವಾಗಿ ಉತ್ತರಿಸಲಿಲ್ಲ. ‘ಎರಡಂಕಿಯ ಬಿಜೆಪಿ ಶಾಸಕರು ಇರಲಿದ್ದಾರೆ’ ಎಂದಷ್ಟೇ ಹೇಳಿದರು. ಒಂದೆರಡು ದಿನಗಳಲ್ಲಿ ಈ ಬಗ್ಗೆ ಸ್ಪಷ್ಟ ಚಿತ್ರಣ ಹೊರಬೀಳಲಿದೆ ಎಂದರು.

ಶಶಿಕಲಾ ಬಿಡುಗಡೆ ಬಳಿಕ ಎಐಎಡಿಎಂಕೆ ಪಕ್ಷದ ಜೊತೆ ಟಿಟಿವಿ ದಿನಕರನ್ ಅವರ ಎಎಂಎಂಕೆ ಪಕ್ಷ ವಿಲೀನವಾಗಲಿದೆಯೇ ಎಂಬ ಪ್ರಶ್ನೆಗೆ, ಈ ಬಗ್ಗೆ ಆ ಎರಡೂ ಪಕ್ಷಗಳು ತೀರ್ಮಾನಕ್ಕೆ ಬರಲಿವೆ ಎಂದು ಮುರುಘನ್ ತಿಳಿಸಿದರು.

ಪ್ರಜಾ ಮತ — ಜನತಂತ್ರದ ಹಬ್ಬ 2021



ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಸೋಮವಾರ ಕೋಲ್ಕತ್ತದಲ್ಲಿ ಭೇಟಿ ಮಾಡಿದರು–ಪಿಟಿಐ ಚಿತ್ರ

ಟಿಎಂಸಿಯ ಎಲ್ಲ ಹಾಲಿ ಶಾಸಕರಿಗೆ ಟಿಕೆಟ್ ಅನುಮಾನ

(ಕೋಲ್ಕತ್ತ ವರದಿ): ತೃಣಮೂಲ ಕಾಂಗ್ರೆಸ್ ಮುಂಬರುವ ಪಶ್ಚಿಮ ಬಂಗಾಳ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿಯಿಂದ ಹಲವಾರು ಹಾಲಿ ಶಾಸಕರನ್ನು ಕೈಬಿಡುವ ಸಾಧ್ಯತೆ ಇದೆ ಎಂದು ಮೂಲಗಳು ಸೋಮವಾರ ತಿಳಿಸಿವೆ.

ಯುವಕರು, ಮಹಿಳೆಯರು ಮತ್ತು ಯಾವುದೇ ಕಳಂಕ ಇಲ್ಲದ ನಾಯಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಣಕ್ಕಿಳಿಸಲು ಪಕ್ಷವು ಯೋಜಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪಕ್ಷದ 12 ಸದಸ್ಯರ ಚುನಾವಣಾ ಸಮಿತಿ ಸಭೆಯಲ್ಲಿ ಅಭ್ಯರ್ಥಿಗಳ ಬಗ್ಗೆ ಚರ್ಚೆ ನಡೆಸಿದರು ಎಂದು ತಿಳಿದುಬಂದಿದೆ.

ಬಿಜೆಪಿಗೆ ಹೋಗಿರುವ 19 ಶಾಸಕರೂ ಸೇರಿದಂತೆ 294 ಅಭ್ಯರ್ಥಿಗಳ ಪೈಕಿ ಶೇ 30ರಷ್ಟು ಹೊಸಬರೇ ಇರಲಿದ್ದಾರೆ ಎನ್ನಲಾಗಿದೆ.

ಮಮತಾ–ತೇಜಸ್ವಿ ಭೇಟಿ

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಸಂಭಾವ್ಯ ಮೈತ್ರಿ ಬಗ್ಗೆ ಊಹಾಪೋಹ ಎದ್ದಿರುವ ನಡುವೆಯೇ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರನ್ನು ಸೋಮವಾರ ಭೇಟಿ ಮಾಡಿದರು. ಟಿಎಂಸಿ ಹಿರಿಯ ನಾಯಕ ಹಾಗೂ ಸಚಿವ ಫಿರ್ಹಾದ್ ಹಕೀಮ್ ಅವರು ಸಭೆಯಲ್ಲಿ ಇದ್ದರು.

ಪಶ್ಚಿಮ ಬಂಗಾಳದಲ್ಲಿ ನೆಲೆಸಿರುವ ಬಿಹಾರಿಗರು ಮಮತಾ ಅವರನ್ನು ಬೆಂಬಲಿಸಬೇಕು ಎಂದು ತೇಜಸ್ವಿ ಮನವಿ ಮಾಡಿದರು. ಚುನಾವಣೆಯಲ್ಲಿ ಪಕ್ಷ ಸ್ಪರ್ಧಿಸಲಿದೆಯೇ ಎಂಬ ಪ್ರಶ್ನೆಗೆ ಅವರು ನೇರವಾದ ಉತ್ತರ ನೀಡಲಿಲ್ಲ.

ಬಂಗಾಳಕ್ಕೆ ಕಾಂಗ್ರೆಸ್‌ನಿಂದ 28 ವೀಕ್ಷಕರು

ಚುನಾವಣೆ ನಿಗದಿಯಾಗಿರುವ ಪಶ್ಚಿಮ ಬಂಗಾಳಕ್ಕೆ 28 ವೀಕ್ಷಕರನ್ನು ಕಾಂಗ್ರೆಸ್ ಪಕ್ಷ ನಿಯೋಜಿಸಿದೆ ಎಂದು ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ. ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ, ಬಿಹಾರ ಹಾಗೂ ಜಾರ್ಖಂಡ್‌ನ ಮುಖಂಡರು ವೀಕ್ಷಕರಾಗಿ ನೇಮಕವಾಗಿದ್ದಾರೆ.

8 ಹಂತದ ಮತದಾನ ಪ್ರಶ್ನಿಸಿ ಅರ್ಜಿ

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯನ್ನು 8 ಹಂತಗಳಲ್ಲಿ ನಡೆಸಲು ಮುಂದಾಗಿರುವ ಚುನಾವಣಾ ಆಯೋಗದ ನಿರ್ಧಾರವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಅರ್ಜಿ ಸಲ್ಲಿಸಿರುವ ಎಂ.ಎಲ್. ಶರ್ಮಾ ಅವರು ಚುನಾವಣಾ ಆಯೋಗದ ಈ ನಿರ್ಧಾರದಿಂದ ಸಂವಿಧಾನದ 14 ಹಾಗೂ 21ನೇ ವಿಧಿ ಉಲ್ಲಂಘನೆಯಾಗುತ್ತದೆ ಎಂದು ವಾದ ಮಂಡಿಸಿದ್ದಾರೆ. ಕೆಲವೇ ದಿನಗಳಲ್ಲಿ ಅರ್ಜಿ ವಿಚಾರಣೆಗೆ ಬರುವ ಸಾಧ್ಯತೆಯಿದೆ.

ಪಶ್ಚಿಮ ಬಂಗಾಳ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ‘ಜೈ ಶ್ರೀರಾಮ್’ ಮೊದಲಾದ ಧಾರ್ಮಿಕ ಘೋಷಣೆಗಳನ್ನು ಕೂಗಿದವರ ಮೇಲೆ ಎಫ್‌ಐಆರ್ ದಾಖಲಿಸಲು ಸಿಬಿಐಗೆ ನಿರ್ದೇಶನ ನೀಡುವಂತೆಯೂ ಅವರು ಮನವಿ ಮಾಡಿದ್ದಾರೆ.

ಭ್ರಷ್ಟಾಚಾರ ಆರೋಪಕ್ಕೆ ಸ್ಟಾಲಿನ್ ತಿರುಗೇಟು

(ಚೆನ್ನೈ ವರದಿ): ತಮ್ಮ ಪಕ್ಷದ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿದ್ದ ಗೃಹಸಚಿವ ಅಮಿತ್ ಶಾ ಅವರಿಗೆ ತಿರುಗೇಟು ನೀಡಿರುವ ಡಿಎಂಕೆ ನಾಯಕ ಎಂ.ಕೆ. ಸ್ಟಾಲಿನ್, ತಮಿಳುನಾಡಿನಲ್ಲಿ ಭ್ರಷ್ಟ ಎಐಎಡಿಎಂಕೆ ಜೊತೆ ಬಿಜೆಪಿ ಕೈಜೋಡಿಸಿದೆ ಎಂದಿದ್ದಾರೆ.

ಭಾನುವಾರ ವಿಲ್ಲುಪುರಂನಲ್ಲಿ ಮಾತನಾಡಿದ್ದ ಶಾ, 2ಜಿ ಹಗರಣವನ್ನು ಯಾರು ಮಾಡಿದ್ದು ಎಂದು ಪ್ರಶ್ನಿಸಿದ್ದರು. ಪ್ರಕರಣದಲ್ಲಿ ಕನಿಮೊಳಿ ಹಾಗೂ ಎ. ರಾಜಾ ಪ್ರಮುಖ ಆರೋಪಿಗಳಾಗಿದ್ದರು.

ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಸ್ಟಾಲಿನ್, ‘ಈ ಮೊದಲು ಪ್ರಧಾನಿ ಮೋದಿ ಅವರು ಹೇಳಿದ ಮಾತುಗಳನ್ನೇ ಇದೀಗ ಅಮಿತ್ ಶಾ ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಬರುವ ಬಿಜೆಪಿ ಮುಖಂಡರು ಸಹ ಇದನ್ನೇ ಹೇಳುತ್ತಾರೆ’ ಎಂದರು.

‘ಭ್ರಷ್ಟಾಚಾರ, ಕಮಿಷನ್ ವಸೂಲಿ, ಹಣ ಸಂಗ್ರಹದಲ್ಲಿ ಮುಳುಗಿರುವ ಒ.ಪನ್ನೀರಸೆಲ್ವಂ ಹಾಗೂ ಕೆ. ಪಳನಿಸ್ವಾಮಿ ಜೊತೆ ಅವರು ಕೈಜೋಡಿಸಿದ್ದಾರೆ. ಭ್ರಷ್ಟಾಚಾರದ ಜೊತೆ ಯಾರು ನಿಂತಿದ್ದಾರೆ ಎಂಬುದು ಇದರಿಂದ ಅರ್ಥವಾಗುತ್ತದೆ’ ಎಂದು ಸ್ಟಾಲಿನ್ ವಾಗ್ದಾಳಿ ನಡೆಸಿದ್ದಾರೆ. ಕಳೆದ ವಾರ ಇಬ್ಬರೂ ನಾಯಕರ ಜತೆ ಪ್ರಧಾನಿ ಮೋದಿ ಅವರು ಕೈಹಿಡಿದು ಒಗ್ಗಟ್ಟು ಪ್ರದರ್ಶಿಸಿದ್ದರು.

ಮಾರ್ಚ್ 7ರಂದು ತಿರುಚಿನಾಪಳ್ಳಿಯಲ್ಲಿ ಡಿಎಂಕೆ ಪಕ್ಷವು ವಿಶೇಷ ಸಭೆ ನಡೆಸಲಿದ್ದು, ಒಂದು ದಶಕದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ತಮಿಳುನಾಡನ್ನು ನಂಬರ್ 1 ಮಾಡಲು ‘10 ವರ್ಷಗಳ ಮುನ್ನೋಟ’ವನ್ನು ಬಿಡುಗಡೆ ಮಾಡಲಿದೆ ಎಂದು ಸ್ಟಾಲಿನ್ ಹೇಳಿದರು.

ಬಿಜೆಪಿ ತೆಕ್ಕೆಗೆ ನಿವೃತ್ತ ನ್ಯಾಯಮೂರ್ತಿ ಹಾಗೂ ಐಪಿಎಸ್ ಅಧಿಕಾರಿ

ತಿರುವನಂತಪುರ: ಕೇರಳ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ರವೀಂದ್ರನ್ ಮತ್ತು ಕೇರಳದ ಮಾಜಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ವೇಣುಗೋಪಾಲ್ ಕೆ. ನಾಯರ್ ಅವರು ಬಿಜೆಪಿಗೆ ಸೇರ್ಪಡೆಯಾದರು. ಕೇರಳ ಹೈಕೋರ್ಟ್‌ನ ಮತ್ತೊಬ್ಬ ನಿವೃತ್ತ ನ್ಯಾಯಾಧೀಶ ವಿ. ಚಿದಂಬರೇಶ್ ಕೂಡ ಶೀಘ್ರದಲ್ಲೇ ಪಕ್ಷಕ್ಕೆ ಸೇರುವ ನಿರೀಕ್ಷೆಯಿದೆ.

ಮೆಟ್ರೊಮ್ಯಾನ್ ಇ. ಶ್ರೀಧರನ್, ನಿವೃತ್ತ ಪೊಲೀಸ್ ಮಹಾನಿರ್ದೇಶಕ ಜೇಕಬ್ ಥಾಮಸ್ ಅವರು ಇತ್ತೀಚೆಗೆ ಬಿಜೆಪಿ ಸೇರಿದ್ದರು. ಇವರೆಲ್ಲರೂ ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧೆ ಮಾಡುವ ಸಾಧ್ಯತೆಯಿದೆ. ರವೀಂದ್ರನ್ ಹಾಗೂ ವೇಣುಗೋಪಾಲ್ ನಾಯರ್ ಅವರು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಂದ ಪಕ್ಷದ ಸದಸ್ಯತ್ವವನ್ನು ಪಡೆದರು. ಕೇರಳದಲ್ಲಿ ಅನೇಕ ಉನ್ನತ ವ್ಯಕ್ತಿಗಳು ಶೀಘ್ರದಲ್ಲೇ ಪಕ್ಷಕ್ಕೆ ಸೇರಲಿದ್ದಾರೆ ಎಂದು ಬಿಜೆಪಿ ರಾಜ್ಯ ನಾಯಕತ್ವವು ಈ ಮೊದಲೇ ಘೋಷಿಸಿತ್ತು.

ಸಿಎಎ ಜಾರಿಗೆ ಧೈರ್ಯವಿದೆಯೇ: ಪ್ರಿಯಾಂಕಾ

ಗುವಾಹಟಿ/ಲಖೀಂಪುರ ವರದಿ: ದೇಶದ ವಿವಿಧ ಭಾಗಗಳಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಅನುಷ್ಠಾನಗೊಳಿಸುವ ಬಗ್ಗೆ ಬಿಜೆಪಿ ನಾಯಕರು ಮಾತನಾಡುತ್ತಾರೆ. ಆದರೆ ಅದನ್ನು ಅಸ್ಸಾಂನಲ್ಲಿ ಜಾರಿಗೊಳಿಸುವ ಪ್ರಸ್ತಾಪ ಮಾಡಲು ಧೈರ್ಯವಿಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಸೋಮವಾರ ಆರೋಪಿಸಿದ್ದಾರೆ.

ಗುವಾಹಟಿಯ ಪ್ರಸಿದ್ಧ ಕಾಮಾಕ್ಯ ದೇಗುಲದಲ್ಲಿ ಪ್ರಾರ್ಥನೆ ಸಲ್ಲಿಸುವ ಮೂಲಕ ಪ್ರಿಯಾಂಕಾ ಅವರು ತಮ್ಮ ಎರಡು ದಿನಗಳ ಅಸ್ಸಾಂ ಪ್ರವಾಸಕ್ಕೆ ಸೋಮವಾರ ಚಾಲನೆ ನೀಡಿದರು. ಅಸ್ಸಾಂನ ಕಾಂಗ್ರೆಸ್ ಘಟಕದ ಅಧ್ಯಕ್ಷ ರಿಪುನ್ ಬೋರಾ, ರಾಜ್ಯ ಉಸ್ತುವಾರಿ ನಾಯಕ ಜಿತೇಂದ್ರ ಸಿಂಗ್ ಅವರು ಜತೆಗಿದ್ದರು.

2019ರಲ್ಲಿ ಸಿಎಎ ವಿರುದ್ಧ ಹಿಂಸಾತ್ಮಕ ಪ್ರತಿಭಟನೆಗೆ ಅಸ್ಸಾಂ ಸಾಕ್ಷಿಯಾಗಿತ್ತು. ಐದು ಜನರು ಪ್ರಾಣ ಕಳೆದುಕೊಂಡಿದ್ದರು.

ಬಿಜೆಪಿ ನೀಡಿದ ಸುಳ್ಳು ಭರವಸೆಗಳಿಂದ ಜನರು ಬೇಸರಗೊಂಡಿರುವುದರಿಂದ ಕಾಂಗ್ರೆಸ್ ಮತ್ತು ಇತರ ಆರು ಪಕ್ಷಗಳ ಮೈತ್ರಿಕೂಟವು ಚುನಾವಣೆ ನಂತರ ಅಸ್ಸಾಂನಲ್ಲಿ ಸರ್ಕಾರ ರಚಿಸಲಿದೆ ಎಂದು ಪ್ರಿಯಾಂಕಾ ವಿಶ್ವಾಸದಿಂದ ಹೇಳಿದರು.

ಕಾಂಗ್ರೆಸ್ ಮುಖಂಡ ಸೂತ್ರದ ಗೊಂಬೆ: ಸಿದ್ದಿಕಿ

‘ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಮುಖಂಡರೊಬ್ಬರು ಸೂತ್ರದ ಬೊಂಬೆಯ ರೀತಿ ವರ್ತಿಸುತ್ತಿದ್ದು ಟಿಎಂಸಿ ಹಾಗೂ ಬಿಜೆಪಿ ಜೊತೆ ನಿಕಟ ಸಂಪರ್ಕ ಹೊಂದಿದ್ದಾರೆ. ಚುನಾವಣೆ ಬಳಿಕ ಯಾರು ಅಧಿಕಾರಕ್ಕೆ ಬರುವರೋ ಅವರ ಸಂಗಡ ಹೋಗಲಿದ್ದಾರೆ’ ಎಂದು ಇಂಡಿಯನ್ ಸೆಕ್ಯುಲರ್ ಫ್ರಂಟ್ ಮುಖಂಡ ಅಬ್ಬಾಸ್ ಸಿದ್ದಿಕಿ ಸೋಮವಾರ ಹೇಳಿದ್ದಾರೆ.

ಬಂಗಾಳದ ಪ್ರತಿಪಕ್ಷ ಮೈತ್ರಿಕೂಟವು ಸೀಟು ಹಂಚಿಕೆ ಬಗ್ಗೆ ಶೀಘ್ರವೇ ನಿರ್ಧಾರಕ್ಕೆ ಬರಬೇಕು ಎಂದು ಅವರು ಹೇಳಿದರು. ‘ನಿನ್ನೆ (ಭಾನುವಾರ) ನಾನು ಹೇಳಿದ ಮಾತುಗಳಿಂದ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಅಧಿರ್ ಚೌಧರಿ ಅವರಿಗೆ ಬೇಸರವಾಗಿದ್ದರೆ ಕ್ಷಮೆ ಕೇಳುತ್ತೇನೆ. ಕಾಂಗ್ರೆಸ್ ಸ್ಪಷ್ಟ ನಿಲುವು ತಳೆಯಬೇಕು. ಮೈತ್ರಿ ಬಯಸುತ್ತಾರೋ ಇಲ್ಲವೋ ಎಂಬ ಬಗ್ಗೆ ಖಚಿತತೆ ಇರಬೇಕು. ಕೊನೆಯ ಕ್ಷಣದವರೆಗೂ ಕಾಯಲು ನಮಗಾಗದು’ ಎಂದರು.

ಸಿದ್ದಿಕಿ ಅವರ ಆರೋಪಗಳನ್ನು ಹಿರಿಯ ಕಾಂಗ್ರೆಸ್ ಮುಖಂಡ ಪ್ರದೀಪ್ ಭಟ್ಟಾಚಾರ್ಯ ಅಲ್ಲಗಳೆದರು. ‘ಇತರೆ ಪಕ್ಷಗಳ ಜೊತೆ ಸಂಪರ್ಕದಲ್ಲಿರುವ ವ್ಯಕ್ತಿಯ ಹೆಸರನ್ನು ಸಿದ್ದಿಕಿ ಏಕೆ ಹೇಳುತ್ತಿಲ್ಲ’ ಎಂದು ಅವರು ಪ್ರಶ್ನಿಸಿದ್ದಾರೆ.

ಸರ್ಕಾರದ ಮೌನ ಅನುಮಾನಾಸ್ಪದ: ಟಿಕಾಯತ್

ಬಿಜ್ನೋರ್ (ಉತ್ತರ ಪ್ರದೇಶ) (ಪಿಟಿಐ): ‘ರೈತರ ಪ್ರತಿಭಟನೆ ಬಗ್ಗೆ ಕೇಂದ್ರ ಸರ್ಕಾರವು ಕೆಲವು ದಿನಗಳಿಂದ ಮೌನವಹಿಸಿದೆ. ರೈತರ ಪ್ರತಿಭಟನೆಯ ವಿರುದ್ಧ ಕ್ರಮ ತೆಗೆದುಕೊಳ್ಳಲು ಸರ್ಕಾರ ಯೋಜಿಸಿದೆ ಎಂಬುದನ್ನು ಇದು ಸೂಚಿಸುತ್ತದೆ’ ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ನಾಯಕ ರಾಕೇಶ್ ಟಿಕಾಯತ್ ಸಂದೇಹ ವ್ಯಕ್ತಪಡಿಸಿದ್ದಾರೆ.

ಇಲ್ಲಿ ನಡೆದ ರೈತ ಮಹಾಪಂಚಾಯಿತಿಯ ನಂತರ ಪತ್ರಕರ್ತರ ಜತೆ ಮಾತನಾಡುವಾಗ ಅವರು ಈ ಸಂದೇಹ ವ್ಯಕ್ತಪಡಿಸಿದ್ದಾರೆ. ‘10-15 ದಿನಗಳಿಂದ ಸರ್ಕಾರ ಈ ಪ್ರತಿಭಟನೆಯ ಬಗ್ಗೆ ಏನನ್ನೂ ಹೇಳುತ್ತಿಲ್ಲ. ಪ್ರತಿಭಟನೆನಿರತ ರೈತರ ಜತೆ ಮಾತುಕತೆ ನಡೆಸುವ ಪ್ರಸ್ತಾವವನ್ನು ಸರ್ಕಾರವೇ ಮುಂದಿಡಬೇಕು. ಆದರೆ ಸರ್ಕಾರ ಈ ಕೆಲಸ ಮಾಡುತ್ತಿಲ್ಲ. ಸರ್ಕಾರ ಬೇರೆ ಏನೋ ಮಾಡಲು ಹೊರಟಿದೆ ಎಂಬುದನ್ನು ಇದು ಸೂಚಿಸುತ್ತದೆ’ ಎಂದು ಅವರು ಹೇಳಿದ್ದಾರೆ.

‘ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡರೂ, ರೈತರು ತಮ್ಮ ಹೋರಾಟದಿಂದ ಒಂದು ಹೆಜ್ಜೆಯೂ ಹಿಂದೆ ಸರಿಯುವುದಿಲ್ಲ. ರೈತರು ಎಲ್ಲದಕ್ಕೂ ಸಿದ್ಧರಾಗಿದ್ದಾರೆ. ಬೆಳೆ ಬೆಳೆಯಲು ಮತ್ತು ಹೋರಾಟ ಮುಂದುವರಿಸಲು ಸಿದ್ಧತೆ ನಡೆಸಿದ್ದಾರೆ. ಸರ್ಕಾರ ಯಾವಾಗ ಮಾತುಕತೆಗೆ ಬರುತ್ತದೆಯೋ ಆಗ ಬರಲಿ. ಮಾರ್ಚ್ 24ರವರೆಗೆ ದೇಶದಾದ್ಯಂತ ಹಲವೆಡೆ ರೈತ ಮಹಾಪಂಚಾಯಿತಿಗಳು ನಡೆಯಲಿವೆ. ಈ ಕಾರ್ಯಕ್ರಮಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ’ ಎಂದು ಅವರು ಹೇಳಿದ್ದಾರೆ.



ಜನವರಿ 26ರ ರೈತರ ಟ್ರ್ಯಾಕ್ಟರ್ ರ‍್ಯಾಲಿಯ ವೇಳೆ ಹಿಂಸಾಚಾರ ನಡೆದುದಕ್ಕೆ ರೈತರು ಕಾರಣರಲ್ಲ. ಬದಲಿಗೆ ಅಂದು ಎಲ್ಲಾ ಸಮಸ್ಯೆಗಳನ್ನು ಸೃಷ್ಟಿಸಿದ್ದು ಸರ್ಕಾರ

ರಾಕೇಶ್ ಟಿಕಾಯತ್, ಬಿಕೆಯು ನಾಯಕ



ರೈತರು ಭತ್ತ ಮತ್ತು ಗೋಧಿಯನ್ನೇ ಬೆಳೆಯಬೇಕಿಲ್ಲ. ಬೇರೆ ಬೆಳೆಗಳು, ಸಲಾಡ್‌ಗಳಲ್ಲಿ ಬಳಸುವಂತಹ ತರಕಾರಿಗಳನ್ನು ಬೆಳೆಯುವಂತಹ ವಾತಾವರಣವನ್ನು ನಾವು ಸೃಷ್ಟಿಸಿದ್ದೇವೆ

ನರೇಂದ್ರ ಮೋದಿ, ಪ್ರಧಾನಿ

‘ಕೆಲವು ರೈತರು ತಮ್ಮ ಬೆಳೆಗಳನ್ನು ನಾಶಮಾಡುತ್ತಿದ್ದಾರೆ ಎಂಬ ವರದಿಗಳು ಇವೆ. ಅಂತಹ ಸಂದರ್ಭ ಇನ್ನೂ ಬಂದಿಲ್ಲ ಎಂಬುದನ್ನು ರೈತರು ಅರ್ಥಮಾಡಿಕೊಳ್ಳಬೇಕು. ರೈತರು ತಮ್ಮ ಬೆಳೆಗಳನ್ನು ನಾಶಮಾಡಬಾರದು. ಆದರೆ ಈ ಬಗ್ಗೆಯೂ ಸರ್ಕಾರ ಏನೂ ಮಾತನಾಡುತ್ತಿಲ್ಲ. ಬೆಳೆ ನಾಶಮಾಡಬೇಡಿ ಎಂದು ಸರ್ಕಾರ ರೈತರಿಗೆ ಏಕೆ ಹೇಳುತ್ತಿಲ್ಲ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಉತ್ತರ ಪ್ರದೇಶದಲ್ಲಿ ಗೋಧಿ ಕಟಾವಿಗೆ ಸಿದ್ಧವಾಗಿದೆ. ಸರ್ಕಾರವು ಗೋಧಿಯನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸದೇ ಇದ್ದರೆ, ರಾಜ್ಯದ ಎಲ್ಲಾ ಜಿಲ್ಲಾಕೇಂದ್ರಗಳಲ್ಲಿ ಧರಣಿ ನಡೆಸಲಿದ್ದೇವೆ’ ಎಂದು ಎಚ್ಚರಿಕೆ ನೀಡಿದ್ದಾರೆ.

‘ರೈತರು ಲಸಿಕೆ ಹಾಕಿಸಿಕೊಳ್ಳುವುದಿಲ್ಲ’

ಪ್ರತಿಭಟನೆನಿರತ ರೈತರು ಕೋವಿಡ್-19 ಲಸಿಕೆ ಹಾಕಿಸಿಕೊಳ್ಳುವುದಿಲ್ಲ ಎಂದು ರೈತ ಸಂಘಟನೆಗಳು ಹೇಳಿವೆ. ಆದರೆ ಸ್ವಯಂಪ್ರೇರಿತರಾಗಿ ರೈತರು ಲಸಿಕೆ ಹಾಕಿಸಿಕೊಳ್ಳುವುದಿದ್ದರೆ, ಅದನ್ನು ತಡೆಯುವುದಿಲ್ಲ ಎಂದು ರೈತ ನಾಯಕರು ಹೇಳಿದ್ದಾರೆ.

‘ಲಸಿಕೆ ಕೇಂದ್ರಕ್ಕೆ ಹೋಗಿ ನಾನು ಲಸಿಕೆ ಹಾಕಿಸಿಕೊಳ್ಳುವುದಿಲ್ಲ. ನಾವು ಕೊರೊನಾವನ್ನು ಈಗಾಗಲೇ ಕೊಂದಿದ್ದೇವೆ. ರೈತರು ತಮ್ಮ ಹೊಲಗಳಲ್ಲಿ ಮೈಬಗ್ಗಿಸಿ ದುಡಿಯುವ ಕಾರಣ, ಅವರ ರೋಗನಿರೋಧಕ ಶಕ್ತಿ ಪ್ರಬಲವಾಗಿದೆ. ರೈತರು ಕೊರೊನಾವೈರಸ್‌ಗೆ ಹೆದರುವುದಿಲ್ಲ’ ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಮುಂದಾಳು ಬಲಬೀರ್ ಸಿಂಗ್ ರಾಜೇವಾಲ್ (80) ಅವರು ಹೇಳಿದ್ದಾರೆ.

‘ನಾವು ಕೋವಿಡ್‌ಗೆ ಹೆದರುವುದಿಲ್ಲ. ದೆಹಲಿಯ ಗಡಿಗಳಲ್ಲಿ ಸಾವಿರಾರು ರೈತರು ಕೂತು ಪ್ರತಿಭಟನೆ ನಡೆಸುತ್ತಿದ್ದಾರೆ. ಆದರೆ, ಈವರೆಗೆ ಇಲ್ಲಿ ಒಂದೂ ಕೋವಿಡ್ ಪ್ರಕರಣ ಪತ್ತೆಯಾಗಿಲ್ಲ. ನಾನು ಲಸಿಕೆ ಹಾಕಿಸಿಕೊಳ್ಳುವುದಿಲ್ಲ’ ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಮತ್ತೊಬ್ಬ ನಾಯಕ ಕುಲವಂತ ಸಿಂಗ್ ಸಂಧು ಹೇಳಿದ್ದಾರೆ.

‘ಮಾರಾಟಕ್ಕೆ ಹೆಚ್ಚು ಆಯ್ಕೆಗಳು ಬೇಕಿವೆ’

ನವದೆಹಲಿ (ಪಿಟಿಐ): ‘ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಹೆಚ್ಚಿನ ಆಯ್ಕೆಗಳ ಅಗತ್ಯವಿದೆ. ಇದು ಇಂದಿನ ತುರ್ತು’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಬಜೆಟ್‌ನಲ್ಲಿ ಕೃಷಿ ಸಚಿವಾಲಯಕ್ಕೆ ನೀಡಿರುವ ಅನುದಾನಗಳ ಬಗ್ಗೆ ವೆಬಿನಾರ್‌ನಲ್ಲಿ ವಿವರ ನೀಡುವಾಗ ಪ್ರಧಾನಿ ಈ ಮಾತು ಹೇಳಿದ್ದಾರೆ. ‘ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಹೆಚ್ಚು ಆಯ್ಕೆಗಳನ್ನು ಸೃಷ್ಟಿಸಲು ಖಾಸಗಿ ವಲಯದ ಭಾಗವಹಿಸುವಿಕೆ ಅತ್ಯಗತ್ಯವಾಗಿದೆ. ಸರ್ಕಾರಿ, ಖಾಸಗಿ ಮತ್ತು ಸೊಸೈಟಿ ಮಾದರಿಯಲ್ಲಿ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಹೆಚ್ಚಿನ ಆಯ್ಕೆಗಳನ್ನು ನೀಡಬಹುದು’ ಎಂದು ಅವರು ವಿವರಿಸಿದ್ದಾರೆ.

‘ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡುವುದರಿಂದ ರೈತರಿಗೆ ಹೆಚ್ಚಿನ ಲಾಭವಾಗಲಿದೆ. ಇದರಿಂದ ರೈತರ ಆದಾಯ ಹೆಚ್ಚಲಿದೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡಲು ಸಾಕಷ್ಟು ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ನಡೆಯಬೇಕಿವೆ. ಇದರಲ್ಲೂ ಖಾಸಗಿ ವಲಯದ ಭಾಗವಹಿಸುವಿಕೆ ಅತ್ಯಗತ್ಯ’ ಎಂದು ಮೋದಿ ಹೇಳಿದ್ದಾರೆ.

‘ಬೇಳೆಕಾಳುಗಳು, ತರಕಾರಿಗಳು, ಹಣ್ಣುಗಳು ಮತ್ತು ಮೀನುಗಳನ್ನು ಸಂಸ್ಕರಿಸುವ ವ್ಯವಸ್ಥೆಯ ಅಗತ್ಯವಿದೆ. ರೈತರಿಗೆ ಅವರ ಹಳ್ಳಿಗಳ ಸಮೀಪವೇ ಈ ಸವಲತ್ತು ದೊರೆಯುವಂತೆ ಆಗಬೇಕು. ಈ ಮೂಲಕ ಈ ಉತ್ಪನ್ನಗಳ ಮೌಲ್ಯವರ್ಧನೆ ಮಾಡಬೇಕು. ಇದರಿಂದ ಗ್ರಾಮೀಣ ಪ್ರದೇಶದ ಯುವಕರಿಗೆ ಹಳ್ಳಿಗಳಲ್ಲೇ ಉದ್ಯೋಗ ದೊರೆಯುತ್ತದೆ. ಈ ಕೆಲಸಗಳು 30-40 ವರ್ಷಗಳ ಹಿಂದೆಯೇ ಆಗಿದ್ದರೆ, ಇಂದು ಇಂತಹ ಸ್ಥಿತಿ ಇರುತ್ತಿರಲಿಲ್ಲ’ ಎಂದು ಅವರು ಹೇಳಿದ್ದಾರೆ.

‘ಮೌಲ್ಯವರ್ಧಿತ ಕೃಷಿ ಉತ್ಪನ್ನಗಳು ನಗರಗಳನ್ನು ತಲುಪುವಂತಾಗಬೇಕು. ಒಂದು ಜಿಲ್ಲೆಯಿಂದ ಒಂದು ಮೌಲ್ಯವರ್ಧಿತ ಉತ್ಪನ್ನ ಬರುವಂತಾಗಬೇಕು. ಆ ಮೂಲಕ ಕೃಷಿ ಉತ್ಪನ್ನಗಳು ಜಾಗತಿಕ ಮಾರುಕಟ್ಟೆ ಪ್ರವೇಶಿಸಬಹುದು. ಇದಕ್ಕಾಗಿ ಯೋಜನೆ ರೂಪಿಸಲಾಗುತ್ತದೆಯೇ ಎಂಬುದನ್ನು ಪರಿಶೀಲಿಸಬೇಕು’ ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ

ಸರ್ಕಾರಿ ಸೇವೆ: ಪಡೆಯೋದು ಹೇಗೆ

ಮನೆಯಲ್ಲೇ ಕುಳಿತು ಗ್ರಾಮ ನಕ್ಷೆ, ಸರ್ವೆ ಸಂಖ್ಯೆ ನೋಡಿ



ಇಲ್ಲಿದೆ ಮಾಹಿತಿ

ಡಾ.ಬಿ.ಆರ್.ಹರೀಶ್ ನಾಯ್ಕ್, ಉಪವಿಭಾಗಾಧಿಕಾರಿ, ಬಿಡಿಎ ಹಾಗೂ ಬಿಬಿಎಂಪಿ ಉತ್ತರ ವಿಭಾಗ

https://bit.ly/3q5bqm3

‘ಸೀರಂ, ಭಾರತ್ ಬಯೊಟೆಕ್ ಮಾಹಿತಿ ಕದ್ದ ಚೀನಾ ಹ್ಯಾಕರ್‌ಗಳು’

ಖಾಸಗಿ ಸೈಬರ್ ಗುಪ್ತಚರ ಏಜೆನ್ಸಿ ಮಾಹಿತಿ

ನವದೆಹಲಿ (ರಾಯಿಟರ್ಸ್): ಚೀನಾ ಸರ್ಕಾರ ಬೆಂಬಲಿತ ಹ್ಯಾಕರ್‌ಗಳ ಗುಂಪು ಭಾರತದ ಲಸಿಕೆ ತಯಾರಿಕೆ ಕಂಪನಿಗಳಾದ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಮತ್ತು ಭಾರತ್ ಬಯೊಟೆಕ್‌ನ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳ ಮೇಲೆ ದಾಳಿ ನಡೆಸಿವೆ ಎಂದು ಸೈಬರ್ ಗುಪ್ತಚರ ಏಜೆನ್ಸಿ ಒಂದು ಹೇಳಿದೆ.

ಸಿಂಗಪುರ ಮತ್ತು ಜಪಾನ್‌ನಲ್ಲಿ ಕಚೇರಿ ಹೊಂದಿರುವ ಸೈಫರ್ಮಾ ಸೈಬರ್ ಗುಪ್ತಚರ ಏಜೆನ್ಸಿಯು ಈ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಭಾರತದ ‘ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಂ’ (ಸಿಇಆರ್‌ಟಿ) ಜತೆಗೆ ಹಂಚಿಕೊಂಡಿದೆ. ಈ ಸಂಬಂಧ ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ. ಅದರ ಮಾಹಿತಿಯನ್ನು ಮಾಧ್ಯಮಗಳಿಗೆ ನೀಡಲಾಗದು ಎಂದು ಸಿಇಆರ್‌ಟಿ ಹೇಳಿದೆ.

‘ಚೀನಾ ಸರ್ಕಾರ ಬೆಂಬಲಿತ ಹ್ಯಾಕರ್‌ಗಳ ಗುಂಪು ಎಪಿಟಿ10 (ಸ್ಟೋನ್‌ಗೋಲ್ಡ್ ಎಂದೂ ಕರೆಯಲಾಗುತ್ತದೆ) ಹಲವು ದಿನಗಳಿಂದ ಎಸ್‌ಐಐ ಮತ್ತು ಭಾರತ್ ಬಯೊಟೆಕ್‌ನ ಮಾಹಿತಿ ತಂತ್ರಜ್ಞಾನ ವ್ಯವಸ್ಥೆ ವೇಳೆ ಕಣ್ಗಾವಲು ನಡೆಸುತ್ತಿದೆ. ಈ ಎರಡೂ ಕಂಪನಿಗಳ ಲಸಿಕೆ ತಯಾರಿಕೆ ಮತ್ತು ಪೂರೈಕೆಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಹ್ಯಾಕರ್‌ಗಳು ಪರಿಶೀಲಿಸಿದ್ದಾರೆ. ಇದು ಲಸಿಕೆ ತಯಾರಿಕೆ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಕಂಪನಿಗಳ ಮೇಲೆ ಪೈಪೋಟಿ ನಡೆಸಲು ಚೀನಾದ ಕಂಪನಿಗಳಿಗೆ ನೆರವಾಗಬಹುದು ಎಂದು ವಿಶ್ಲೇಷಿಸಲಾಗಿದೆ’ ಎಂದು ಸೈಫರ್ಮಾ ಹೇಳಿದೆ.

‘ಎರಡೂ ಕಂಪನಿಗಳ ಮಾಹಿತಿ ತಂತ್ರಜ್ಞಾನ ವ್ಯವಸ್ಥೆ ದುರ್ಬಲವಾಗಿವೆ’ ಎಂದೂ ಸೈಫರ್ಮಾ ಹೇಳಿದೆ.

‘ನಾಲ್ಕು ದಿನಗಳಲ್ಲಿ ಉಪಚುನಾವಣೆ ಘೋಷಣೆ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ನಾಲ್ಕು ದಿನಗಳಲ್ಲಿ ಉಪಚುನಾವಣೆ ಘೋಷಣೆ ಆಗಲಿದೆ. ನಾಲ್ಕು ಕ್ಷೇತ್ರಗಳಲ್ಲೂ ಬಿಜೆಪಿ ಗೆಲುವು ಸಾಧಿಸಲಿದೆ’ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೋಮವಾರ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬೆಳಗಾವಿ ಲೋಕಸಭಾ ಕ್ಷೇತ್ರ ಹಾಗೂ ಮಸ್ಕಿ, ಬಸವಕಲ್ಯಾಣ, ಸಿಂಧಗಿ ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ. ಉಪಚುನಾವಣೆಗೆ ಪಕ್ಷದ ಉಸ್ತುವಾರಿಗಳನ್ನು ನೇಮಿಸಲಾಗಿದೆ. ಚುನಾವಣೆ ಘೋಷಣೆಯಾದ ತಕ್ಷಣ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು. ಮಾರ್ಚ್ 8ರಂದು ಬಜೆಟ್ ಮಂಡಿಸಿದ ನಂತರ ಚುನಾವಣಾ ಪ್ರಚಾರ ಆರಂಭಿಸುವೆ’ ಎಂದರು.

ಹಲವು ದೇವಸ್ಥಾನಗಳಿಗೆ ಭೇಟಿ: ಇಲ್ಲಿ ಡಿವಿಜನ್ ವೀರಶೈವ ಹಾಸ್ಟೆಲ್ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿದ ನಂತರ ಯಡಿಯೂರಪ್ಪ ಅವರು, ಕೋಟೆ ಸೀತಾರಾಮಾಂಜನೇಯ, ಕೋಟೆ ಮಾರಿಕಾಂಬಾ, ಗೌಡ ಸಾರಸ್ವತ ಸಮಾಜದ ಲಕ್ಷ್ಮಿ ವೆಂಕಟರಮಣಸ್ವಾಮಿ ದೇಗುಲಗಳಲ್ಲಿ ಪೂಜೆ ಸಲ್ಲಿಸಿದರು.

ಶಿಕ್ಷಕರ ಅಲೆದಾಟ ತಪ್ಪಿಸಲು ‘ಅದಾಲತ್’

ಪ್ರಜಾವಾಣಿ ವಾರ್ತೆ

ಧಾರವಾಡ: ‘ಕಚೇರಿ ಕೆಲಸಗಳಿಗಾಗಿ ಶಾಲಾ ಶಿಕ್ಷಕರ ಅನಗತ್ಯ ಅಲೆದಾಟ ತಪ್ಪಿಸಲು ಆಯಾ ಶೈಕ್ಷಣಿಕ ವಲಯದ ವ್ಯಾಪ್ತಿಯಲ್ಲಿ ಶಿಕ್ಷಣ ಅದಾಲತ್ ಆಯೋಜಿಸಲಾಗುತ್ತಿದೆ’ ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ ಕುಮಾರ್ ಸೋಮವಾರ ತಿಳಿಸಿದರು.

ಬೆಳಗಾವಿ ಶೈಕ್ಷಣಿಕ ವಿಭಾಗ ಮಟ್ಟದ ‘ಶಿಕ್ಷಣ ಸ್ಪಂದನ’ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ಬೆಂಗಳೂರು, ಮೈಸೂರು, ಕಲ್ಯಾಣ ಕರ್ನಾಟಕ ಭಾಗಗಳಲ್ಲಿಯೂ ಅದಾಲತ್‌ಗಳನ್ನು ನಡೆಸಲಾಗುವುದು.

ಯಾವುದೇ ಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಶಿಕ್ಷಕರಿಗೆ ತೊಂದರೆ ಆಗದಂತೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಗೊಳಿಸಲಾಗುವುದು


ಎಸ್. ಸುರೇಶ ಕುಮಾರ್, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ

ಇಂಥದ್ದೊಂದು ಅದಾಲತ್‌ಗೆ ಅರ್ಜಿ ಕರೆದಾಗ 71 ಸಾವಿರ ಅರ್ಜಿಗಳು ಮೊಬೈಲ್ ಆ್ಯಪ್ ಮೂಲಕವೇ ಬಂದಿವೆ’ ಎಂದು ತಿಳಿಸಿದರು.

‘ಪರೀಕ್ಷೆ ಕಾಲ ಆರಂಭವಾಗಿದೆ. ಶಿಕ್ಷಕರು ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಹಾಗೂ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಒತ್ತು ನೀಡಬೇಕು. ಕೋವಿಡ್ ಸಂದರ್ಭದಲ್ಲಿ ಪಾಲ್ಗೊಂಡಂತೆ ಪರೀಕ್ಷೆ ನಡೆಸಲು ಉತ್ಸಾಹದಿಂದ ಪಾಲ್ಗೊಳ್ಳಬೇಕು’ ಎಂದು ಹೇಳಿದರು.

‘ಬೆಳಗಾವಿ ವಿಭಾಗಮಟ್ಟದ ಶಿಕ್ಷಣ ಅದಾಲತ್‌ನಲ್ಲಿ 2940 ಅರ್ಜಿಗಳು ಸಲ್ಲಿಕೆಯಾಗಿದ್ದವು. ಇದರಲ್ಲಿ 2674 ಅರ್ಜಿಗಳ ವಿಲೇವಾರಿ ಆಗಿದೆ. ಉಳಿದವನ್ನು ಶೀಘ್ರ ಪರಿಹರಿಸಲಾಗುವುದು. ಅದರಂತೆಯೇ ಪದವಿಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿ 90 ಅರ್ಜಿಗಳಲ್ಲಿ 41 ಅರ್ಜಿಗಳ ವಿಲೇವಾರಿ ಆಗಿದೆ’ ಎಂದು ಸಚಿವ ಸುರೇಶ್ ಕುಮಾರ್ ತಿಳಿಸಿದರು.

‘ನಂಬಿದವರು ಬೆನ್ನಿಗೆ ಚೂರಿ ಹಾಕಿದರು’



ಬಿ.ಆರ್.ಶೆಟ್ಟಿ

ಉಡುಪಿ: ‘ನಂಬಿದವರು ಬೆನ್ನಿಗೆ ಚೂರಿಹಾಕಿದ್ದರಿಂದ ಉದ್ಯಮದಲ್ಲಿ ಆರ್ಥಿಕ ನಷ್ಟ ಅನುಭವಿಸಬೇಕಾಯಿತು’ ಎಂದು ಅನಿವಾಸಿ ಭಾರತೀಯ ಉದ್ಯಮಿ ಬಿ.ಆರ್.ಶೆಟ್ಟಿ ಸೋಮವಾರ ನೋವಿನಿಂದ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಅಬುಧಾಬಿಯ ಕಂಪನಿಯಲ್ಲಿ ಅಕೌಂಟೆಂಟ್ ಆಗಿದ್ದ ವ್ಯಕ್ತಿಯನ್ನು ನಂಬಿ ಸಿಎಫ್‌ಒ, ಸಿಇಒ ಜವಾಬ್ದಾರಿ ನೀಡಲಾಯಿತು. ಆತ ನಂಬಿಕೆದ್ರೋಹ ಎಸಗಿದ’ ಎಂದರು.

‘2018ರಲ್ಲಿ ಕಂಪನಿಯ ಒಟ್ಟು ಮೌಲ್ಯ 12.8 ಬಿಲಿಯನ್ ಡಾಲರ್‌ಗೆ ಏರಿಕೆಯಾಗಿತ್ತು. ಅತಿಯಾಗಿ ನಂಬಿದ್ದವರೇ ವಿಶ್ವಾಸ ದ್ರೋಹ ಎಸಗಿದ್ದರಿಂದ ಸಂಕಷ್ಟಕ್ಕೆ ಸಿಲುಕಬೇಕಾಯಿತು. ವಿದೇಶದಲ್ಲಿರುವ ಉದ್ಯಮಗಳು ನಷ್ಟದಲ್ಲಿರುವುದು ಸತ್ಯ’ ಎಂದರು.

‘ಡೊನಾಲ್ಡ್ ಟ್ರಂಪ್‌ಗೆ ಹಿಂದೆ ಕ್ರೆಡಿಟ್ ಕಾರ್ಡ್ ನೀಡಲು ಬ್ಯಾಂಕ್‌ಗಳು ಹಿಂದೇಟು ಹಾಕಿದ್ದವು. ದಿವಾಳಿ ಅಂಚಿಗೆ ತಲುಪಿದ್ದ ಟ್ರಂಪ್ ಸವಾಲುಗಳನ್ನು ಮೆಟ್ಟಿ ಅಮೆರಿಕದ ಅಧ್ಯಕ್ಷಗಾದಿಗೇರಿದರು. ಅದೇ ರೀತಿ ಸವಾಲುಗಳನ್ನು ಮೀರಿ ಹೊರಬರುವ ವಿಶ್ವಾಸವಿದೆ. ನಾನು ಎಲ್ಲಿಗೂ ಓಡಿ ಹೋಗುವುದಿಲ್ಲ. ಧೈರ್ಯವಾಗಿ ಸಮಸ್ಯೆಗಳನ್ನು ಎದುರಿಸುತ್ತೇನೆ’ ಎಂದು ಹೇಳಿದರು.

ವಿದ್ಯುತ್ ಜಾಲಕ್ಕೆ ಚೀನಾ ಕನ್ನ

ಒಂದನೇ ಪುಟದಿಂದ...

ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಈ ವೈಫಲ್ಯದ ಬಗ್ಗೆ ತನಿಖೆಗೂ ಆದೇಶಿಸಿದ್ದರು.

ಈ ಗ್ರಿಡ್ ವೈಫಲ್ಯಕ್ಕೆ ಚೀನಾದ ಹ್ಯಾಕರ್‌ಗಳು ಕಾರಣ ಆಗಿರಬಹುದೇ ಎಂಬ ಅನುಮಾನ ಈಗ ಮೂಡಿದೆ.

ಗಡಿಗೆ ಸಂಬಂಧಿಸಿ ಭಾರತವು ತನ್ನ ನಿಲುವನ್ನು ಇನ್ನಷ್ಟು ಬಿಗಿಗೊಳಿಸಿದರೆ ಏನಾಗಬಹುದು ಎಂಬುದನ್ನು ತೋರಿಸುವುದಕ್ಕಾಗಿಯೇ ಮುಂಬೈ ಗ್ರಿಡ್ ವಿಫಲವಾಗುವಂತೆ ಮಾಡಲಾಗಿದೆಯೇ ಎಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾದ ವರದಿಯಲ್ಲಿ ಪ್ರಶ್ನಿಸಲಾಗಿದೆ.

ಆಗಿರಬಹುದಾದ ಹಾನಿಯನ್ನು ಗುರುತಿಸಿ ಸರಿಪಡಿಸಲು ಮತ್ತು ಅಗತ್ಯ ತನಿಖೆ ಕೈಗೊಳ್ಳಲು ಸಾಧ್ಯವಾಗುವಂತೆ ವರದಿ ಪ್ರಕಟಿಸುವುದಕ್ಕೆ ಮುನ್ನವೇ ಭಾರತ ಸರ್ಕಾರದ ಸಂಬಂಧಪಟ್ಟ ಇಲಾಖೆಗಳಿಗೆ ಮಾಹಿತಿ ನೀಡಲಾಗಿತ್ತು ಎಂದು ರೆಕಾರ್ಡೆಡ್ ಫ್ಯೂಚರ್ ಸಂಸ್ಥೆಯು ಹೇಳಿದೆ.

ಭಾರತದ ಸಂಸ್ಥೆಗಳ ಜಾಲದಲ್ಲಿ ರೆಡ್‌ಇಕೊ ಗುಂಪಿನ ಚಟುವಟಿಕೆ 2020ರ ಆರಂಭದಲ್ಲಿಯೇ ಕಂಡು ಬಂದಿತ್ತು. ಈ ಚಟುವಟಿಕೆಯು ತೀವ್ರಗೊಂಡ ಕಾರಣಕ್ಕೆ ರೆಕಾರ್ಡೆಡ್ ಫ್ಯೂಚರ್ ಸಂಸ್ಥೆಯ ಇನ್‌ಸಿಕ್ಟ್ ಗ್ರೂಪ್ ಎಂಬ ವಿಭಾಗವು ನಿಗಾ ಇರಿಸಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

ಕಂಪ್ಯೂಟರ್ ಜಾಲದಲ್ಲಿ ಕುತಂತ್ರಾಂಶವನ್ನು ಕೂರಿಸಿದರೆ, ಅದು ಚೀನಾದ ಕಾರ್ಯತಂತ್ರಗಳಿಗೆ ಪೂರಕವಾಗಿ ಕೆಲಸ ಮಾಡಬಹುದು. ಗಡಿ ಬಿಕ್ಕಟ್ಟು ತೀವ್ರಗೊಂಡಾಗ ಸೇನೆಯ ಸಿಗ್ನಲ್ ವ್ಯವಸ್ಥೆಯ ಮೇಲೆಯೂ ಪರಿಣಾಮ ಬೀರಬಹುದು ಎಂದು ವರದಿಯಲ್ಲಿ ಹೇಳಲಾಗಿದೆ.

2020ರ ಆರಂಭದಲ್ಲಿಯೇ ಕುತಂತ್ರಾಂಶಗಳನ್ನು ನುಗ್ಗಿಸುವ ಪ್ರಕ್ರಿಯೆ ಆರಂಭವಾಗಿತ್ತು. ಆದರೆ, ಲಡಾಖ್‌ನಲ್ಲಿ ಗಡಿ ಬಿಕ್ಕಟ್ಟು ಉಲ್ಬಣಗೊಂಡು ಗಾಲ್ವನ್ ಕಣಿವೆಯಲ್ಲಿ ಸಂಘರ್ಷ ನಡೆದ ಬಳಿಕ ಕುತಂತ್ರಾಂಶ ನುಗ್ಗಿಸುವಿಕೆ ಇನ್ನಷ್ಟು ವೇಗ ಪಡೆಯಿತು ಎಂದು ರೆಕಾರ್ಡೆಡ್ ಫ್ಯೂಚರ್ ಹೇಳಿದೆ.

ಭಾರತ ಸರ್ಕಾರ ಪ್ರಾಯೋಜಿತ ಸೈಡ್‌ವೈಂಡರ್ ಎಂಬ ಗುಂಪು ಚೀನಾದ ಸೇನೆ ಮತ್ತು ಸರ್ಕಾರಿ ಸಂಸ್ಥೆಗಳ ಕಂಪ್ಯೂಟರ್ ಜಾಲದಲ್ಲಿ ಚಟುವಟಿಕೆ ನಡೆಸಿತ್ತು ಎಂದೂ ರೆಕಾರ್ಡೆಡ್ ಫ್ಯೂಚರ್ ಆರೋಪ ಮಾಡಿದೆ.

ಭಾರತ–ಚೀನಾ ನಡುವೆ ಪೂರ್ವ ಲಡಾಖ್‌ನಲ್ಲಿ ಸುಮಾರು ಎಂಟು ತಿಂಗಳು ಸೇನಾ ಮುಖಾಮುಖಿ ನಡೆದಿತ್ತು. ಪ್ಯಾಂಗಾಂಗ್ ಸರೋವರದ ಉತ್ತರ ಮತ್ತು ದಕ್ಷಿಣ ದಂಡೆಯಲ್ಲಿ ಬೀಡು ಬಿಟ್ಟಿದ್ದ ಸೈನಿಕರು ಮತ್ತು ಯುದ್ಧೋಪಕರಣಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ವಿಚಾರದಲ್ಲಿ ಎರಡೂ ದೇಶಗಳು ಕಳೆದ ತಿಂಗಳು ಸಹಮತಕ್ಕೆ ಬಂದಿವೆ. ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆಯೂ ಈಗ ಪೂರ್ಣಗೊಂಡಿದೆ.

ನಿಧನ ವಾರ್ತೆ

ಸ್ವಾತಂತ್ರ್ಯ ಹೋರಾಟಗಾರ ಶಂಕ್ರೆಪ್ಪ ಸಾಹು ಹುಗ್ಗಿ



ಜೇವರ್ಗಿ (ಕಲಬುರ್ಗಿ ಜಿಲ್ಲೆ): ಸ್ವಾತಂತ್ರ್ಯ ಹೋರಾಟ ಮತ್ತು ಹೈದರಾಬಾದ್-ಕರ್ನಾಟಕ ವಿಮೋಚನಾ ಹೋರಾಟದಲ್ಲಿ ಪಾಲ್ಗೊಂಡಿದ್ದ ಶಂಕ್ರೆಪ್ಪ ರಾಮಶೆಟ್ಟಪ್ಪ ಸಾಹು ಹುಗ್ಗಿ (92) ಸೋಮವಾರ ನಿಧನರಾದರು.

ಅವರಿಗೆ ಐವರು ಪುತ್ರಿಯರು ಮತ್ತು ಪುತ್ರ ಇದ್ದಾರೆ. ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ ನರಿಬೋಳ ಇವರ ಮೊಮ್ಮಗ.

ಅಂತ್ಯಕ್ರಿಯೆಯು ಸಂಜೆ ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಿತು. ಪಟ್ಟಣದ ವರ್ತಕರು ವ್ಯಾಪಾರ ಬಂದ್ ಮಾಡಿ ಗೌರವ ಸಲ್ಲಿಸಿದರು.

ಸಂಕ್ಷಿಪ್ತ ಸುದ್ದಿ

‘ಮುತ್ತಿನರಾಶಿ ಮೂರು ಪಾಲು ಆತಲೇ ಪರಾಕ್’

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ‘ಮುತ್ತಿನರಾಶಿ ಮೂರು ಪಾಲು ಆತಲೇ ಪರಾಕ್’. ಇದು ತಾಲ್ಲೂಕಿನ ಐತಿಹಾಸಿಕ ಪ್ರಸಿದ್ಧ ಧಾರ್ಮಿಕ ಸುಕ್ಷೇತ್ರ ಮೈಲಾರದಲ್ಲಿ ಸೋಮವಾರ ಮೊಳಗಿದ ಮೈಲಾರಲಿಂಗೇಶ್ವರ ಸ್ವಾಮಿಯ ಕಾರಣಿಕ ನುಡಿ.

‘ಪ್ರಸಕ್ತ ವರ್ಷದ ಕಾರಣಿಕ ನುಡಿಯಲ್ಲಿ ಶುಭ ಫಲ ಕಾಣಿಸುತ್ತಿಲ್ಲ’ ಎಂದು ಭಕ್ತರು ಅರ್ಥೈಸುತ್ತಿದ್ದರು. ರಾಜಕೀಯ, ಕೃಷಿ, ವ್ಯವಹಾರಿಕ ಕ್ಷೇತ್ರದಲ್ಲಿ ಏರುಪೇರಾಗುವ ಸೂಚನೆ ಕಾಣಿಸುತ್ತದೆ ಎಂದು ವಿಶ್ಲೇಷಿಸುತ್ತಿದ್ದರು.

ಅಪಾರ ಭಕ್ತರ ಜಯಘೋಷ, ಹರ್ಷೋದ್ಗಾರದ ನಡುವೆ ಪ್ರಸಕ್ತ ಸಾಲಿನ ಕಾರಣಿಕ ನುಡಿ ಅನುರಣಿಸಿತು.

‘ಪ್ರತಿಮೆ, ಮಂದಿರಗಳಿಂದ ಹೊಟ್ಟೆ ತುಂಬಲ್ಲ’

ಹಾವೇರಿ: ‘ಸರ್ದಾರ್ ವಲ್ಲಭಬಾಯ್ ಪಟೇಲ್ ಪ್ರತಿಮೆ, ರಾಮಮಂದಿರ, ಬುಲೆಟ್ ಟ್ರೈನ್‌ಗಳಿಂದ ಜನರ ಹೊಟ್ಟೆ ತುಂಬದು. ಭಾವನಾತ್ಮಕ ವಿಚಾರಗಳನ್ನು ಹೇಳಿ ಜ್ವಲಂತ ಸಮಸ್ಯೆಗಳನ್ನು ಮರೆಮಾಚುವ ಹುನ್ನಾರವನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮಾಡುತ್ತಿದೆ’ ಎಂದು ಕೇಂದ್ರದ ಮಾಜಿ ಸಚಿವ, ರೈತ ಮುಖಂಡ ಬಾಬಾಗೌಡ ಪಾಟೀಲ ಟೀಕಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ‘ಯುವಜನರು ನಿರುದ್ಯೋಗ ಸಮಸ್ಯೆ ಎದುರಿಸುತ್ತಿದ್ದಾರೆ. ಸರ್ಕಾರಿ ಸಂಸ್ಥೆಗಳು ಬಂಡವಾಳಶಾಹಿಗಳ ಪಾಲಾಗುತ್ತಿವೆ. ಇಂಧನ ದರ ಏರಿಕೆಯಿಂದ ಅಗತ್ಯ ವಸ್ತುಗಳ ಬೆಲೆ ತುಟ್ಟಿಯಾಗುತ್ತಿದೆ. ಬಡವರು ಸಂಕಷ್ಟಕ್ಕೆ ಸಿಲುಕಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಶ್ರವಣ ಸಮಸ್ಯೆ: ಫೋನ್ ಇನ್ ಕಾರ್ಯಕ್ರಮ ನಾಳೆ

ಮೈಸೂರು: ವಿಶ್ವ ಶ್ರವಣ ದಿನದ ಅಂಗವಾಗಿ, ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವತಿಯಿಂದ ಮಾರ್ಚ್ 3ರಂದು ನೇರ ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಶ್ರವಣ ದೋಷ, ಕೇಳಿಸುವಿಕೆಯಲ್ಲಿ ತೊಂದರೆ, ಕಿವಿ ಸೋರುವಿಕೆ, ಕಿವಿಯಲ್ಲಿ ಮೊರೆತದಂಥ ತೊಂದರೆಗಳಿದ್ದರೆ, ಸಾರ್ವಜನಿಕರು ಕರೆ ಮಾಡಿ ಪರಿಹಾರ ಪಡೆದುಕೊಳ್ಳಬಹುದು.

ಇಎನ್‌ಟಿ ತಜ್ಞೆ ಡಾ. ಜಿ.ರಾಜೇಶ್ವರಿ, ಶ್ರವಣ ವಿಜ್ಞಾನ ತಜ್ಞ ಪ್ರೊ. ಯು. ಅಜಿತ್‌ಕುಮಾರ್ ಹಾಗೂ ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳಿಗಾಗಿನ ಟೆಲಿ ಕೇಂದ್ರದ (ಟಿಸಿಪಿಡಿ) ಮುಖ್ಯಸ್ಥರಾದ ಡಾ.ಜಯಶ್ರೀ ಸಿ. ಶಾನಬಾಳ್ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ. ಮಾರ್ಚ್ 3ರಂದು, ಮಧ್ಯಾಹ್ನ 2ಗಂಟೆಯಿಂದ 3 ರವರೆಗೆ ಕರೆ ಮಾಡಬಹುದು.

ದೂರವಾಣಿ ಸಂಖ್ಯೆ 0821-2502530

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in



ಸುಭಾಷಿತ

ಈ ಮೂರನ್ನು ಹೆಚ್ಚು ಕಾಲ ಅಡಗಿಸಿ ಇಡಲಾಗದು.
ಅವುಗಳೆಂದರೆ: ಸೂರ್ಯ, ಚಂದ್ರ ಮತ್ತು ಸತ್ಯ.
–ಗೌತಮ ಬುದ್ಧ

ಕೊಳಚೆ ನೀರು ಶುದ್ಧೀಕರಿಸದಿದ್ದರೆ ಜಲಮೂಲಗಳಿಗೆ ಕಾದಿದೆ ಅಪಾಯ

ಮಾನವನ ಬದುಕಿನ ಅಗತ್ಯಗಳಲ್ಲಿ ಜೀವಜಲಕ್ಕೆ ಅಗ್ರಸ್ಥಾನ. ಭೂಮಿಯಲ್ಲಿ ಲಭ್ಯವಿರುವ ನೀರಿನಲ್ಲಿ ಶೇ 3ರಷ್ಟು ಮಾತ್ರ ಕುಡಿಯಲು ಯೋಗ್ಯವಾಗಿದೆ. ಅದರಲ್ಲಿ ಮೂರನೇ ಒಂದರಷ್ಟು ಪ್ರಮಾಣ ಕೂಡ ಮಾನವನ ಬಳಕೆಗೆ ಪೂರ್ಣಪ್ರಮಾಣದಲ್ಲಿ ಸಿಗುವುದಿಲ್ಲ. ಅಷ್ಟೊಂದು ಅಮೂಲ್ಯವಾದ ನೀರನ್ನು ಜತನವಾಗಿ ಬಳಸುವಲ್ಲಿ ನಮ್ಮ ರಾಜ್ಯ ಹೇಗೆ ಅನಾದರ ತೋರಿದೆ ಎಂಬುದನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ರಚಿಸಿದ್ದ 'ಕೇಂದ್ರ ಮೇಲ್ವಿಚಾರಣಾ ಸಮಿತಿ'ಯ ವರದಿಯಲ್ಲಿ ಎತ್ತಿ ತೋರಲಾಗಿದೆ. ನದಿಗಳ ಮಾಲಿನ್ಯದ ಕುರಿತು ಅಧ್ಯಯನ ನಡೆಸಿ ಪರಿಹಾರ ಸೂಚಿಸಲು ಈ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯ ವರದಿಯ ಪ್ರಕಾರ, ರಾಜ್ಯದಲ್ಲಿ ನಿತ್ಯ 335.65 ಕೋಟಿ ಲೀಟರ್‌ನಷ್ಟು ಕೊಳಚೆ ನೀರು ಉತ್ಪಾದನೆಯಾಗುತ್ತಿದೆ. ಆದರೆ, ನಿತ್ಯ 224.2 ಕೋಟಿ ಲೀಟರ್ ಕೊಳಚೆ ನೀರನ್ನು ಮಾತ್ರ ಸಂಸ್ಕರಿಸುವ ಸಾಮರ್ಥ್ಯವನ್ನು ರಾಜ್ಯ ಹೊಂದಿದೆ. ಅದರಲ್ಲೂ ಪ್ರತಿದಿನ ಕೇವಲ 151.35 ಕೋಟಿ ಲೀಟರ್‌ಗಳಷ್ಟು ನೀರು ಸಂಸ್ಕರಣೆಯಾಗುತ್ತಿದೆ. ಒಟ್ಟಾರೆ ಶೇ 45ರಷ್ಟು ಕೊಳಚೆ ನೀರನ್ನು ಮಾತ್ರ ಸಂಸ್ಕರಣೆ ಮಾಡುತ್ತಿರುವುದು ನಿಜಕ್ಕೂ ಆಘಾತಕಾರಿ. ಮಿಕ್ಕ ತ್ಯಾಜ್ಯ ನೀರು ಸಂಸ್ಕರಣೆಯಾಗದೆಯೇ ನೇರವಾಗಿ ಜಲಮೂಲಗಳನ್ನು ಸೇರುತ್ತಿದೆ. ರಾಜ್ಯದ 17 ನದಿಗಳ ನೀರು ಕಲುಷಿತಗೊಳ್ಳಲು ಇದೇ ಮುಖ್ಯಕಾರಣ. ಕೈಗಾರಿಕಾ ಘಟಕಗಳು ತ್ಯಾಜ್ಯ ನೀರಿನ ಸಂಸ್ಕರಣೆಗೆ ವ್ಯವಸ್ಥೆ ಮಾಡಿಕೊಳ್ಳುವುದು ಕಡ್ಡಾಯವಾಗಿದ್ದರೂ ಅಲ್ಲಿನ ಘಟಕಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಜಲಮಂಡಳಿಯ ಪ್ರಕಾರ, ಬೆಂಗಳೂರು ನಗರವೊಂದರಲ್ಲೇ ನಿತ್ಯ 144 ಕೋಟಿ ಲೀಟರ್‌ಗಳಷ್ಟು ತ್ಯಾಜ್ಯ ನೀರು ಉತ್ಪಾದನೆಯಾಗುತ್ತದೆ. ನಿತ್ಯ 120 ಕೋಟಿ ಲೀಟರ್ ಕೊಳಚೆ ನೀರು ಶುದ್ಧೀಕರಿಸುವ ಸೌಲಭ್ಯಗಳು ಸಹ ಇಲ್ಲಿವೆ. ಆದರೆ, 'ಕೇಂದ್ರ ಮೇಲ್ವಿಚಾರಣಾ ಸಮಿತಿ' ವರದಿ ಪ್ರಕಾರ, ಬೆಂಗಳೂರಿನಲ್ಲಿ ನಿತ್ಯ 42.75 ಕೋಟಿ ಲೀಟರ್ ನೀರನ್ನು ಮಾತ್ರ ಸಂಸ್ಕರಿಸಿ ಮರುಬಳಕೆ ಮಾಡಲಾಗುತ್ತಿದೆ.



ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಬಳಸುವ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸದಿದ್ದರೆ, ಕುಡಿಯುವ ನೀರಿನ ಮೂಲಗಳನ್ನೆಲ್ಲ ಶಾಶ್ವತವಾಗಿ ಕಳೆದುಕೊಂಡು ಪರಿತಪಿಸಬೇಕಾದೀತು

ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲಕಾಯಗಳ ನೀರನ್ನು ನಿಯಮಿತವಾಗಿ ಪರೀಕ್ಷೆಗೆ ಒಳಪಡಿಸುತ್ತದೆ. ಅದರ ಫಲಿತಾಂಶದ ಆಧಾರದಲ್ಲಿ ನೀರನ್ನು ಸಂಸ್ಕರಣೆಗೊಳಪಡಿಸದೆಯೇ ಕುಡಿಯಬಹುದಾದ, ಸ್ನಾನಕ್ಕೆ ಬಳಸಬಹುದಾದ, ಸಂಸ್ಕರಣೆಗೊಳಪಡಿಸಿ ಕುಡಿಯಬಹುದಾದ, ಮೀನುಗಾರಿಕೆಗೆ ಬಳಸಬಹುದಾದ ಹಾಗೂ ನೀರಾವರಿ, ಕೈಗಾರಿಕೆಗಳಲ್ಲಿ ಕೂಲಿಂಗ್‌ಗೆ, ಕಸ ವಿಲೇವಾರಿಗೆ ಮಾತ್ರ ಬಳಸಬಹುದಾದ ನೀರು ಎಂದು ವರ್ಗೀಕರಿಸುತ್ತದೆ. ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರಿನ ಕೆರೆಗಳ ಗುಣಮಟ್ಟದ ಬಗ್ಗೆ 2019ರ ಏಪ್ರಿಲ್‌ನಿಂದ 2020ರ ಜುಲೈವರೆಗೆ ನಡೆಸಿರುವ ಪರೀಕ್ಷೆಗಳ ಫಲಿತಾಂಶಗಳನ್ನು ವಿಶ್ಲೇಷಣೆಗೊಳಪಡಿಸಿದಾಗ 15 ಕೆರೆಗಳ ಫಲಿತಾಂಶಗಳು ಚಿಂತಾಜನಕವಾಗಿದ್ದವು. ಈ ಕೆರೆಗಳ ನೀರು ಕುಡಿಯಲು ಇರಲಿ, ಅನ್ಯ ಉದ್ದೇಶಗಳಿಗೆ ಬಳಸುವುದಕ್ಕೂ ಯೋಗ್ಯವಾಗಿರಲಿಲ್ಲ. ಈ ಕೆರೆಗಳೆಲ್ಲವೂ ಬಿಬಿಎಂಪಿ ಇತ್ತೀಚೆಗೆ ಅಭಿವೃದ್ಧಿಪಡಿಸಿದವು. ತ್ಯಾಜ್ಯ ನೀರು ಶುದ್ಧೀಕರಿಸುವ ನಮ್ಮ ವ್ಯವಸ್ಥೆ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದಕ್ಕೆ ಈ ಅಂಶಗಳು ಕನ್ನಡಿ ಹಿಡಿಯುತ್ತವೆ. ಬೆಳ್ಳಂದೂರು ಕೆರೆಯ ಜಲಾನಯನ ಪ್ರದೇಶ ವ್ಯಾಪ್ತಿಯ 488 ಕೈಗಾರಿಕೆಗಳಲ್ಲಿ 45 ಕೈಗಾರಿಕೆಗಳು ಮಾತ್ರ ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಹೊಂದಿರುವುದು ಈ ಹಿಂದೆ ನಡೆಸಿದ ಸಮೀಕ್ಷೆಯಿಂದ ಬೆಳಕಿಗೆ ಬಂದಿತ್ತು. ಅವುಗಳಲ್ಲಿ ಆರು ಕೈಗಾರಿಕೆಗಳು ಮಾತ್ರ ಶುದ್ಧೀಕರಿಸಿದ ನೀರನ್ನು ಮರುಬಳಕೆ ಮಾಡಿಕೊಳ್ಳುತ್ತಿದ್ದವು. ಎಸ್‌ಟಿಪಿ ಅಳವಡಿಸಿದರೆ ಸಾಲದು, ಅವು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆಯೂ ನಿಗಾ ಇಡುವ ವ್ಯವಸ್ಥೆ ಇರಬೇಕು. ಅಂತಹ ವ್ಯವಸ್ಥೆ ಇಲ್ಲದಿರುವ ಕಾರಣಕ್ಕಾಗಿಯೇ ಬೆಂಗಳೂರಿನ ಬಹುತೇಕ ಕೆರೆಗಳು ಕೊಚ್ಚೆಗುಂಡಿಗಳಾಗಿವೆ. ಆಂಧ್ರಪ್ರದೇಶ ಹಾಗೂ ದೆಹಲಿ ರಾಜ್ಯಗಳು ತಮ್ಮಲ್ಲಿ ಉತ್ಪಾದನೆಯಾಗುವ ಕಲುಷಿತ ನೀರಿನಲ್ಲಿ ಶೇ 90ರಷ್ಟನ್ನು ಸಂಸ್ಕರಣೆ ಮಾಡಲು ಸಾಧ್ಯವಾಗುವುದಾದರೆ ನಮ್ಮಲ್ಲೇಕೆ ಆಗದು ಎಂಬುದು ಯಕ್ಷಪ್ರಶ್ನೆ. ಎಸ್‌ಟಿಪಿಗಳು ಗರಿಷ್ಠ ಸಾಮರ್ಥ್ಯಕ್ಕೆ ತಕ್ಕಂತೆ ಏಕೆ ಬಳಕೆ ಆಗುತ್ತಿಲ್ಲ ಅಥವಾ ಅವು ಏಕೆ ನಿಷ್ಕ್ರಿಯವಾಗಿವೆ ಎಂಬುದನ್ನು ಮೂರು ತಿಂಗಳಲ್ಲಿ ತಿಳಿದುಕೊಳ್ಳಬೇಕು ಎಂದೂ ಸಮಿತಿ ಶಿಫಾರಸು ಮಾಡಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ತಪ್ಪನ್ನು ತಿದ್ದಿಕೊಳ್ಳಬೇಕು. ಇಲ್ಲದಿದ್ದರೆ ಕುಡಿಯುವ ನೀರಿನ ಮೂಲಗಳನ್ನೆಲ್ಲ ಶಾಶ್ವತವಾಗಿ ಕಳೆದುಕೊಂಡು ಪರಿತಪಿಸಬೇಕಾದೀತು.

ದಿನದ ಟ್ವೀಟ್

ಅನಗತ್ಯ ಚರ್ಚೆ



ಮದುವೆಯು ಲೈಂಗಿಕ ಸಂಪರ್ಕಕ್ಕೆ ನೀಡುವ ಸಂಪೂರ್ಣ ಒಪ್ಪಿಗೆ ಅಲ್ಲ. ಗಂಡನು ತನಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುವ ಸೊತ್ತಾಗಿ ಹೆಂಡತಿಯು ಪರಿವರ್ತನೆ ಆಗುವುದಿಲ್ಲ. ಇದು ಈಗಲೂ ಚರ್ಚೆಯ ವಿಚಾರವಾಗಿ ಉಳಿದಿರುವುದಾದರೂ ಹೇಗೆ?

(ವೈವಾಹಿಕ ಅತ್ಯಾಚಾರಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ ತೀರ್ಪಿಗೆ ಪ್ರತಿಕ್ರಿಯೆ)

ರಾಧಿಕಾ ರಾಯ್, ವಕೀಲೆ

25 ವರ್ಷಗಳ ಹಿಂದೆ

ಶನಿವಾರ, 2-3-1996

• ಹವಾಲ ತನಿಖೆ: ಸಿಬಿಐಗೆ ಪರಮಾಧಿಕಾರ

ನವದೆಹಲಿ, ಮಾರ್ಚ್ 1 (ಯುಎನ್‌ಐ, ಪಿಟಿಐ)– ಅನಿರೀಕ್ಷಿತ ಬೆಳವಣಿಗೆಯ ನಡುವೆ ಹವಾಲ ಹಗರಣದ ತನಿಖೆಗೆ ಸಂಬಂಧಿಸಿದಂತೆ ಸಿಬಿಐಗೆ ಸುಪ್ರೀಂ ಕೋರ್ಟ್ ಇಂದು ಪರಮಾಧಿಕಾರ ನೀಡಿದೆ. ತನಿಖೆ ಹಂತದಲ್ಲಿ ನ್ಯಾಯಾಲಯಕ್ಕಲ್ಲದೆ ಇನ್ಯಾರಿಗೂ ವರದಿ ನೀಡಬಾರದು ಮತ್ತು ಸಲಹೆ ಪಡೆಯಬಾರದು ಎಂದು ಸಿಬಿಐಗೆ ಕೋರ್ಟ್ ಸ್ಪಷ್ಟವಾಗಿ ಹೇಳಿದೆ.

ಸುಪ್ರೀಂ ಕೋರ್ಟಿನ ಈ ಆದೇಶದಿಂದಾಗಿ ಸಿಬಿಐ, 65 ಕೋಟಿ ರೂಪಾಯಿ ಜೈನ್ ಹವಾಲ ಹಗರಣಕ್ಕೆ ಸಂಬಂಧಿಸಿದಂತೆ ಪ್ರಧಾನಿ ಪಿ.ವಿ.ನರಸಿಂಹ ರಾವ್ ಮತ್ತು ಎಲ್ಲ ಆಡಳಿತಾತ್ಮಕ ನಿಯಂತ್ರಣದಿಂದ ಸಂಪೂರ್ಣವಾಗಿ ಹೊರ ಬಂದಂತಾಗಿದೆ. 'ನಿಮ್ಮ ಆಡಳಿತ ನಿಯಂತ್ರಣ ಹೊಂದಿರುವವರಿಂದಲೂ ನೀವು ಸಲಹೆ ಪಡೆಯಬಾರದು ಮತ್ತು ಅವರಿಗೆ ವರದಿ ನೀಡಬಾರದು' ಎಂದು ನ್ಯಾಯಮೂರ್ತಿಗಳಾದ ಜೆ.ಎಸ್.ವರ್ಮಾ, ಎಸ್.ಪಿ.ಬರೂಚಾ ಮತ್ತು ಎಸ್.ಸಿ.ಸೇನ್ ಅವರನ್ನೊಳಗೊಂಡ ನ್ಯಾಯಪೀಠ ಹೇಳಿದೆ.

• ಏಳನೇ ತರಗತಿ ಪಬ್ಲಿಕ್ ಪರೀಕ್ಷೆ ಈ ವರ್ಷ ಇಲ್ಲ

ಬೆಂಗಳೂರು, ಮಾರ್ಚ್ 1– ರಾಜ್ಯದಲ್ಲಿ 7ನೇ ತರಗತಿಗೆ ಪಬ್ಲಿಕ್ ಪರೀಕ್ಷೆ ನಡೆಸುವುದನ್ನು ಮುಂದಿನ ಶಿಕ್ಷಣ ವರ್ಷದಿಂದ ಜಾರಿಗೆ ತರಬೇಕೆಂದು ಸೂಚಿಸಿದ ಹೈಕೋರ್ಟ್, ಈ ವರ್ಷದಿಂದಲೇ ಜಾರಿಗೆ ಕೊಡುವುದನ್ನು ರದ್ದುಗೊಳಿಸಿತು.

ಏಳನೇ ತರಗತಿಗೆ ಪಬ್ಲಿಕ್ ಪರೀಕ್ಷೆ ನಡೆಸುವ ಸರ್ಕಾರದ ತೀರ್ಮಾನವನ್ನು ಎತ್ತಿ ಹಿಡಿಯಿತಾದರೂ ಅನೇಕ ಸಂದರ್ಭಗಳಲ್ಲಿ ಉತ್ತಮ ತೀರ್ಮಾನಗಳನ್ನು ಜಾರಿಗೆ ತಂದ ಸಮಯದ ದೃಷ್ಟಿಯ ಆಧಾರದ ಮೇಲೆ ನ್ಯಾಯಾಲಯ ರದ್ದುಗೊಳಿಸಬೇಕಾಗುತ್ತದೆ. ಪಬ್ಲಿಕ್ ಪರೀಕ್ಷೆಯು ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳುವ ದೃಷ್ಟಿಯಿಂದ ಒಳ್ಳೆಯದಾದರೂ ಜಾರಿಗೆ ತಂದ ಸಮಯ ಸರಿಯಲ್ಲ ಎಂದು ಅಭಿಪ್ರಾಯಪಟ್ಟಿತು.

50 ವರ್ಷಗಳ ಹಿಂದೆ

ಮಂಗಳವಾರ, 2-3-1971

• ಸರೋಜಿನಿ ಮಹಿಷಿ ಅವರ ಸೋಲಿಗಾಗಿ ವಿಶ್ವಪ್ರಯತ್ನ

ಧಾರವಾಡ, ಮಾರ್ಚ್ 1– ಗೆಲ್ಲಲೇಬೇಕೆಂಬ ವಿಶ್ವಪ್ರಯತ್ನ– ಸೋಲಿಸಲೇಬೇಕೆಂಬ ಜಿದ್ದಿನ ನಡುವೆ ಹೋರಾಟ ನಡೆಯುತ್ತಿರುವ ಧಾರವಾಡ ಉತ್ತರ ಕ್ಷೇತ್ರದ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಪ್ರಮಾಣದಲ್ಲಿನ ಮತದಾನವು ಆಡಳಿತ ಕಾಂಗ್ರೆಸ್ ಅಭ್ಯರ್ಥಿಯ ಜಯಕ್ಕೆ ಕಾರಣವಾಗುವ ಸಂಭವವಿದೆ.

ಕೇಂದ್ರ ಸರ್ಕಾರದ ಉಪಸಚಿವೆ ಡಾ. ಸರೋಜಿನಿ ಮಹಿಷಿ ಹಾಗೂ ಸಂಸ್ಥಾ ಕಾಂಗ್ರೆಸ್ಸಿನ ಶ್ರೀ ಆರ್.ಜಿ.ವಾಲಿ ಅವರುಗಳ ನಡುವೆ ಸ್ಪರ್ಧೆಯಿರುವ ಕ್ಷೇತ್ರದಲ್ಲಿ ಆಡಳಿತ ಕಾಂಗ್ರೆಸ್ಸಿಗರು ಈ ನಿರೀಕ್ಷೆಯಿಂದ ಪ್ರಯತ್ನ ಮಾಡುತ್ತಿದ್ದಾರೆ.

• ಏಳು ರಾಜ್ಯಗಳಲ್ಲಿ ಶಾಂತಿಯುತ ಮತದಾನ

ನವದೆಹಲಿ, ಮಾರ್ಚ್ 1– ಲೋಕಸಭೆಯ 101 ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ಮತ್ತು ಇತರೆ 79 ಕ್ಷೇತ್ರಗಳ ಕೆಲವೆಡೆ ಮೊದಲ ಹಂತದ ಚುನಾವಣೆಯಲ್ಲಿ ಇಂದು ಮತದಾನ ಮುಕ್ತಾಯವಾಯಿತು.

ಬಿಹಾರದಲ್ಲಿ ಕೆಲವೆಡೆ ಘರ್ಷಣೆ, ಮತಪೆಟ್ಟಿಗೆ ಕಳವು, ಎರಡು ಸಾವು; ಭೋಪಾಲ್‌ನಲ್ಲಿ ನಡೆದ ಘರ್ಷಣೆಯಲ್ಲಿ ನಾಲ್ವರಿಗೆ ಗಾಯ ಮುಂತಾದ ಸಣ್ಣಪುಟ್ಟ ಘಟನೆಗಳ ವಿನಾ ಉಳಿದೆಡೆ ಸಾಮಾನ್ಯವಾಗಿ ಶಾಂತಿಯುತವಾಗಿಯೇ ನಡೆಯಿತು.

ಹಿಂದುಳಿದ ದೇಶಗಳ ಕೋಟ್ಯಂತರ ಪ್ರಜೆಗಳಿಗೆ ಕೋವಿಡ್ ಲಸಿಕೆಯು ದೂರದ ಕನಸು

ಲಸಿಕೆ: ಹಕ್ಕು, ನೈತಿಕತೆಯ ಸುತ್ತ...



ವಿಶ್ಲೇಷಣೆ

ಡಾ. ಎಚ್.ಆರ್. ಕೃಷ್ಣಮೂರ್ತಿ

ಪ್ರಪಂಚದ ಎಲ್ಲ ದೇಶಗಳು ತುದಿಗಾಲಿನಲ್ಲಿ ನಿಂತು ನಿರೀಕ್ಷಿಸುತ್ತಿದ್ದ ಕೋವಿಡ್ ಲಸಿಕೆ ಈಗ ಲಭ್ಯವಾಗಿದೆ. ಜಾಗತಿಕ ಮಟ್ಟದಲ್ಲಿ ಎಂಟರಿಂದ ಹತ್ತು ಲಸಿಕೆಗಳು, ಎಲ್ಲ ಹಂತಗಳ ಪರೀಕ್ಷೆಯನ್ನು ಯಶಸ್ವಿಯಾಗಿ ಮುಗಿಸಿ, ಉತ್ಪಾದನೆಯಾಗಿ, ಅಭಿಯಾನದ ಮೂಲಕ ಜನರನ್ನು ಮುಟ್ಟುತ್ತಿವೆ. ಆದರೆ ಉತ್ಪಾದನೆ, ಮಾರಾಟ, ವಿತರಣೆಗಳಲ್ಲಿರುವ ಪಕ್ಷಪಾತ, ಭೇದಭಾವ, ಅಗತ್ಯ ಮೀರಿದ ದಾಸ್ತಾನು, ರಾಜಕೀಯ ಒತ್ತಡ ಮುಂತಾದವುಗಳಿಂದ ಪ್ರಪಂಚದ ಬಡರಾಷ್ಟ್ರಗಳಿಗೆ ಇನ್ನೂ ಕೆಲವು ವರ್ಷಗಳ ಕಾಲ ಕೋವಿಡ್ ಲಸಿಕೆ ಗಗನಕುಸುಮವಾಗುವಂತಹ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ.


ಕೋವಿಡ್ ಲಸಿಕೆ ಉತ್ಪಾದನೆಯ ಹಂತಕ್ಕೆ ಬರುವ ಮುಂಚೆಯೇ ಪ್ರಪಂಚದ ಪ್ರಮುಖ ಔಷಧ ಉತ್ಪಾದನಾ ಕಂಪನಿಗಳು ಮತ್ತು ಶ್ರೀಮಂತ ದೇಶಗಳ ನಡುವೆ ಲಸಿಕೆ ಪೂರೈಕೆಗೆ ಸಂಬಂಧಿಸಿದ 44 ಒಪ್ಪಂದಗಳು ಏರ್ಪಟ್ಟವು. ಎಂಟು ಲಸಿಕೆಗಳಿಗೆ ಸಂಬಂಧಿಸಿದಂತೆ ಈ ರೀತಿ ಆದ ಒಪ್ಪಂದಗಳನ್ನು ವಿಶ್ಲೇಷಿಸಿರುವ ಪೀಪಲ್ಸ್ ವ್ಯಾಕ್ಸಿನ್ ಮತ್ತು ಆಕ್ಸ್‌ಫ್ಯಾಮ್ ಇಂಟರ್‌ನ್ಯಾಷನಲ್ ಸಂಸ್ಥೆಗಳು ಈ ಒಪ್ಪಂದಗಳ ಜಾಗತಿಕ ಪರಿಣಾಮಗಳ ಮೇಲೆ ಬೆಳಕು ಚೆಲ್ಲಿವೆ. ಉದಾಹರಣೆಗೆ, ಪ್ರಪಂಚದ ಅತಿ ದೊಡ್ಡ ಔಷಧ ಉತ್ಪಾದನಾ ಕಂಪನಿಯಾದ ಫೈಜರ್, 2021ರ ಅಂತ್ಯದೊಳಗಾಗಿ 135 ಕೋಟಿ ಡೋಸ್‌ಗಳಷ್ಟು ಕೋವಿಡ್ ಲಸಿಕೆಯನ್ನು ಉತ್ಪಾದಿಸಲಿದೆ. ಇದರಲ್ಲಿ ಶೇ 82ರಷ್ಟು ಭಾಗವನ್ನು ಅಮೆರಿಕ, ಐರೋಪ್ಯ ಒಕ್ಕೂಟ, ಇಂಗ್ಲೆಂಡ್ ಹಾಗೂ ಉಳಿದ ಭಾಗವನ್ನು ಜಪಾನ್ ಮತ್ತು ಕೆನಡಾ ಮುಂಗಡವಾಗಿಯೇ ಕಾದಿರಿಸಿವೆ. ಮೊಡೆರ್ನಾ ಕಂಪನಿ ಉತ್ಪಾದಿಸುತ್ತಿರುವ ಒಟ್ಟು ಕೋವಿಡ್ ಲಸಿಕೆಯ ಶೇ 78ರಷ್ಟು ಭಾಗವನ್ನು ಶ್ರೀಮಂತ ರಾಷ್ಟ್ರಗಳಿಗೆ ಮೀಸಲಿಡಲಾಗಿದೆ.

ಒಟ್ಟಾರೆ 2021ರ ಅಂತ್ಯದ ವೇಳೆಗೆ, ಎಂಟು ಲಸಿಕೆಗಳ ಒಟ್ಟು 590 ಕೋಟಿ ಡೋಸ್‌ಗಳಲ್ಲಿ ಶೇ 54ರಷ್ಟು ಭಾಗ, ಅಂದರೆ ಸುಮಾರು 319 ಕೋಟಿ ಡೋಸ್‌ಗಳು, ಜಗತ್ತಿನ ಒಟ್ಟು ಜನಸಂಖ್ಯೆಯ ಶೇ 14ರಷ್ಟು ಭಾಗವನ್ನು ಹೊಂದಿರುವ ಶ್ರೀಮಂತ ದೇಶಗಳಲ್ಲಿ ದಾಸ್ತಾನಾಗಿರುತ್ತದೆ. ಇದರಿಂದ ಆ ದೇಶಗಳು ತಮ್ಮ ಎಲ್ಲ ಪ್ರಜೆಗಳಿಗೆ ಮೂರು ಬಾರಿ ಲಸಿಕೆ ನೀಡಬಹುದು! ಉಳಿದ ಸುಮಾರು 271 ಕೋಟಿ ಡೋಸ್‌ಗಳಿಗೆ ಪ್ರಪಂಚದ 172 ದೇಶಗಳು ಮುಗಿಬೀಳುತ್ತವೆ. ಈ ನೂಕಾಟದಲ್ಲಿ ಹಣ, ಪ್ರಭಾವವಿರುವ ದೇಶಗಳಿಗೆ ಅವುಗಳ ಅಗತ್ಯದ ಸ್ವಲ್ಪ ಭಾಗದಷ್ಟಾದರೂ ಲಸಿಕೆಗಳು ದೊರೆಯುತ್ತವೆ. ಉಳಿದ ದೇಶಗಳ ಗತಿ?

ಆಕ್ಸ್‌ಫ್ಯಾಮ್ ವರದಿಯಂತೆ, 2021ರ ಅಂತ್ಯದ ವೇಳೆಗೆ ಪ್ರಪಂಚದ 70 ಬಡದೇಶಗಳಲ್ಲಿ, 10 ಜನರಲ್ಲಿ ಒಬ್ಬರಿಗೆ ಮಾತ್ರ ಕೋವಿಡ್ ಲಸಿಕೆ ನೀಡುವುದು ಸಾಧ್ಯವಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಡೈರೆಕ್ಟರ್ ಜನರಲ್ ಡಾ. ಟೆಡ್ರೋಸ್ ಅಧನಾಮ್ ಗ್ಯಾಬ್ರಿಯೇಸಸ್ ಅವರ ಹೇಳಿಕೆಯಂತೆ, ಪ್ರಪಂಚದ ಅತಿ ಕಡಿಮೆ ವರಮಾನದ 27 ದೇಶಗಳಲ್ಲಿ ಒಂದಾದ ಗಿನೀಗೆ ಕೇವಲ 25 ಡೋಸ್‌ಗಳಷ್ಟು ಲಸಿಕೆ ದೊರೆಯಲಿದೆ. ಹೀಗಾಗಿ ಈ ದೇಶಗಳ ಕೋಟ್ಯಂತರ ಪ್ರಜೆಗಳು ಮುಂದಿನ ಐದಾರು ವರ್ಷಗಳ ಕಾಲ ಸುರಕ್ಷಿತ, ಪರಿಣಾಮಕಾರಿ ಲಸಿಕೆಯಿಂದ ವಂಚಿತರಾಗಲಿದ್ದಾರೆ. ಕೋವಿಡ್ ಲಸಿಕೆಯನ್ನು ಅತ್ಯಧಿಕ ಪ್ರಮಾಣದಲ್ಲಿ ಕೂಡಿಟ್ಟು, ತುರ್ತು ಅಗತ್ಯವಿರುವವರಿಗೆ ಅದು ಸಿಗದಂತೆ ಮಾಡುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂಬ ಕೂಗು ಎದ್ದಿದ್ದರೂ ಶ್ರೀಮಂತ ದೇಶಗಳು ಅದಕ್ಕೆ ಪ್ರತಿಕ್ರಿಯಿಸಿಲ್ಲ.

ಆಕ್ಸ್‌ಫ್ಯಾಮ್ ಸೂಚಿಸಿರುವ ಈ ಭವಿಷ್ಯದ ಪರಿಸ್ಥಿತಿಯಿಂದ ಪಾರಾಗಬೇಕಾದರೆ ಲಸಿಕೆಯ ಉತ್ಪಾದನೆಯನ್ನು ಅತ್ಯಂತ ತ್ವರಿತವಾಗಿ ಹಲವಾರು ಪಟ್ಟುಗಳಷ್ಟು ಹೆಚ್ಚಿಸಬೇಕು. ತಾತ್ವಿಕವಾಗಿ ಇದು ಸಾಧ್ಯವಾದರೂ ಅದಕ್ಕಿರುವ ಅಡ್ಡಿಯೆಂದರೆ, ಲಸಿಕೆಯನ್ನು ರೂಪಿಸಿರುವ ಔಷಧ ತಯಾರಿಕಾ ಕಂಪನಿಗಳು ಮತ್ತು ಸಂಶೋಧನಾ ಸಂಸ್ಥೆಗಳು ಪಡೆದುಕೊಂಡಿರುವ ಪೇಟೆಂಟ್‌ಗಳು. ಹೀಗೆ ಪೇಟೆಂಟ್ ಪಡೆದುಕೊಂಡಿರುವ ಕಂಪನಿಗಳಿಂದ ಲೈಸೆನ್ಸ್ ಪಡೆಯದೆ ಬೇರೆ ಯಾರೂ ಲಸಿಕೆಗಳನ್ನು ಉತ್ಪಾದಿಸುವಂತಿಲ್ಲ. ಕ್ಯೂಬಾ, ಇಂಡೊನೇಷ್ಯಾ, ಸೆನೆಗಲ್, ಥಾಯ್ಲೆಂಡ್ ಮುಂತಾದ ಸಣ್ಣ ದೇಶಗಳಲ್ಲಿ ಲಸಿಕೆಗಳನ್ನು ಉತ್ಪಾದಿಸುವ ಎಲ್ಲ ಆಧುನಿಕ ಸೌಲಭ್ಯಗಳಿದ್ದರೂ ಅಸ್ತಿತ್ವದಲ್ಲಿರುವ ಪೇಟೆಂಟ್ ನಿಯಮಗಳಿಂದ ಉತ್ಪಾದನೆ ಸಾಧ್ಯವಿಲ್ಲ.

ಕಳೆದ ವರ್ಷದ ಅ. 2ರಂದು, ಭಾರತ ಮತ್ತು ದಕ್ಷಿಣ ಆಫ್ರಿಕಾ, ವಿಶ್ವ ವ್ಯಾಪಾರ ಸಂಸ್ಥೆಯ 'ಟ್ರಿಪ್ಸ್' (ಟ್ರೇಡ್ ರಿಲೇಟೆಡ್ ಆ್ಯಸ್ಪೆಕ್ಟ್ಸ್ ಆಫ್ ಇಂಟೆಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್) ಮಂಡಳಿಯ ಮುಂದೆ ಪ್ರಸ್ತಾವವೊಂದನ್ನು ಮಂಡಿಸಿದವು. ಕೋವಿಡ್ ಲಸಿಕೆಯ ಉತ್ಪಾದನೆಯನ್ನು ತ್ವರಿತಗತಿಯಲ್ಲಿ ಹೆಚ್ಚಿಸಿ, ಪ್ರಪಂಚದ ಎಲ್ಲ ದೇಶಗಳಿಗೂ ದೊರೆಯುವಂತೆ ಮಾಡಲು, ಈ ಲಸಿಕೆಗೆ ಸಂಬಂಧಿಸಿದ ಬೌದ್ಧಿಕ ಆಸ್ತಿ ಹಕ್ಕು ನಿಯಮಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸುವಂತೆ ಈ ಪ್ರಸ್ತಾವದಲ್ಲಿ ಕೋರಲಾಗಿತ್ತು. ಆದರೆ ಈ ಪ್ರಸ್ತಾವ ಚರ್ಚೆಗೆ ಬಂದಾಗ ಅಮೆರಿಕ, ಇಂಗ್ಲೆಂಡ್, ಸ್ವಿಟ್ಜರ್ಲೆಂಡ್, ನಾರ್ವೆ, ಆಸ್ಟ್ರೇಲಿಯಾ, ಜಪಾನ್ ಮತ್ತು ಐರೋಪ್ಯ ಒಕ್ಕೂಟದ ದೇಶಗಳು ತೀವ್ರ ವಿರೋಧವನ್ನು ವ್ಯಕ್ತಪಡಿಸಿದವು. ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಬೃಹತ್ ಬಂಡವಾಳ ಹೂಡಿರುವ ಔಷಧ ತಯಾರಿಕಾ ಕಂಪನಿಗಳ ಆಸಕ್ತಿ, ಉತ್ಸಾಹಕ್ಕೆ ಈ ಕ್ರಮ ತೀವ್ರ ಹಿನ್ನಡೆಯನ್ನು ಉಂಟುಮಾಡುತ್ತದೆ.




ಕೋವಿಡ್ ವೈರಾಣುವಿನ ಸ್ವರೂಪ ಬದಲಾಗುತ್ತಿರುವ ಸಂದರ್ಭದಲ್ಲಿ, ಔಷಧ ತಯಾರಿಕಾ ಸಂಸ್ಥೆಗಳು ತುದಿಗಾಲಿನಲ್ಲಿ ನಿಂತು ಎಚ್ಚರದಿಂದಿರಬೇಕಾದ ಪರಿಸ್ಥಿತಿಯಲ್ಲಿ, ಪೇಟೆಂಟ್‌ಗಳನ್ನು ತಾತ್ಕಾಲಿಕವಾಗಿಯಾದರೂ ರದ್ದು ಮಾಡುವ ಕ್ರಮ ಸಮಸ್ಯೆಗಳನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಕೋವಿಡ್ ಲಸಿಕೆಯ ಉತ್ಪಾದನೆ ಅತ್ಯಂತ ಸಂಕೀರ್ಣವಾದ ಪ್ರಕ್ರಿಯೆಯಾದ್ದರಿಂದ ಪೇಟೆಂಟ್ ನಿಯಮಗಳನ್ನು ರದ್ದುಪಡಿಸಿದರೂ ಅದರಿಂದ ಉತ್ಪಾದನೆ ಹೆಚ್ಚುವುದಿಲ್ಲವೆಂಬುದು ಶ್ರೀಮಂತ ದೇಶಗಳ ನಿಲುವಾಗಿತ್ತು.

2021ರ ಅಂತ್ಯದ ವೇಳೆಗೆ ಶ್ರೀಮಂತ ರಾಷ್ಟ್ರಗಳಿಗೆ ಪೂರೈಕೆಯಾಗಿ ಉಳಿದ 271 ಕೋಟಿ ಡೋಸ್‌ಗಳಷ್ಟು ಲಸಿಕೆಯನ್ನು ಉಳಿದ ದೇಶಗಳಿಗೆ ನ್ಯಾಯಸಮ್ಮತವಾಗಿ, ಕೈಗೆಟುಕುವ ಬೆಲೆಯಲ್ಲಿ ವಿತರಿಸಲು ವಿಶ್ವ ಆರೋಗ್ಯ ಸಂಸ್ಥೆ, ಗ್ಲೋಬಲ್ ಅಲೈಯನ್ಸ್ ಫಾರ್ ವ್ಯಾಕ್ಸಿನೇಶನ್ ಆ್ಯಂಡ್ ಇಮ್ಯೂನೈಜೇಶನ್ ಮತ್ತು ಕೊಯಲಿಶನ್ ಫಾರ್ ಎಪಿಡೆಮಿಕ್ ಪ್ರಿಪರೇಶನ್ ಆ್ಯಂಡ್ ಇನ್ನೋವೇಶನ್ ಸಂಸ್ಥೆಗಳು ಕೋವ್ಯಾಕ್ಸ್ ಎಂಬ ಯೋಜನೆಯನ್ನು ಪ್ರಾರಂಭಿಸಿವೆ. ಈ ಯೋಜನೆಯಲ್ಲಿ ಭಾಗವಹಿಸುವ ದೇಶಗಳಿಂದ ಸಂಗ್ರಹಿಸಿದ ಹಣದಿಂದ ಲಸಿಕೆಗಳ ಉತ್ಪಾದನೆ ಮತ್ತು ಸಂಗ್ರಹಣೆಯನ್ನು ತ್ವರಿತಗೊಳಿಸಿ, ಆಯಾ ದೇಶಗಳ ಜನಸಂಖ್ಯೆಯ ಶೇ 20ರಷ್ಟು ಭಾಗಕ್ಕೆ ಸಾಕಾಗುವಷ್ಟು ಲಸಿಕೆಯನ್ನು ಸುಲಭದ ದರದಲ್ಲಿ ಒದಗಿಸಲಾಗುತ್ತದೆ. ಇದರಿಂದ ಎಲ್ಲ ದೇಶಗಳೂ ಕೋವಿಡ್ ಸಾಂಕ್ರಾಮಿಕದ ವಿಷಮಸ್ಥಿತಿಯ ಹಂತವನ್ನು ದಾಟಲು ನೆರವಾಗುತ್ತದೆ ಎನ್ನಲಾಗಿದೆ. ಇಂಗ್ಲೆಂಡ್, ಇಟಲಿ, ಸ್ಪೇನ್, ಫ್ರಾನ್ಸ್, ದಕ್ಷಿಣ ಕೊರಿಯಾ, ಭಾರತ, ಕೆನಡಾಗಳೊಡನೆ ಬಿಲ್ ಗೇಟ್ಸ್ ಪ್ರತಿಷ್ಠಾನ ಹಣ ನೀಡಿದೆ. ಕೋವಿಡ್ ಲಸಿಕೆಗಳೂ ಕೊಡುಗೆಯ ರೂಪದಲ್ಲಿ ಸಂಗ್ರಹವಾಗುತ್ತಿವೆ. ಸದ್ಯದ ಪರಿಸ್ಥಿತಿಯಲ್ಲಿ ಕೋವ್ಯಾಕ್ಸ್ ಅತ್ಯಂತ ಭರವಸೆಯ ಬೆಳವಣಿಗೆಯಾಗಿದೆ.

ಕೋವ್ಯಾಕ್ಸ್ ಯೋಜನೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಿರುವ ಭಾರತವು ಬಾಂಗ್ಲಾದೇಶ, ಮ್ಯಾನ್ಮಾರ್, ನೇಪಾಳ, ಭೂತಾನ್, ಮಾಲ್ಡೀವ್ಸ್, ಶ್ರೀಲಂಕಾ, ಬಹರೇನ್, ಒಮಾನ್, ಅಫ್ಗಾನಿಸ್ತಾನ, ಬಾರ್ಬಡೋಸ್, ಡೊಮಿನಿಕಾಗಳಿಗೆ ಒಟ್ಟು 62.7 ಲಕ್ಷ ಡೋಸ್‌ಗಳಷ್ಟು ಲಸಿಕೆಯನ್ನು ಉಚಿತವಾಗಿ ಒದಗಿಸಿದೆ. ಬ್ರೆಜಿಲ್, ಮೊರಾಕ್ಕೊ, ಈಜಿಪ್ಟ್, ಅಲ್ಜೀರಿಯಾ, ದಕ್ಷಿಣ ಆಫ್ರಿಕಾ, ಕುವೈತ್, ಯುಎಇಗಳಿಗೆ 1.05 ಕೋಟಿ ಡೋಸ್‌ಗಳನ್ನು ಮಾರಾಟ ಮಾಡಿದೆ. ಇಂತಹ ನಡೆಗೆ ತೀರಾ ವಿರುದ್ಧವಾಗಿ ಕೋವಿಡ್ ಲಸಿಕೆಯ ಪೂರೈಕೆಯನ್ನು ರಾಜಕೀಯ ಅಸ್ತ್ರವಾಗಿ ಬಳಸಿರುವ ನಿದರ್ಶನಗಳೂ ಉಂಟು. ಚೀನಾದ ಒತ್ತಡದಿಂದಾಗಿ ಫೈಜರ್ ಕಂಪನಿಯು 5 ಲಕ್ಷ ಡೋಸ್‌ಗಳ ಸರಬರಾಜಿಗೆ ತೈವಾನ್ ಜೊತೆಗೆ ಮಾಡಿಕೊಂಡಿದ್ದ ಒಪ್ಪಂದದಿಂದ ಹಿಂದೆ ಸರಿದಿದೆ.

ಮಾರಕ ರೋಗ ಪೋಲಿಯೊಗೆ 1955ರಲ್ಲಿ ಪರಿಣಾಮಕಾರಿಯಾದ ಲಸಿಕೆಯನ್ನು ಕಂಡುಹಿಡಿದ ವೈದ್ಯವಿಜ್ಞಾನಿ ಜೋನಾಸ್ ಸಾಕ್ ಅದಕ್ಕೆ ಪೇಟೆಂಟ್ ಪಡೆಯಲಿಲ್ಲ. ಪ್ರಪಂಚದ ಕೋಟ್ಯಂತರ ಮಕ್ಕಳ ಪ್ರಾಣ ಉಳಿಸುವ ಲಸಿಕೆಗೆ ಪೇಟೆಂಟ್ ಪಡೆದು ಲಾಭ ಗಳಿಸುವುದು ನೈತಿಕತೆಯಲ್ಲವೆಂಬುದು ಆ ಮಾನವತಾವಾದಿ ವಿಜ್ಞಾನಿಯ ಖಚಿತ ಅಭಿಪ್ರಾಯವಾಗಿತ್ತು. ಅಂತಹ ಅಸಾಧಾರಣ ನಿಲುವಿನ ವಿಜ್ಞಾನಿ ಮತ್ತು ಔಷಧ ಉತ್ಪಾದನಾ ಸಂಸ್ಥೆಗಳು ತೀರಾ ಅಪರೂಪವಾಗುತ್ತಿರುವುದೇ ಇಂದಿನ ದೊಡ್ಡ ದುರಂತ.

ಚುರುಮುರಿ



ಖರಾಬ್ ಐಟಂಗಳು

• ಲಿಂಗರಾಜು ಡಿ.ಎಸ್.

'ನೋಡಿ ಸಾ, ವಿರೋಧ ಪಕ್ಷದೋವು ಮಾಡ ಕ್ಯಾಮೆ ಬುಟ್ಟು ಹ್ಯಂಗೆ ಉಚಾಯಿಸಿಕ್ಯಂಡು ಮಾತಾಡ್ತಾ ಕೂತವೆ. ಅವುನ್ನ ಕಂಡ್ರೆ ಇವನಿಗಾಗಕುಲ್ಲ, ಇವುನ್ನ ಕಂಡರೆ ಅವನಿಗಾಗಕುಲ್ಲ. ಇವರಿಬ್ಬರುನ ಕಂಡರೆ ಮೂರನೇಯವನಿಗಾಗಕುಲ!' ತುರೇಮಣೆಗೆ ಹೇಳಿದೆ.

'ಅಧಿಕಾರ ಇಲ್ಲದಾಗ ಇನ್ನೊಬ್ಬನ್ನ ಬೋದು ಬೋದು ದಬ್ಬಾಕ್ತವೆ. ಅಧಿಕಾರ ಸಿಕ್ಕಿದೇಟಿಗೆ ಮದಲಿಂಗನ ಥರಾ ಆಗೋಯ್ತವೆ' ಅಂತು ಯಂಟಪ್ಪಣ್ಣ. 'ರಾಜಕೀಯದ ಕೂಟಕರ್ಮದೇಲಿ ಯಂತ್ರ, ತಂತ್ರ, ಕುತಂತ್ರ, ಬೈಗಳು ಇವೆಲ್ಲಾ ಸಾಮಾನ್ಯ ಕನ್ರೋ! ಅದೃಷ್ಟ ಖರಾಬಾಗಿ ದ್ದೋರಿಗೆ ಖೇಲ್ ಖತಂ ನಾಟಕ್ ಬಂದ್!' ತುರೇಮಣೆ ವಿವರಿಸಿದರು.

'ಅಯ್ಯ ನಿಮ್ಮ ಬರೀ ಗುನ್ನಂಪಟ್ಟೆ ತೋರಿಸ್ತೀರಲ್ಲಾ ಸಾ' ಅಂದೆ ಬೇಜಾರೇಲಿ.

'ನೋಡ್ಲೋ, ರಾಜಕೀಯದೇಲಿ ವಯಸ್ಸು, ಟೈಮು, ದುಡ್ಡು ಅಂತ ಮೂರು ಖರಾಬ್ ಐಟಮ್ಮುಗಳವೆ. ಇವೇ ರಾಜಕಾರಣಿ ಭವಿಷ್ಯ ತೀರ್ಮಾನ ಮಾಡದು. ಇವು ಯಾವತ್ತೂ ಒಂದಿಗಿರಲ್ಲ, ಯಾರೂ ತಂದುಕೊಡಂಗಿಲ್ಲ! ಇವು ಮೂರು ಚಿಕ್ಕ ವಯಸ್ಸಲ್ಲೇ ಸಿಕ್ಕಿದೋನು ರಾಜಕೀಯದೇಲಿ ಗೆಟನ್ ಆಯ್ತನೆ ಕಯ್ಯಾ' ಅಂದು ಆಕಳಿಸಿದರು.

'ಅದೇನು ಬುಡಸೇಳಿ ಸಾ' ಅಂದೆ.

'ಬುಡಸಾಕೆ ಅದೇನು ನಲ್ಲಿಮೂಳೆನಾ ಬೊಡ್ಡಿಹೈದ್ನೆ. ಯೇಳ್ತಿನಿ ತಿಳಕೋ! ಚಿಕ್ಕ ವಯಸ್ಸಿಗೆ ರಾಜಕೀಯಕ್ಕೆ ಬಂದೋನಿಗೆ ಬೇಜಾನ್ ಟೈಮಿರತದೆ. ಆದರೆ ಬೇಕಾದ್ದು ಅನುಭವಿಸಕೆ ದುಡ್ಡಿರಲ್ಲ. ರಾಜಕೀಯದೇಲಿ ಹತ್ತಾರು ವರ್ಷ ಪಳಗಿದೋನಿಗೆ ವಯಸ್ಸು ಇರತದೆ, ದುಡ್ಡೂ ಇರತದೆ ಆದ್ರೆ ಟೈಮೇ ಇರಲ್ಲ. ಇನ್ನು ಅಧಿಕಾರ ಸಿಕ್ಕಿ ಮುದಿಯಾದ ಮ್ಯಾಲೆ ಬೇಕಾದಷ್ಟು ಟೈಮಿರತದೆ ದುಡ್ಡಿರತದೆ ಆದರೆ ಅನುಭವಿಸೋ ವಯಸ್ಸಿರಲ್ಲ. ಇದೇ ರಾಜಕೀಯದ ಭಗವದ್ಗೀತೆ ಕನ್ರೋ ಹೈವಾನುಗಳಾ!' ಅಂದ್ರು ತುರೇಮಣೆ.

'ಸಾ, ಈ ಭಗವದ್ಗೀತೇಲಿ ಜನಸಾಮಾನ್ಯರ ಪಾಡು ಹ್ಯಂಗೆ?' ಪ್ರಶ್ನೆ ಮಾಡಿದೆ.

'ಬರೀ ಬಂಡಾಟ ಕನ್ರೋ. ಹಗಲು ಸತ್ತರೆ ಅಕ್ಕೀಗೆ ಗತಿಲ್ಲ, ಇಳ್ಳು ಸತ್ತರೆ ಎಣ್ಣೆಗೆ ಗತಿಲ್ಲ!' ಕಷ್ಟಾಚಾರದ ಕತೆ ಕೇಳಿ ಸನ್ನಿ ಹಿಡಿದಂಗಾಯ್ತು!

ಸಂಗತ

ಕ್ರಿಕೆಟ್ ಕಣಕ್ಕಿಲ್ಲ ಕ್ರಿಕೆಟಿಗರ ಹೆಸರು!

ಭಾರತದ ಕೋಟ್ಯಂತರ ಜನರ ಬದುಕಿನಲ್ಲಿ ಕ್ರಿಕೆಟ್ ಹಾಸುಹೊಕ್ಕಾಗಿದೆ. ಆದರೂ ಇಲ್ಲಿಯ ಎಷ್ಟು ಅಂತರರಾಷ್ಟ್ರೀಯ ಕ್ರೀಡಾಂಗಣಗಳಿಗೆ ಕ್ರಿಕೆಟಿಗರ ಹೆಸರನ್ನು ಇಡಲಾಗಿದೆ?

• ಗಿರೀಶ ದೊಡ್ಡಮನಿ

ನಾಲ್ಕು ವರ್ಷಗಳ ಹಿಂದೆ ಅಮೆರಿಕದ ಕೆಂಟುಕಿಯಲ್ಲಿ ಕ್ರಿಕೆಟ್ ಕ್ರೀಡಾಂಗಣವೊಂದಕ್ಕೆ ಕ್ರಿಕೆಟ್ ದಿಗ್ಗಜ ಸುನೀಲ್ ಗಾವಸ್ಕರ್ ಅವರ ಹೆಸರನ್ನು ಇಡಲಾಯಿತು. ಆ ಮೈದಾನವನ್ನು ಉದ್ಘಾಟಿಸಿದ್ದ ಗಾವಸ್ಕರ್, 'ಈ ದೇಶದಲ್ಲಿ ಕ್ರಿಕೆಟ್ ಪ್ರಮುಖ ಆಟವಲ್ಲ. ಆದರೂ ಇಲ್ಲಿಯ ಕ್ರೀಡಾಂಗಣಕ್ಕೆ ನನ್ನ ಹೆಸರು ಕೊಡಲಾಗಿದೆ. ಇದು ನನಗೆ ಲಭಿಸಿದ ದೊಡ್ಡ ಸನ್ಮಾನ' ಎಂದು ಭಾವುಕರಾಗಿದ್ದರು.

ಭಾರತದ ಕೋಟ್ಯಂತರ ಜನರ ಜೀವನಶೈಲಿಯಲ್ಲಿ ಕ್ರಿಕೆಟ್ ಹಾಸುಹೊಕ್ಕಾಗಿದೆ. ಆದರೂ ಇಲ್ಲಿಯ ಎಷ್ಟು ಅಂತರರಾಷ್ಟ್ರೀಯ ಕ್ರೀಡಾಂಗಣಗಳಿಗೆ ಕ್ರಿಕೆಟಿಗರ ಹೆಸರನ್ನು ಇಡಲಾಗಿದೆ?


ಭಾರತದ ಕ್ರಿಕೆಟ್ ಇತಿಹಾಸದ ಪುಟಗಳನ್ನು ತಿರುವಿ ನೋಡಿ ಅಥವಾ ಗೂಗಲ್‌ನಲ್ಲಿ ಜಾಲಾಡಿ. ಒಂದೇ ಒಂದು ಅಂತರರಾಷ್ಟ್ರೀಯ ಕ್ರೀಡಾಂಗಣಕ್ಕೂ ದಿಗ್ಗಜ ಕ್ರಿಕೆಟಿಗರ ಹೆಸರು ಇಟ್ಟಿರುವುದು ಕಾಣಿಸುವುದಿಲ್ಲ. ಆಂಧ್ರಪ್ರದೇಶದ ವಿಜಯನಗರಂ ಕ್ರೀಡಾಂಗಣಕ್ಕೆ ಅಲ್ಲಿಯ ರಾಜಕುಮಾರ ಮತ್ತು ಕ್ರಿಕೆಟಿಗರಾಗಿದ್ದ ಪೂಸಪಾಟಿ ವಿಜಯಾನಂದ ಗಜಪತಿ ರಾಜು ಅವರ ಹೆಸರು ಇಡಲಾಗಿದೆ. ಪಂಜಾಬ್‌ನ ಪಟಿಯಾಲದಲ್ಲಿ ದುರ್ಮರಣಕ್ಕೀಡಾದ ಯುವ ಕ್ರಿಕೆಟಿಗ ಧ್ರುವ ಪಾಂಡೋವ್ ಅವರ ಹೆಸರು ಇಡಲಾಗಿದೆ. ಆದರೆ ಇವೆರಡೂ ಅಂತರರಾಷ್ಟ್ರೀಯ ಅಂಗಳಗಳಲ್ಲ. ಮೊಹಾಲಿಯ ಕ್ರೀಡಾಂಗಣಕ್ಕೆ ಮರುನಾಮಕರಣ ಮಾಡುವ ಸಂದರ್ಭದಲ್ಲಿ ಅದರ ಪದಾಧಿಕಾರಿಯಾಗಿದ್ದ ಐ.ಎಸ್.ಬಿಂದ್ರಾ ಅವರ ಹೆಸರು ಇಡಲಾಯಿತು!

ಇದೇ ರೀತಿ ಮಾಜಿ ಪ್ರಧಾನಿಗಳು, ರಾಜಕೀಯ ಧುರೀಣರು, ಉದ್ಯಮಿಗಳು, ಕ್ರಿಕೆಟ್ ಆಡಳಿತದಲ್ಲಿ ಗುರುತಿಸಿಕೊಂಡವರ ಹೆಸರಿನ ಕ್ರೀಡಾಂಗಣಗಳಿವೆ. ನಾಮಕರಣದ ವಿಚಾರದಲ್ಲಿ ಹಿಂದಿನ ಪರಿಪಾಟವೇ ಈಗಲೂ ಮುಂದುವರಿದಿದೆ. ಇತ್ತೀಚೆಗೆ, ಅಹಮದಾಬಾದಿನ ಮೊಟೇರಾದಲ್ಲಿರುವ ಕ್ರಿಕೆಟ್ ಕ್ರೀಡಾಂಗಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರಿಟ್ಟಿದ್ದು ದೊಡ್ಡ ಚರ್ಚೆಗೆ ಕಾರಣವಾಯಿತು.

ಅಂಗಣಗಳಿಗೆ ರಾಜಕೀಯ ಧುರೀಣರ ಹೆಸರಿಟ್ಟಾಗ ಟೀಕಿಸುವವರನ್ನು ಸಮಾಧಾನಗೊಳಿಸಲು ಪ್ರೇಕ್ಷಕರ ಸ್ಟ್ಯಾಂಡ್‌ಗಳಿಗೆ ಆಟಗಾರರ ಹೆಸರು ಇಡಲಾಗುತ್ತಿದೆ. ದೆಹಲಿಯಲ್ಲಿರುವ ಮಾಜಿ ಸಚಿವ, ದಿವಂಗತ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಸ್ಪಿನ್ ಬೌಲಿಂಗ್ ದಿಗ್ಗಜ ಬಿಷನ್ ಸಿಂಗ್ ಬೇಡಿ, ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಸ್ಟ್ಯಾಂಡ್‌ಗಳು ಮತ್ತು ವೀರೇಂದ್ರ ಸೆಹ್ವಾಗ್ ಹೆಸರಿನ ಪ್ರವೇಶದ್ವಾರ ಇದೆ. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಗಾವಸ್ಕರ್ ಮತ್ತು ಸಚಿನ್ ತೆಂಡೂಲ್ಕರ್ ಸ್ಟ್ಯಾಂಡ್‌ಗಳಿವೆ.

ಇದರಲ್ಲಿ ವೆಸ್ಟ್ ಇಂಡೀಸ್ ನಡೆ ಅನುಕರಣೀಯ. ಆ್ಯಂಟಿಗಾದ ನಾರ್ತ್‌ಸೌಂಡ್‌ನಲ್ಲಿ ವಿವಿಯನ್ ರಿಚರ್ಡ್ಸ್, ಬಾರ್ಬಡೀಸ್‌ನಲ್ಲಿ ತ್ರಿ ಡಬ್ಲ್ಯುಸ್ ಓವಲ್ (ಫ್ರ್ಯಾಂಕ್ ವೊರೆಲ್, ಕ್ಲೈಡ್ ವಾಲ್ಕಾಟ್ ಮತ್ತು ಎವರ್ಟನ್ ವೀಕ್ಸ್ ಅವರ ನೆನಪಿಗಾಗಿ), ಸೇಂಟ್ ಲೂಸಿಯಾದಲ್ಲಿ ಡ್ಯಾರನ್ ಸಾಮಿ, ಟ್ರಿನಿಡಾಡ್‌ನಲ್ಲಿ ಬ್ರಯನ್ ಲಾರಾ ಕ್ರೀಡಾಂಗಣಗಳಿವೆ. ಶ್ರೀಲಂಕಾದ ಕ್ಯಾಂಡಿಯಲ್ಲಿ ಮುತ್ತಯ್ಯ ಮುರಳೀಧರನ್ ಅಂತರರಾಷ್ಟ್ರೀಯ ಕ್ರೀಡಾಂಗಣ ಇದೆ. ಅಷ್ಟೇ ಏಕೆ ಇಂಗ್ಲೆಂಡ್‌ನಲ್ಲಿರುವ 'ಕ್ರಿಕೆಟ್ ಕಾಶಿ' ಲಾರ್ಡ್ಸ್ ಕೂಡ ಮಾಜಿ ಕ್ರಿಕೆಟಿಗ ಸರ್ ಥಾಮಸ್ ಲಾರ್ಡ್ಸ್ ಅವರ ನೆನಪಿನಂಗಳ. ಆಸ್ಟ್ರೇಲಿಯಾದಲ್ಲಿ ಸರ್ ಡಾನ್ ಬ್ರಾಡ್ಮನ್ ಮತ್ತು ಅಲನ್ ಬಾರ್ಡರ್ ಅವರ ಹೆಸರಿನ ಕ್ರೀಡಾಂಗಣಗಳಿವೆ.

ಈ ವಿಷಯದಲ್ಲಿ ದೇಶದ ಹಾಕಿ ಮತ್ತು ಫುಟ್‌ಬಾಲ್ ಸಂಸ್ಥೆಗಳೇ ಪರವಾಗಿಲ್ಲ. ದೆಹಲಿಯ ಹಾಕಿ ಅಂಗಣಕ್ಕೆ ಮೇಜರ್ ಧ್ಯಾನಚಂದ್ ಮತ್ತು ಸಿಕ್ಕಿಂ ರಾಜ್ಯದ ಫುಟ್‌ಬಾಲ್ ಅಂಗಳಕ್ಕೆ ಬೈಚುಂಗ್ ಭುಟಿಯಾ ಅವರ ಹೆಸರಿದೆ. ಆದರೆ ವಿಶ್ವದ ಶ್ರೀಮಂತ ಕ್ರೀಡಾ ಸಂಸ್ಥೆಗಳಲ್ಲಿ ಒಂದಾದ ಬಿಸಿಸಿಐ ಮಾತ್ರ ಇಂತಹ ಹೆಜ್ಜೆ ಇಟ್ಟಿಲ್ಲ.



ಅಪರೂಪವೆಂಬಂತೆ, ಎರಡು ಕ್ರಿಕೆಟ್ ಕ್ರೀಡಾಂಗಣಗಳಿಗೆ ಇಬ್ಬರು ಹಾಕಿ ದಿಗ್ಗಜರ ಹೆಸರುಗಳಿವೆ. ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಕ್ಯಾಪ್ಟನ್ ರೂಪ್‌ಸಿಂಗ್ ಮತ್ತು ಲಖನೌನಲ್ಲಿ ಕೆ.ಡಿ.ಸಿಂಗ್ ಬಾಬು ಕ್ರೀಡಾಂಗಣಗಳಿವೆ. ಈ ಮೈದಾನಗಳು ಕ್ರಿಕೆಟ್ ಅಂಗಳಗಳಾಗುವುದಕ್ಕಿಂತ ಮುನ್ನ ಹಾಕಿ ಕಣಗಳಾಗಿದ್ದದ್ದು ಕೂಡ ಅವರ ಹೆಸರುಗಳು ಉಳಿಯಲು ಕಾರಣ.

ಇಂತಹ ಸಂದರ್ಭಗಳಲ್ಲಿ 'ಹೆಸರಲ್ಲೇನಿದೆ ಬಿಡಿ' ಎಂದು ಹೇಳುವುದು ಲೋಕಾರೂಢಿ. ಆದರೆ ಒಮ್ಮೆ ಯೋಚಿಸಿ. ಕರ್ನಾಟಕದಲ್ಲಿ ಜಿ.ಆರ್.ವಿಶ್ವನಾಥ್ ಹೆಸರಿರುವ ಅಂಗಳದಲ್ಲಿ ಅವರಿಂದಲೇ ಗತಕಾಲದ ಸಾಧನೆಗಳ ಕಥೆಯನ್ನು ಕೇಳುವ ಅನುಭವ ಹೇಗಿರಬಹುದು? ಅದೇ ರೀತಿ ಚಂಡೀಗಡದಲ್ಲಿ ಕಪಿಲ್ ದೇವ್, ದೆಹಲಿಯಲ್ಲಿ ಬಿಷನ್ ಸಿಂಗ್ ಬೇಡಿ, ಮುಂಬೈನಲ್ಲಿ ತೆಂಡೂಲ್ಕರ್ ಮತ್ತು ಇಂದೋರ್‌ನಲ್ಲಿ ಕರ್ನಲ್ ಸಿ.ಕೆ. ನಾಯ್ಡು ಅವರ ಹೆಸರಿನ ಅಂಗಳಗಳಿದ್ದರೆ ಎಷ್ಟು ಚೆಂದ.

ಇವತ್ತು ಕ್ರಿಕೆಟ್ ಈ ಮಟ್ಟಕ್ಕೆ ಬೆಳೆಯಲು ಇವರೆಲ್ಲರ ಆಟದ ಸೊಬಗು ಕಾರಣವಲ್ಲವೇ? ಆದರೂ ಕ್ರೀಡಾಂಗಣಗಳಿಗೆ ಅವರ ಹೆಸರಿಡಲು ಹಿಂಜರಿಕೆ ಏಕೆ? ಆ ಮೂಲಕ ಅವರ ಯಶೋಗಾಥೆಗಳ ಕುರಿತು ಅರಿಯುವ ಕುತೂಹಲವನ್ನು ಯುವಪೀಳಿಗೆಯಲ್ಲಿ ಮೂಡಿಸಬಹುದು. ಇಂತಹ ಔಚಿತ್ಯಪ್ರಜ್ಞೆ ನಮ್ಮಲ್ಲಿ ಮೂಡುವುದೆಂದು?

ವಾಚಕರ ವಾಣಿ

ಧೋರಣೆ ಬದಲಾಗಲಿ

ಕೋವಿಡ್-19 ಸಂಕಷ್ಟದ ಕಾಲದಲ್ಲಿ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್ ಚಾಲಕರು ಮತ್ತು ನಿರ್ವಾಹಕರು ಶ್ಲಾಘನೀಯ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಕೆಲ ಚಾಲಕರು ಮತ್ತು ನಿರ್ವಾಹಕರ ನಿರ್ಲಕ್ಷ್ಯತನದಿಂದ ವೃದ್ಧ ಪ್ರಯಾಣಿಕರಿಗೆ, ಒಂಟಿಯಾಗಿ ಪ್ರಯಾಣಿಸುವ ಮಕ್ಕಳಿಗೆ ಅನನುಕೂಲವಾಗುತ್ತಿದೆ. ಕೆಲವು ಬಸ್‌ಗಳಲ್ಲಿ ಮುಂದಿನ ಫಲಕದಲ್ಲಿ ಒಂದು ಊರಿನ ಹೆಸರಿದ್ದರೆ ಹಿಂದಿನ ಫಲಕದಲ್ಲಿ ಮಗದೊಂದು ಊರಿನ ಹೆಸರು ಇರುತ್ತದೆ.

ಸೋಮವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ಕಲಬುರ್ಗಿಯಿಂದ ಯಾದಗಿರಿ ನಗರಕ್ಕೆ ತೆರಳುತ್ತಿದ್ದ ಬಸ್‌ನ ಮುಂದೆ ಕಲಬುರ್ಗಿ- ಯಾದಗಿರಿ ಎಂಬ ಫಲಕ ಸರಿಯಾಗಿತ್ತು. ಆದರೆ ಹಿಂದಿನ ಫಲಕದಲ್ಲಿ ಬೆಂಗಳೂರು- ಬಳ್ಳಾರಿ- ಶಹಾಪೂರ ಎಂದಿತ್ತು. ಸಾರಿಗೆ ನಿಗಮಗಳ ಬಸ್ ಚಾಲಕರು ಮತ್ತು ನಿರ್ವಾಹಕರ 'ಹೇಗಿದ್ದರೂ ನಡೆಯುತ್ತದೆ' ಎಂಬ ಇಂತಹ ಧೋರಣೆ ಬದಲಾಗಬೇಕು.

ಸಿದ್ಧು ಟಿ., ಯಡ್ರಾಮಿ, ಕಲಬುರ್ಗಿ

ಅನವಶ್ಯಕ ಪ್ಲಾಸ್ಟಿಕ್ ಬಳಕೆ ತರವೇ?

ಪ್ರಥಮ ದರ್ಜೆ ಸಹಾಯಕರ ನೇಮಕಾತಿ ಪರೀಕ್ಷೆಯನ್ನು ಕೆಪಿಎಸ್‌ಸಿ ಭಾನುವಾರ ರಾಜ್ಯದಾದ್ಯಂತ ಸುಸೂತ್ರವಾಗಿ ನಡೆಸಿದೆ. ಆದರೆ ಪರೀಕ್ಷೆಯಲ್ಲಿ ಅಭ್ಯರ್ಥಿಗಳಿಗೆ ಪ್ರಶ್ನೆಪತ್ರಿಕೆಗಳನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಇರಿಸಿ ನೀಡಲಾಗಿತ್ತು. ಎರಡೂ ಪತ್ರಿಕೆಗಳನ್ನು (ಸಾಮಾನ್ಯ ಜ್ಞಾನ ಮತ್ತು ಸಾಮಾನ್ಯ ಕನ್ನಡ/ ಇಂಗ್ಲಿಷ್) ಸೇರಿಸಿ ಅಂದಾಜು 9 ಲಕ್ಷ ಪ್ಲಾಸ್ಟಿಕ್ ಕವರ್‌ಗಳು. ಪ್ಲಾಸ್ಟಿಕ್ ನಿಷೇಧ ನಿಯಮವನ್ನು ಪಾಲಿಸಬೇಕಾದ ಸಂಸ್ಥೆಗಳೇ ಈ ರೀತಿ ಅನವಶ್ಯಕವಾಗಿ ಪ್ಲಾಸ್ಟಿಕ್ ಬಳಸಿದರೆ ಹೇಗೆ? ಮುಂದಿನ ಪರೀಕ್ಷೆಗಳಲ್ಲಿ ಕೆಪಿಎಸ್‌ಸಿ ಈ ಬಗ್ಗೆ ಗಮನಹರಿಸಲಿ.

ಮಧು ಎನ್.ಬಿ., ನಾರನಹಳ್ಳಿ, ದೊಡ್ಡಬಳ್ಳಾಪುರ

ಪ್ರಶ್ನೆಪತ್ರಿಕೆಯಲ್ಲಿ ಅಸಮತೋಲನ

ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗೆ ಭಾನುವಾರ ಪರೀಕ್ಷೆ ನಡೆಸಿತು. ಸಾಮಾನ್ಯ ಜ್ಞಾನದ ಪ್ರಶ್ನೆಪತ್ರಿಕೆಯಲ್ಲಿ ವಿಜ್ಞಾನದ ಪ್ರಶ್ನೆಗಳೇ ಹೆಚ್ಚಾಗಿ ತುಂಬಿಹೋಗಿದ್ದವು. 100 ಪ್ರಶ್ನೆಗಳಲ್ಲಿ 45 ಪ್ರಶ್ನೆಗಳು ವಿಜ್ಞಾನಕ್ಕೆ ಸಂಬಂಧಿಸಿದವೇ ಆಗಿದ್ದವು. ಪರೀಕ್ಷೆಯ ದಿನ ರಾಷ್ಟ್ರೀಯ ವಿಜ್ಞಾನದ ದಿನವಾಗಿತ್ತು. ಈ ದಿನವನ್ನು ಪರೀಕ್ಷೆಯ ಮೂಲಕ ಆಚರಿಸಲೋ ಎಂಬಂತೆ ಆಯೋಗವು ವಿಜ್ಞಾನದ ಪ್ರಶ್ನೆಗಳನ್ನೇ ಹೆಚ್ಚಾಗಿ ಕೇಳಿದ್ದುದು ಆಶ್ಚರ್ಯಕರವಾಗಿತ್ತು.

ಸಾಮಾನ್ಯ ಜ್ಞಾನದ ಪ್ರಶ್ನೆಪತ್ರಿಕೆಯಲ್ಲಿ ಇತಿಹಾಸ, ಸಂವಿಧಾನ, ವೈಯಕ್ತಿಕ ಜೀವನದಲ್ಲಿ ವಿಜ್ಞಾನ, ಮಾನಸಿಕ ಸಾಮರ್ಥ್ಯ, ಭೂಗೋಳ, ಪ್ರಚಲಿತ ಘಟನೆಗಳು ಸೇರಿದಂತೆ ಎಲ್ಲ ವಿಭಾಗಗಳಿಂದ ಪ್ರಶ್ನೆಗಳನ್ನು ಕ್ರೋಡೀಕರಿಸಿ ಕೇಳಬೇಕಾಗಿರುವುದು ನಿಯಮ. ಆದರೆ ಆಯೋಗವು ಇದನ್ನು ಗಾಳಿಗೆ ತೂರಿದ್ದರಿಂದ, ಕಲಾ ವಿಭಾಗದಲ್ಲಿ ಪದವಿ ಪಡೆದವರಿಗೆ ಪ್ರಶ್ನೆಪತ್ರಿಕೆಯು ಕಬ್ಬಿಣದ ಕಡಲೆಯಾಗಿ ಮಾರ್ಪಟ್ಟಿತ್ತು.

ಪ್ರಶ್ನೆಪತ್ರಿಕೆ ಸೋರಿಕೆ, ಪರೀಕ್ಷಾ ಅಕ್ರಮಗಳಿಗೆ ಕುಖ್ಯಾತಿ ಪಡೆದಿರುವ ಕೆಪಿಎಸ್‌ಸಿಯು ಪ್ರಶ್ನೆಪತ್ರಿಕೆ ರಚಿಸುವ ಕಾರ್ಯದಲ್ಲಿಯೂ ಎಡವಿರುವುದು ಸಾವಿರಾರು ಅಭ್ಯರ್ಥಿಗಳಿಗೆ ಮಾರಕವಾಗಿರುವುದಂತೂ ನಿಜ. ಕೆಪಿಎಸ್‌ಸಿ ಇನ್ನಾದರೂ ಬದಲಾಗಲಿ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ಖಾಸಗಿ ಬಾವಿಗಳೂ ಸ್ವಚ್ಛಗೊಳ್ಳಲಿ

ಜಲ ಸಂರಕ್ಷಣೆ ಕುರಿತು ಜನಜಾಗೃತಿ ಮೂಡಿಸಲು ಕೇಂದ್ರ ಜಲಶಕ್ತಿ ಸಚಿವಾಲಯ 'ಕ್ಯಾಚ್ ದಿ ರೈನ್' ಅಭಿಯಾನ ಆರಂಭಿಸುತ್ತಿದೆ. ಬಿದ್ದ ಜಾಗದಲ್ಲಿ, ಬಿದ್ದ ಸಮಯದಲ್ಲೇ ಮಳೆ ನೀರನ್ನು ಸಂಗ್ರಹಿಸಬೇಕು ಎಂಬುದು ಅಭಿಯಾನದ ಉದ್ದೇಶ (ಪ್ರ.ವಾ., ಮಾರ್ಚ್ 1). ಮುಖ್ಯವಾಗಿ ಕೆರೆ, ಕೃಷಿ ಹೊಂಡಗಳ ಹೂಳು ತೆಗೆಸುವ ಕಾರ್ಯ ಸರ್ಕಾರದ ನೇತೃತ್ವದಲ್ಲೇ ಆಗುವುದು. ಆದರೆ ಎಷ್ಟೋ ಮನೆಗಳ ಬಾವಿಗಳಲ್ಲಿ ಹೂಳು ತುಂಬಿಕೊಂಡಿದೆ. ಸ್ವಚ್ಛಗೊಳಿಸದ ಕಾರಣ ನೀರು ಬಳಕೆಗೆ ಯೋಗ್ಯವಾಗಿಲ್ಲ. ಪರಿಣತಿಯ ಕೊರತೆ ಅಥವಾ ಆರ್ಥಿಕವಾಗಿ ಸಬಲರಾಗಿಲ್ಲದೇ ಇರುವುದು ಇದಕ್ಕೆ ಕಾರಣ. ಸರ್ಕಾರದ ನೇತೃತ್ವದಲ್ಲಿ ಸ್ಥಳೀಯ ಸಂಸ್ಥೆಗಳು ಈ ದಿಸೆಯಲ್ಲಿ ಖಾಸಗಿ ಬಾವಿಗಳನ್ನು ಸ್ವಚ್ಛಗೊಳಿಸಿ ಜಲದ ಕಣ್ಣು ತೆರೆಸಿದಲ್ಲಿ ಜಲ ಸಂರಕ್ಷಣೆ ಆಗುತ್ತದೆ. ಇದರಿಂದ ಸ್ಥಳೀಯ ಸಂಸ್ಥೆಗಳ ಮೇಲೆ ನೀರಿನ ಅವಲಂಬನೆ ಕಡಿಮೆಯಾಗುತ್ತದೆ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಸಂಸದರ ಹೇಳಿಕೆ ಖಂಡನೀಯ

ಆದಿವಾಸಿಗಳಿಗೆ ನೀಡುವ ಸವಲತ್ತುಗಳನ್ನು, ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ ಬುಡಕಟ್ಟು ಜನರಿಗೆ ವಿತರಿಸಬಾರದು ಎಂಬ ಸಂಸದ ಪ್ರತಾಪ ಸಿಂಹ ಅವರ ಹೇಳಿಕೆ (ಪ್ರ.ವಾ., ಫೆ. 25) ಕ್ರೈಸ್ತ ಸಮುದಾಯದವರ ಮನ ನೋಯಿಸುವಂತಹದ್ದು. ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದುವವರನ್ನೇ ಗುರಿಯಾಗಿಸಿಕೊಂಡು ನೀಡಿರುವ ಈ ಹೇಳಿಕೆ ಸಂವಿಧಾನಕ್ಕೆ ವಿರುದ್ಧವಾಗಿದೆ. ಎಲ್ಲಾ ಜನಸಮುದಾಯದವರಿಂದ ಆಯ್ಕೆಗೊಂಡ ಸಂಸದರು ಸಂವಿಧಾನದ ಮೂಲ ಆಶಯವನ್ನೇ ಮರೆತಿರುವ ಹಾಗಿದೆ.

'ಕುತ್ತಿಗೆಯಲ್ಲಿ ಶಿಲುಬೆ ಹಾಕಿಕೊಂಡಿರುವವರನ್ನು ಗುರುತಿಸಬೇಕು. ಅವರಿಗೆ ಸೌಲಭ್ಯ ವಿತರಿಸುತ್ತಿದ್ದರೆ, ಕೂಡಲೇ ನಿಲ್ಲಿಸಬೇಕು. ಮೀಸಲಾತಿ ಸೌಲಭ್ಯ ನೀಡಬಾರದು' ಎಂದು ಅವರು ಹೇಳಿದ್ದಾರೆ. ಶಿಲುಬೆ ಕ್ರೈಸ್ತರ ಪವಿತ್ರ ಸಂಕೇತ. ಅದನ್ನು ಅವಹೇಳನ ಮಾಡಿರುವುದು ಸರಿಯಲ್ಲ. ಧರ್ಮದಲ್ಲಿ ನಂಬಿಕೆ ಕಳೆದುಕೊಂಡವರಿಗೆ ತಮ್ಮ ಧರ್ಮವನ್ನು ಬದಲಾಯಿಸುವ ಹಕ್ಕು ಸಂವಿಧಾನಬದ್ಧವಾದುದು. ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರೇ ತಮ್ಮ ಮೂಲ ಧರ್ಮದ ಬಗ್ಗೆ ಬೇಸತ್ತು, ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದನ್ನು ಮರೆಯಬಾರದು.

ಎಲ್.ಚಿನ್ನಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹೆಚ್ಚು ಮೀಸಲಾತಿ ಬೇಕು ಎಂದು ಒತ್ತಾಯಿಸಿ ರಾಜ್ಯದ ಹಲವು ಪ್ರಬಲ ಸಮುದಾಯಗಳು ಬೀದಿಗಿಳಿದು ಹೋರಾಟ ಆರಂಭಿಸಿವೆ. ಪ್ರಭಾವಿ ಒಕ್ಕಲಿಗ ಸಮುದಾಯವು ಈ ಗುಂಪಿಗೆ ಇತ್ತೀಚಿನ ಸೇರ್ಪಡೆ. ಒಕ್ಕಲಿಗರಲ್ಲಿರುವ ಎಲ್ಲ 115 ಉಪ ಜಾತಿಗಳನ್ನು ಒಬಿಸಿ ಪಟ್ಟಿಗೆ ಸೇರಿಸಬೇಕು ಎಂಬುದು ಈ ಸಮುದಾಯದ ಆಗ್ರಹ. ಈ ಸಮುದಾಯದ ಇಬ್ಬರು ನಾಯಕರು ತಮ್ಮ ಬೇಡಿಕೆಯ ಹಿಂದಿನ ತರ್ಕವನ್ನು ಬಿಚ್ಚಿಟ್ಟಿದ್ದಾರೆ

‘ನಾವು ಶೇ 17ರಷ್ಟಿದ್ದೇವೆ, ಶೇ 8.5 ಮೀಸಲಾತಿ ಬೇಕು’

ಆಡಿಟರ್ ನಾಗರಾಜ್ ಯಲಚವಾಡಿ
ಪ್ರಧಾನ ಸಂಚಾಲಕ, ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ

● **ಒಕ್ಕಲಿಗರ ಮೀಸಲಾತಿ ಬೇಡಿಕೆ ಈಗ ಪ್ರಸ್ತುತವೇ?**

1918ರಲ್ಲಿ ಕೆ.ಎಚ್. ರಾಮಯ್ಯ ಅವರು ಮೈಸೂರು ಸಂಸ್ಥಾನದಲ್ಲಿ ಕೆಲಸ ಮಾಡುತ್ತಿದ್ದಾಗ ಹಳೆ ಮೈಸೂರು ಭಾಗದಲ್ಲಿ ನೆಲೆಸಿದ್ದ ಶೇ 90ರಷ್ಟು ಜನರು ಒಕ್ಕಲುತನವನ್ನೇ ಅವಲಂಬಿಸಿದ್ದರು. ಅವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಆದ್ಯತೆ ಇರಲಿಲ್ಲ. ಅವರ ಪ್ರಸ್ತಾವನೆಯಂತೆ ಮೈಸೂರು ರಾಜರು ಮಿಲ್ಲರ್ ಆಯೋಗ ರಚಿಸಿದ್ದರು. ಆ ವರದಿಯಂತೆ, ಅಂದು ನಮ್ಮವರು ಶೇ 23, ಲಿಂಗಾಯತರು ಶೇ 13, ವ್ಯಾಪಾರಿಗಳು ಶೇ 1, ಇತರೆಲ್ಲ ಶ್ರಮಿಕರು ಶೇ 41, ಬ್ರಾಹ್ಮಣರು ಶೇ 2, ಪರಿಶಿಷ್ಟರು ಶೇ 20ರಷ್ಟು ಇದ್ದರು. ಆದರೆ, ನಮ್ಮವರ ಉದ್ಯೋಗ ಪ್ರಮಾಣ ಶೇ 1.58ರಷ್ಟು ಮಾತ್ರವಿತ್ತು. ಶೇ 2ರಷ್ಟಿದ್ದವರು ಶೇ 70ರಷ್ಟು ಉದ್ಯೋಗಗಳನ್ನು ಪಡೆದುಕೊಂಡಿದ್ದರು. ಕರ್ನಾಟಕ ಏಕೀಕರಣದ ಬಳಿಕ ರಚನೆಯಾದ ನಾಗನಗೌಡ ಆಯೋಗ ಒಕ್ಕಲಿಗರಲ್ಲಿ 115 ಉಪ ಜಾತಿ ಇರುವುದನ್ನು ಪಟ್ಟಿ ಮಾಡಿತ್ತು. ನಂತರ, ಹಾವನೂರು ಆಯೋಗ, ನಮ್ಮನ್ನು ಹಿಂದುಳಿದ ಸಮುದಾಯವೆಂದು ಗುರುತಿಸಿ ಶೇ 11ರಷ್ಟು ಮೀಸಲಾತಿಗೆ ಶಿಫಾರಸು ಮಾಡಿತ್ತು. 10 ವರ್ಷಗಳ ಬಳಿಕ ವೆಂಕಟಸ್ವಾಮಿ ಆಯೋಗ ರಚನೆಯಾದರೂ ಮಾಹಿತಿ ಕೊರತೆಯಿಂದ ಸಮರ್ಪಕ ವರದಿ ನೀಡಿರಲಿಲ್ಲ, ನಂತರ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯಲ್ಲಿ ನಾವು ಮುಂದುವರಿದ ಜನಾಂಗವೆಂದು ಗುರುತಿಸಿದ್ದರಿಂದ ಮೀಸಲಾತಿ ಇಲ್ಲದಾಯಿತು. ಆ ಸಮುದಾಯದ 10 ಲಕ್ಷಕ್ಕೂ ಹೆಚ್ಚು ಮಂದಿ ರಾಜ್ಯ ಒಕ್ಕಲಿಗರ ಸಂಘ, ಬಾಲ ಗಂಗಾಧರನಾಥ ಸ್ವಾಮೀಜಿಗಳ ನೇತೃತ್ವದಲ್ಲಿ ಕಬ್ಬನ್ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದ್ದರಿಂದ ನಮಗೆ ಶೇ 4ರಷ್ಟು ಮೀಸಲಾತಿ ಸಿಕ್ಕಿದೆ. ವೀರಪ್ಪ ಮೊಯಿಲಿ ಸಚಿವ ಸಂಪುಟವು ಸಮುದಾಯಕ್ಕೆ ಶೇ 9ರಷ್ಟು ಮೀಸಲಾತಿ ನೀಡಲು ತೀರ್ಮಾನಿಸಿದ್ದರೂ ರಾಜಕೀಯ ಪಿತೂರಿಯಿಂದ ಜಾರಿಯಾಗಿಲ್ಲ. ಬೇರೆ ಸಮುದಾಯಗಳು ನಮ್ಮ ಜೊತೆ ಇರುವುದರಿಂದ ಒಕ್ಕಲಿಗರಿಗೆ ಶೇ 2.5ರಿಂದ ಶೇ 3ರಷ್ಟು ಮೀಸಲಾತಿ ಮಾತ್ರ ಸಿಕ್ಕಿದೆ. ಆದರೆ, ನಮ್ಮ ಜನಸಂಖ್ಯೆ ಶೇ 17ರಷ್ಟಿದೆ. ಸಂವಿಧಾನದ ಪ್ರಕಾರ ನಮಗೆ ಶೇ 8.5ರಿಂದ ಶೇ 10ರಷ್ಟು ಮೀಸಲಾತಿ ಸಿಗಬೇಕಿದೆ. ಈ ಕಾರಣಕ್ಕೆ, ಸಮುದಾಯದ ಮಾರ್ಗದರ್ಶಕರಾದ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಚಂದ್ರಶೇಖರನಾಥ ಸ್ವಾಮೀಜಿ, ಸಿದ್ಧರಾಮೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಬೇಡಿಕೆ ಮುಂದಿಟ್ಟಿದ್ದೇವೆ.

● **ರಾಜಕೀಯ ಪ್ರಾತಿನಿಧ್ಯ ಕೆಲವೇ ಉಪ ಪಂಗಡಗಳಿಗೆ ಸಿಕ್ಕಿದೆ. ಯಾಕೆ ಹೀಗೆ?**

ಮೇಲ್ನೋಟಕ್ಕೆ ಹಾಗೆ ಅನಿಸಿದರೂ ವಾಸ್ತವ ಹಾಗಿಲ್ಲ. ಹಳೆ ಮೈಸೂರು ಭಾಗದಲ್ಲಿ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅಲ್ಲಿ ರಾಜಕೀಯ ನಿರ್ಣಾಯಕ ಆಗಿದ್ದಾರೆ. ಎಲ್ಲ ಸರ್ಕಾರಗಳಲ್ಲಿ ಸಮುದಾಯದಿಂದ ಆಯ್ಕೆಯಾದವರು ಇದ್ದರು ಮತ್ತು ಈಗಲೂ ಇದ್ದಾರೆ. ವಿವಿಧ ಪಕ್ಷಗಳಲ್ಲಿಯೂ ಆಯಕಟ್ಟಿನ ಸ್ಥಾನಗಳಲ್ಲಿ ಇದ್ದಾರೆ. ದಕ್ಷಿಣ ಕನ್ನಡ, ಕೊಡಗು ಭಾಗಗಳಲ್ಲೂ ರಾಜಕೀಯ ಪ್ರಾತಿನಿಧ್ಯ ಪಡೆದುಕೊಂಡ ಉಪಜಾತಿಗಳಿವೆ. ಆದರೆ, ವಲಸೆ ಬಂದ ಸಣ್ಣ ಸಣ್ಣ ಸಮುದಾಯಗಳು ವಂಚಿತವಾಗಿವೆ ಎನ್ನುವುದು ನಿಜ. ಈಗ ಎಲ್ಲ ಜಿಲ್ಲೆಗಳಿಂದ ರಾಜಕೀಯ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಯ ಮಾಹಿತಿ ಪಡೆಯುತ್ತಿದ್ದೇವೆ. ಸಾಮಾಜಿಕ ಸ್ಥಿತಿಗತಿಯನ್ನೂ ಅಧ್ಯಯನ ಮಾಡುತ್ತೇವೆ.

● **ಆರ್ಥಿಕವಾಗಿ ಹಿಂದುಳಿದವರಿಗೆ (ಇಡಬ್ಲ್ಯುಎಸ್) ಕೇಂದ್ರ ಸರ್ಕಾರವು ಶೇ 10ರಷ್ಟು ಮೀಸಲಾತಿ ಘೋಷಿಸಿದೆ. ಅದರಡಿಯಲ್ಲಿ ಒಕ್ಕಲಿಗರೂ ಮೀಸಲಾತಿ ಪಡೆಯಬಹುದಲ್ಲ?**


ಶೇ 80ರಷ್ಟು ಒಕ್ಕಲಿಗರು ಗ್ರಾಮೀಣ ಪ್ರದೇಶಗಳಲ್ಲಿದ್ದು, ಬಹುತೇಕರು ಕೃಷಿಯನ್ನು ಅವಲಂಬಿಸಿದ್ದಾರೆ. ಶೇ 20ರಷ್ಟು ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿದ್ದಾರೆ. ಜೀವನೋಪಾಯಕ್ಕಾಗಿ ಸಣ್ಣ ಪುಟ್ಟ ಉದ್ಯೋಗ ಮಾಡಿಕೊಂಡಿರುವ ಅವರನ್ನು ಆರ್ಥಿಕವಾಗಿ ಸದೃಢರು ಎಂದು ಹೇಳುವ ಹಾಗಿಲ್ಲ. ಕೇಂದ್ರದ ಶೇ 10ರಷ್ಟು ಮೀಸಲಾತಿ ಸೌಲಭ್ಯದಿಂದ ನಗರ ಪ್ರದೇಶದ ಒಕ್ಕಲಿಗ ಸಮುದಾಯ ವಂಚಿತವಾಗಿದೆ. ಒಕ್ಕಲಿಗ ಮತ್ತು ಅದರ ಉಪ ಜಾತಿಗಳು ರಾಜ್ಯ ಸರ್ಕಾರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿವೆ. ಆದರೆ, ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಒಕ್ಕಲಿಗ (ಗ್ರಾಮಾಂತರ ಒಕ್ಕಲಿಗ) ಮಾತ್ರ ನಮೂದಾಗಿದೆ. ಈ ಪಟ್ಟಿಯಲ್ಲಿ ಒಕ್ಕಲಿಗ ಸಮುದಾಯದ ಸರ್ಪ ಒಕ್ಕಲಿಗ, ಹಳ್ಳಿಕಾರ ಒಕ್ಕಲಿಗ, ನಾಮಧಾರಿ ಒಕ್ಕಲಿಗ, ಗಂಗಡ್ಕಾರ್ ಒಕ್ಕಲಿಗ, ದಾಸ ಒಕ್ಕಲಿಗ, ರೆಡ್ಡಿ ಒಕ್ಕಲಿಗ ಮತ್ತು ಮರಸು ಒಕ್ಕಲಿಗ ಪಂಗಡಗಳು ಸೇರಿವೆ. ಆದರೆ, ‘ಒಕ್ಕಲಿಗ’ ಎಂದು ಮಾತ್ರ ನಮೂದಿಸಿರುವ ನಗರ ಪ್ರದೇಶದ ಒಕ್ಕಲಿಗರು ಕೇಂದ್ರದ ಈ ಮೀಸಲಾತಿ ಪಡೆಯಲು ಸಾಧ್ಯವಾಗುತ್ತಿಲ್ಲ.

● **ಒಕ್ಕಲಿಗರ ಸಂಖ್ಯೆ ಶೇ 17ರಷ್ಟು ಎಂದು ಹೇಳುತ್ತೀರಿ. ಎಲ್ಲಿಂದ ಸಿಕ್ಕಿತು ಈ ಸಂಖ್ಯೆ, ಸಮೀಕ್ಷೆ ಮಾಡಿಸಿದ್ದೀರಾ?**

12–13 ಜಿಲ್ಲೆಗಳಲ್ಲಿ ನಮ್ಮವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಜಿಲ್ಲೆಗಳಿಂದ ಸಂಗ್ರಹಿಸಿದ ಮಾಹಿತಿಗಳ ಪ್ರಕಾರ ನಮ್ಮ ಜನಸಂಖ್ಯೆ 95 ಲಕ್ಷದಿಂದ 1 ಕೋಟಿ ಇದೆ. ಹಿಂದಿನ ಸರ್ಕಾರ ನಾಮಕಾವಸ್ತೆ ಜಾತಿಗಣತಿ ಮಾಡಿದೆ. ವೈಜ್ಞಾನಿಕವಾಗಿ ಆಗಿಲ್ಲ. ನನ್ನ ಮನೆ, ಊರಿಗೆ ಸಮೀಕ್ಷೆಗೆ ಬಂದಿಲ್ಲ. ನಮ್ಮೂರಲ್ಲಿ ಶೇ 90ರಷ್ಟು ಒಕ್ಕಲಿಗರಿದ್ದೇವೆ. ಎಲ್ಲರೂ ರೈತಾಪಿ ವರ್ಗದವರು. ಈ ವರದಿಯ ಹಿಂದೆ ರಾಜಕೀಯ ಪಿತೂರಿ ಇದೆ. ಒಂದು ಸಮುದಾಯಕ್ಕೆ ಮಹತ್ವ ಕೊಡುವ ಉದ್ದೇಶದಿಂದ ವರದಿ ಸಿದ್ಧಪಡಿಸಲಾಗಿದೆ. ಕಾಂತರಾಜ ಆಯೋಗದ ಈ ವರದಿಯನ್ನು ತಡೆಹಿಡಿಯಬೇಕು ಎನ್ನುವುದು ನಮ್ಮ ಬೇಡಿಕೆಯಲ್ಲಿದೆ. ಹೊಸತಾಗಿ ಜಾತಿಗಣತಿ ಮಾಡಬೇಕು.

● **ಸರ್ಕಾರ ಸ್ಪಂದಿಸದಿದ್ದರೆ ಮುಂದಿನ ಹೋರಾಟ ಹೇಗೆ?**

ಎಲ್ಲ ಕಡೆ ನಮ್ಮ ಸಮುದಾಯದ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದೇವೆ. ರಾಜಕೀಯವಾಗಿ ಹೋರಾಟ ಮಾಡಿ ಗುಂಪುಗಾರಿಕೆಗೆ ಅವಕಾಶ ಮಾಡಿಕೊಡುವ ಬದಲು, ಸ್ವಾಮೀಜಿಗಳ ನೇತೃತ್ವದಲ್ಲಿ ಹೋರಾಟ ಮಾಡುತ್ತೇವೆ. ಮೀಸಲಾತಿ ಪ್ರಮಾಣ ಹೆಚ್ಚಿಸುವ ವಿಚಾರದಲ್ಲಿ ರಾಜ್ಯ– ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ರಾಜಕೀಯ ಪ್ರತಿನಿಧಿಗಳು ಒತ್ತಡ ಹೇರಬೇಕು. ಅದು ಸಾಧ್ಯವಾಗದೇ ಇದ್ದರೆ, ಶಾಸಕರು, ಸಚಿವರಿಗೆ ಬುದ್ದಿ ಕಲಿಸುವ ಕಾಲವೂ ಬರಬಹುದು.



● **ಯಾವುದೇ ಸರ್ಕಾರ ಬಂದರೂ ಒಕ್ಕಲಿಗ ಸಮುದಾಯದವರು ಪ್ರಮುಖ ಸ್ಥಾನಗಳಲ್ಲಿರುತ್ತಾರೆ. ಸಂಸದರು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಕೇಂದ್ರದ ಮೇಲೆ ಒತ್ತಡ ಹಾಕಬಹುದಲ್ಲ?**

ರಾಜ್ಯ ಸರ್ಕಾರದ ಉಪ ಮುಖ್ಯಮಂತ್ರಿ, ಸಚಿವರು ನಮ್ಮ ಬೇಡಿಕೆಯ ಮನವಿ ಪಡೆದುಕೊಂಡಿದ್ದಾರೆ. ಅವರು ಸ್ಪಂದಿಸುವ ನಿರೀಕ್ಷೆ ಇದೆ. ಸ್ಪಂದಿಸದೇ ಇದ್ದರೆ ಮುಂದಿನ ದಿನಗಳಲ್ಲಿ ಏನು ಮಾಡಬೇಕೆಂದು ಯೋಚನೆ ಮಾಡುತ್ತೇವೆ. ಕೇಂದ್ರದ ಮೇಲೂ ಒತ್ತಡ ತರುತ್ತೇವೆ. ಹಿಂದೆ ಬಾಲಗಂಗಾಧರನಾಥ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ ಶೇ 4ರಷ್ಟು ಮೀಸಲಾತಿ ಸಿಕ್ಕಿದೆ. ಆದರೆ, ನಮ್ಮ ಜೊತೆ ಬೇರೆ ಸಮುದಾಯಗಳನ್ನೂ ಸೇರಿಸಿರುವುದರಿಂದ ಹೆಚ್ಚೆಂದರೆ ಶೇ 3ರಷ್ಟು ಸಿಗಬಹುದು. ಅಂದರೆ, ಶೇ 15ರಿಂದ ಶೇ 17ರಷ್ಟು ಜನಸಂಖ್ಯೆ ಇರುವ ಸಮುದಾಯಕ್ಕೆ ಶೇ 3ರಷ್ಟು ಮೀಸಲಾತಿ ಅಷ್ಟೆ. 115 ಪಂಗಡಗಳಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಪರಿಸ್ಥಿತಿ ಆಧರಿಸಿ ಕೆಲವು ಪಂಗಡಗಳನ್ನು 2ಎ, ಪ್ರವರ್ಗ 1 ಮತ್ತು 3ಬಿಗೆ ಸೇರಿಸಲಾಗಿದೆ. ರಾಜ್ಯದ ಇತರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ (ಒಬಿಸಿ) ಕೇವಲ 33 ಪಂಗಡಗಳು ಮಾತ್ರ ಸೇರಿವೆ. ಒಕ್ಕಲಿಗ ಸಮುದಾಯದ ಎಲ್ಲ 115 ಪಂಗಡಗಳನ್ನು ಸೇರಿಸಿಲ್ಲ.

ನಾಗರಾಜ್

‘ನಮ್ಮದು ಜಾತಿವಾದವಲ್ಲ. ಜಾತ್ಯತೀತ ಬೇಡಿಕೆ’

ಎಲ್.ಎನ್. ಮುಕುಂದರಾಜ್
ನಿವೃತ್ತ ಅಧ್ಯಾಪಕ ಮತ್ತು ನಾಟಕಕಾರ

● **ಒಕ್ಕಲುತನವನ್ನೇ ನಂಬಿದ ಒಕ್ಕಲಿಗರ ಸಾಂಸ್ಕೃತಿಕ ಅನನ್ಯತೆಗಳೇನು?**

ಒಕ್ಕಲುತನ ಎನ್ನುವುದೇ ನೆಲ ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿರುವಂಥದ್ದು. ಸಾಂಸ್ಕೃತಿಕ ವೈಶಿಷ್ಟ್ಯ ಬಹಳಷ್ಟಿದೆ. ಆದರೆ, ಅವೆಲ್ಲವೂ ಸಮುದಾಯದ ಸ್ಮೃತಿಪಟಲದಿಂದ ಮರೆಯಾಗುತ್ತಿವೆ. ಅವನ್ನು ಮತ್ತೆ ನೆನಪಿಸಿ, ಜಾಗೃತಗೊಳಿಸುವ ಸಮಯ ಬಂದಿದೆ. ಮಹಾಕವಿ ಕುವೆಂಪು ಅವರು ಸಾಂಸ್ಕೃತಿಕವಾಗಿ ಜೀವಶಕ್ತಿ ತುಂಬಿದ್ದರು. ವಿಶ್ವ ಮಾನವತೆಯ ಪಾಠ ಬೋಧಿಸಿದ್ದರು. ಆ ಶಕ್ತಿ ಮತ್ತೆ ಬರಬೇಕಿದೆ. ರಾಜಕಾರಣದಲ್ಲೂ ಸಮುದಾಯ ಎತ್ತರದ ಸ್ಥಾನದಲ್ಲಿದೆ. ಹಳ್ಳಿ ರೈತನೊಬ್ಬ ಈ ದೇಶದ ಅತ್ಯುನ್ನತ ಸ್ಥಾನವಾದ ಪ್ರಧಾನಿ (ದೇವೇಗೌಡ) ಪಟ್ಟಕ್ಕೆ ಏರಿದ್ದೂ ಇತಿಹಾಸವೇ.


● **ಪ್ರಗತಿಪರ ಚಿಂತಕ, ಜಾತ್ಯತೀತರೆಂದು ಗುರುತಿಸಿಕೊಂಡವರು. ಈಗ ಜಾತಿಯ ಹೋರಾಟ?**

ನಿಜ. ಬಹಳ ಜನ ಸಾಮಾಜಿಕ ಜಾಲತಾಣಗಳಲ್ಲಿ ಈ ಪ್ರಶ್ನೆ ಕೇಳಿದ್ದಾರೆ. ಜಾತಿ ರಾಜಕಾರಣ ಮಾಡಲು ನಾನು ಹೋರಾಟದಲ್ಲಿ ಭಾಗಿಯಾಗಿಲ್ಲ. ಹಳ್ಳಿಯಲ್ಲಿದ್ದ ನಾನು ದೇವರಾಜ ಅರಸು ಆಡಳಿತಾವಧಿಯ ಹಾವನೂರು ಆಯೋಗದ ವರದಿ ಪರಿಣಾಮ ಸರ್ಕಾರಿ ಹುದ್ದೆ ಪಡೆದೆ. ಹೀಗಾಗಿ, ಜಾತಿಯಿಂದ ಲಾಭ ಪಡೆದಿಲ್ಲವೆಂದರೂ ತಪ್ಪಾಗುತ್ತದೆ. ಮೀಸಲಾತಿ ಕಂಡರೆ ಆಗಲ್ಲ ಎಂದು ಹೇಳುವುದೂ ಮೂರ್ಖತನವಾಗುತ್ತದೆ. ಒಕ್ಕಲಿಗರ ಸ್ವಭಾವವೇ ಎಲ್ಲರನ್ನೂ ಒಳಗೊಳ್ಳುವುದು. ಅದು ವಿಶ್ವ ಮಾನವ ಪ್ರಜ್ಞೆ– ಜಾತ್ಯತೀತ ನಿಲುವು. ಒಕ್ಕಲಿಗ ಎನ್ನುವುದು ಜಾತಿಯಲ್ಲ. ಅದೊಂದು ಪ್ರಜ್ಞೆ. ಸಮುದಾಯ ಶೋಷಣೆಗೆ ಒಳಗಾಗುತ್ತಿದೆ ಎಂದಾಗ ನಮ್ಮಂಥವರು ಸುಮ್ಮನೆ ಕುಳಿತುಕೊಳ್ಳುವುದು ಸರಿಯೇ? ವಾಲ್ಮೀಕಿ, ಕುರುಬ, ಪಂಚಮಸಾಲಿ ಸಮುದಾಯದ ಹೋರಾಟಗಳಲ್ಲಿ ನನ್ನಂಥವರು (ಪ್ರಗತಿಪರರು) ಯಾರೂ ಇಲ್ಲ. ಇಲ್ಲಿನ ಹೋರಾಟ ಸಮತೋಲನದಲ್ಲಿ ನಡೆಯಬೇಕಿದೆ. ನಾವು ಕೇಳುವ ಮೀಸಲಾತಿ ಸೂತ್ರದಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಜನಸಂಖ್ಯೆ ಆಧಾರದಲ್ಲಿ ಬ್ರಾಹ್ಮಣರಿಗೂ ಕೊಡಿ, ಜಾತ್ಯತೀತರಿಗೂ ಮೀಸಲಾತಿ ಕೊಡಲಿ.

ರಾಜೇಶ ರೈ ಚಟ್ಲ

● **ಅಂದರೆ, ಒಕ್ಕಲಿಗ ಸಮುದಾಯದ ಬೇಡಿಕೆ ನ್ಯಾಯಯುತವೆಂದೇ...**

ಮೀಸಲಾತಿ ಪ್ರಮಾಣದ ಹಂಚಿಕೆ ನ್ಯಾಯಯುತವಾಗಿ ಇರಬೇಕು ಎನ್ನುವುದೇ ಹೋರಾಟದ ಉದ್ದೇಶ. ಶೇ 17ರಷ್ಟಿರುವ ಸಮುದಾಯದ ಜನಸಂಖ್ಯೆಗೆ ಮೀಸಲಾತಿ ಪ್ರಮಾಣ ಶೇ8.5ರಷ್ಟು ಇರಲೇಬೇಕು. ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಶೇ 50ರ ಮೀಸಲಾತಿ ಪ್ರಮಾಣ ಮೀರಿದರೆ ಈ ಪ್ರಮಾಣವೂ ಹೆಚ್ಚಬೇಕು. ಒಕ್ಕಲಿಗ ಸಮುದಾಯಕ್ಕೆ ನ್ಯಾಯ ಸಿಕ್ಕಿದರೆ ಎಲ್ಲ ಸಮುದಾಯಗಳಿಗೂ ನ್ಯಾಯ ಸಿಕ್ಕಂತೆ.



● **ಕೇಂದ್ರದ ಕಾಯ್ದೆಗಳು ಒಕ್ಕಲುತನಕ್ಕೆ ಧಕ್ಕೆ ತರುವಂತಿವೆ. ರೈತ ಹೋರಾಟಕ್ಕೂ ಸಾಥ್ ನೀಡಬೇಕಿತ್ತೆಂದು ಅನಿಸುವುದಿಲ್ಲವೇ?**

‘ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲ’ ಎನ್ನವುದು ವಾಸ್ತವ. ಮನುಕುಲಕ್ಕೆ ಅನ್ನ ನೀಡುವವನು ಒಕ್ಕಲಿಗ. ಪ್ರತಿ ರೈತ ಹೋರಾಟಗಾರನೂ ಒಕ್ಕಲುತನವನ್ನೇ ಅವಲಂಬಿಸಿದವನು. ಪಂಜಾಬ್‌ನ ರೈತನೂ ಒಕ್ಕಲಿಗ, ಬಿಹಾರದಲ್ಲಿ ಹೊಲ ಇದ್ದರೆ ಅವನೂ ಒಕ್ಕಲಿಗನೇ. ನಮ್ಮದು (ಒಕ್ಕಲಿಗರದ್ದು) ವಿಶ್ವ ಪ್ರಜ್ಞೆ ಎಂದು ಹೇಳುವುದು ಇದಕ್ಕೇ. ರೈತ ಜನಾಂಗವನ್ನೂ ಸಂಘಟಿಸಬೇಕಾಗಿದೆ. ಆ ಸಮುದಾಯ ನೆಮ್ಮದಿಯಿಂದ ಇರಬೇಕು. ದೆಹಲಿಯಲ್ಲಿ ನಡೆಯುತ್ತಿರುವ ಹೋರಾಟವನ್ನು ಅವಗಣನೆ ಮಾಡುತ್ತಿರುವುದು ನೋವಿನ ಸಂಗತಿ. ನಮ್ಮ ಬುಡಕ್ಕೆ ಬೆಂಕಿ ಬಿದ್ದಾಗ ನಾವೂ ಎದ್ದು ನಿಲ್ಲುತ್ತೇವೆ. ಜಾತ್ಯತೀತರು ಎಂದು ಹಣೆಬರಹ ಕಟ್ಟಿಕೊಂಡು ಜಾತಿವಾದಿಗಳಾಗಿ ಓಡಾಡಿದರೆ ಅರ್ಥವಿಲ್ಲ. ಎಲ್ಲರ ಸಮಸ್ಯೆಗಳಿಗೆ, ಸಂಕಟಗಳಿಗೆ ಧ್ವನಿಯಾಗುವ ಕೆಲಸ ಮಾಡಬೇಕು.

ಮುಕುಂದರಾಜ್

● **ಎಲ್ಲ ಉಪ ಪಂಗಡಗಳಿಗೂ ಪ್ರಾತಿನಿಧ್ಯ ಸಿಕ್ಕಿಲ್ಲ ಎಂದೇ...**

ಪ್ರಾತಿನಿಧ್ಯವೇ ಸಿಕ್ಕಿಲ್ಲ ಎಂದಲ್ಲ. ಒಕ್ಕಲುತನವನ್ನೇ ನಂಬಿದವರಿಗೆ ಸಿಕ್ಕಿಲ್ಲ. ನಗರ ಕೇಂದ್ರಿತ ರಾಜಕೀಯ ಮಾಡಿಕೊಂಡು ಬಂದ ಕೆಲವೇ ಪಂಗಡಗಳು ಅವಕಾಶ ಗಿಟ್ಟಿಸಿಕೊಂಡಿವೆ. ಸಮಗ್ರ ಅಭಿವೃದ್ಧಿ ಎಂದಾದಾಗ 115 ಉಪ ಜಾತಿಗಳೂ ಎಲ್ಲಿವೆ, ಸ್ಥಿತಿ ಏನಿದೆ ಎನ್ನುವುದು ಮುಖ್ಯವಾಗುತ್ತದೆ. ನಮ್ಮದು ಆ ದಿಸೆಯಲ್ಲಿನ ಆಲೋಚನೆ. ಒಳ ಮೀಸಲಾತಿ ಎನ್ನುವ ಪದ ಹುಟ್ಟಿಕೊಂಡಿದ್ದೇ ದೇವೇಗೌಡರಿಂದ. ಒಕ್ಕಲಿಗ ಒಂದಲ್ಲ, ಎಲ್ಲ ಸಮುದಾಯದ ಎಲ್ಲ ಉಪ ಪಂಗಡಗಳಿಗೂ ಹಂಚಿಕೆಯಾಗಬೇಕೆಂಬ ಕಾರಣಕ್ಕೇ ಒಳ ಮೀಸಲಾತಿ ಪರಿಕಲ್ಪನೆ ಮೂಡಿದೆ. ಆ ಮೂಲಕ, ಕೇವಲ ಶೇ 0.1, ಅಂದರೆ 5 ಲಕ್ಷ ಜಸಂಖ್ಯೆ ಇರುವ ಸಮುದಾಯಕ್ಕೂ ಅನುಕೂಲ ಆಗಬೇಕು. ಬಸವಣ್ಣ, ಕುವೆಂಪು, ಅಂಬೇಡ್ಕರ್, ಬುದ್ಧನ ಚಿಂತನೆಯಲ್ಲಿ ಇದ್ದಿದ್ದೂ ಅದೇ. ತಬ್ಬಲಿಗಳೂ ಶಕ್ತಿಶಾಲಿಗಳಾಗಬೇಕು. ಈ ದೇಶವನ್ನು ಕಟ್ಟಿದವರು ಶ್ರಮಿಕರು. ಅವರೆಲ್ಲ ತಳ ಸಮುದಾಯದವರು, ಕೆಳಜಾತಿಯವರು. ಅವರ ವಂಶಸ್ಥರಿಗೆ, ರಕ್ತ ಸಂಬಂಧಿಗಳಿಗೆ ಏನೂ ಇಲ್ಲವೆಂದರೆ ಪರಮ ಅನ್ಯಾಯವಾಗುತ್ತದೆ, ಮನುಷ್ಯ ದ್ರೋಹವಾಗುತ್ತದೆ.

● **ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವರದಿಯನ್ನು ರಾಜ್ಯ ಸರ್ಕಾರ ಮೊದಲು ಸ್ವೀಕರಿಸಲಿ. ಅದು ಸರಿ ಇಲ್ಲ ಎಂದೆನಿಸಿದರೆ ವಿರೋಧಿಸಬಹುದಿತ್ತಲ್ಲವೇ?**

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮಾಡಿಸಿದ್ದ ವರದಿಯನ್ನು ಅವರ ಸರ್ಕಾರವೇ ಸ್ವೀಕರಿಸಬಹುದಿತ್ತು. ಬಳಿಕ ಬಂದ ಕುಮಾರಸ್ವಾಮಿ ನೇತೃತ್ವದ ಸರ್ಕಾರ ಕೂಡಾ ಆ ಕೆಲಸ ಮಾಡಿಲ್ಲ. ಯಡಿಯೂರಪ್ಪ ನೇತೃತ್ವದ ಸರ್ಕಾರ ಕೂಡಾ ವರದಿ ಸ್ವೀಕರಿಸಿಲ್ಲ. ಆದರೆ, ಅದರಲ್ಲಿರುವ ಅಂಶಗಳು ಈಗಾಗಲೇ ಸೋರಿಕೆಯಾಗಿವೆ. ಹಾಗಿದ್ದರೆ, ಸೋರಿಕೆ ಹಿಂದಿನ ತಂತ್ರವೇನು. ವರದಿ ಸರಿ ಇಲ್ಲ ಎನ್ನುವುದು ಈಗಾಗಲೇ ಗೊತ್ತಾಗಿಬಿಟ್ಟಿದೆ. ಹಾಗಿದ್ದ ಮೇಲೆಯೂ ಸ್ವೀಕರಿಸುವುದರಲ್ಲಿ ಅರ್ಥವೇನು? ಕೆಟ್ಟ ಅಡುಗೆ ಮಾಡಿದ್ದನ್ನು ತಿಂದು ಆರೋಗ್ಯ ಕೆಡಿಸಿಕೊಳ್ಳಬೇಕೇ? ಹೊಸತಾಗಿ, ವೈಜ್ಞಾನಿಕವಾಗಿ ಸಮೀಕ್ಷೆ ಮಾಡಿಸುವುದೇ ಸೂಕ್ತ.

● **ಕೇಂದ್ರ ಸರ್ಕಾರ ಶೇ 10ರಷ್ಟು ಮೀಸಲಾತಿ ಘೋಷಿಸಿದಾಗ ಒಬ್ಬರೂ ಮಾತನಾಡಿಲ್ಲವಲ್ಲ?**

ನಿಜ. ಯಾರೂ ಧ್ವನಿ ಎತ್ತಿಲ್ಲ. ಅಷ್ಟರಮಟ್ಟಿಗೆ ಕೇಂದ್ರ ಸರ್ಕಾರ ಎಲ್ಲರ ಬಾಯಿಗೆ ಬಟ್ಟೆ ಕಟ್ಟಿ ಮೀಸಲಾತಿ ಘೋಷಿಸಿದೆ. ಆ ಮೂಲಕ ಜಾಣತನ ಮೆರೆದಿದೆ. ನಾವು ಮೀಸಲಾತಿಗಾಗಿ ಹೋರಾಟ ಮಾಡಿಕೊಂಡು ಬಂದೆವು. ಈಗ ಸಿಕ್ಕಿರುವುದನ್ನು ಬೀದಿಯಲ್ಲಿ ನಿಂತು ಕಿರುಚಾಡಿ ಪಡೆದುಕೊಂಡಿದ್ದೇವೆ.

● **ಮೀಸಲಾತಿ ಅಷ್ಟು ಸುಲಭದ ತುತ್ತಲ್ಲ ಅಲ್ಲವೇ?**

ಹೌದು. ಆ ಪ್ರಜ್ಞೆ (ಮೀಸಲಾತಿ) ಜಾಗೃತಿಗೊಳಿಸುವ ಕೆಲಸ ಮೊದಲ ಆಗಬೇಕು. ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು ಎನ್ನುವುದು ನಮ್ಮ ಬೇಡಿಕೆ– ಹೋರಾಟ. ಅದರ ನೇತೃತ್ವವನ್ನು ಸ್ವಾಮೀಜಿಗಳು ವಹಿಸುತ್ತಾರೆ. ನಾವೆಲ್ಲರೂ (ಸಮುದಾಯದವರು) ಹಿಂದೆ ಇರುತ್ತೇವೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ ‘ಕಾಂಗ್ರೆಸ್ ಆರಂಭದ ದಿನದಿಂದಲೂ ಮುಸ್ಲಿಮರನ್ನು ಓಲೈಸುತ್ತಿತ್ತು. ಈಗಲೂ ಮುಸ್ಲಿಮರನ್ನು ಓಲೈಸುತ್ತಿದೆ. 1982ರ ಏಷ್ಯನ್ ಗೇಮ್ಸ್ ವೇಳೆ ಇಂದಿರಾ ಗಾಂಧಿ ಸರ್ಕಾರವು ಏಷ್ಯನ್ ಗೇಮ್ಸ್‌ನ ಅಂಚೆಚೀಟಿಯನ್ನು ಬಿಡುಗಡೆ ಮಾಡಿತ್ತು. ಗಡ್ಡಧಾರಿ ಮುಸ್ಲಿಂ ಕುಸ್ತಿಪಟು, ಜುಟ್ಟು ಇರುವ ಬ್ರಾಹ್ಮಣ ಕುಸ್ತಿಪಟುವನ್ನು ಎತ್ತಿ ಒಗೆಯುತ್ತಿರುವ ಚಿತ್ರವನ್ನು ಅಂಚೆಚೀಟಿಯಲ್ಲಿ ಬಳಸಲಾಗಿತ್ತು. ಮುಸ್ಲಿಂ ಕುಸ್ತಿಪಟು, ಬ್ರಾಹ್ಮಣ ಕುಸ್ತಿಪಟುವನ್ನು ಸೋಲಿಸುತ್ತಿರುವಂತಹ ಚಿತ್ರವನ್ನು ಬಳಸಿ ಇಂದಿರಾ ಗಾಂಧಿ ಸರ್ಕಾರವು ಮುಸ್ಲಿಮರನ್ನು ಓಲೈಕೆ ಮಾಡಿತ್ತು. ಹಿಂದೂಗಳಿಗೆ ಅವಮಾನ ಮಾಡಿತ್ತು’ ಎಂಬ ಟ್ವೀಟ್‌ನ ಸ್ಕ್ರೀನ್‌ಶಾಟ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಒಂದೇ ರೀತಿಯ ಬರಹ ಇರುವ ಟ್ವೀಟ್‌ಗಳನ್ನು ಹಲವರು ಟ್ವೀಟ್ ಮಾಡಿದ್ದಾರೆ. ಅಂಚೆಚೀಟಿಯ ಚಿತ್ರವನ್ನೂ ಹಂಚಿಕೊಂಡಿದ್ದಾರೆ.



✓ ಈ ಟ್ವೀಟ್‌ಗಳಲ್ಲಿ ಇರುವಂತೆ ಹಿಂದೂಗಳನ್ನು ಅವಮಾನ ಮಾಡುವಂತಹ ಚಿತ್ರವನ್ನು ಅಂಚೆಚೀಟಿಯಲ್ಲಿ ಬಳಸಿಲ್ಲ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಅಂಚೆಚೀಟಿಯಲ್ಲಿ ಇರುವ ಚಿತ್ರದಲ್ಲಿ ಇಬ್ಬರು ಕುಸ್ತಿಪಟುಗಳಿಗೂ ಜುಟ್ಟು ಇದೆ. ಹೀಗಾಗಿ ಇಬ್ಬರ ಧರ್ಮ ಯಾವುದು ಎಂದು ತಿಳಿಯುವುದಿಲ್ಲ. ಜತೆಗೆ ಈ ಚಿತ್ರವನ್ನು ದೆಹಲಿಯ ನ್ಯಾಷನಲ್ ಮ್ಯೂಸಿಯಂನಲ್ಲಿರುವ, ಜಾನಕಿ ಅವರ ಚಿತ್ರದಿಂದ ಸ್ಫೂರ್ತಿ ಪಡೆದು ಚಿತ್ರಿಸಲಾಗಿತ್ತು. ಅಂಚೆಚೀಟಿಯಲ್ಲಿರುವ ಚಿತ್ರವನ್ನು ಕಲಾವಿದ ಎ.ರಾಮಚಂದ್ರನ್ ಅವರು ರಚಿಸಿದ್ದರು ಎಂದು ದಿ ಲಾಜಿಕಲ್ ಇಂಡಿಯನ್ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಸೌಂದರ್ಯ ಬಾಂಧವ್ಯಗಳ ಬಂಧ

ಸೌಂದರ್ಯ ಬಾಂಧವ್ಯಗಳನು ಬರಿದೆನಲಹುದೆ? |
ಹೊಂದಿಸವೆ ಕುಂದಿಸವೆ ಜೀವಿಗಳನುವುಗಳ್ ? ||
ಸಿಂಧುಪೂರದಿ ಬಿದ್ದವರೊಳೊಬ್ಬರೊಬ್ಬರನು |
ಅಂದಿಕೊಳಲದು ಬರಿದೆ ? – ಮಂಕುತಿಮ್ಮ
|| 392 ||

ಪದ-ಅರ್ಥ: ಬರಿದೆನಲಹುದೆ = ಬರಿದು (ಅರ್ಥಹೀನ) + ಎನಲು + ಅಹುದೆ, ಜೀವಿಗಳನ-ವುಗಳ್ = ಜೀವಿಗಳನು + ಅವುಗಳ್(ಅವುಗಳನ್ನು), ಸಿಂಧುಪೂರದಿ = ಸಿಂಧು(ಸಮುದ್ರ) + ಪೂರದಿ (ಪ್ರವಾಹ, ಆಳ), ಅಂದಿಕೊಳಲದು = ಅಂದಿಕೊಳಲು(ಹಿಡಿದುಕೊಳ್ಳಲು) + ಅದು.

ವಾಚ್ಯಾರ್ಥ: ಬದುಕಿನ ಸೌಂದರ್ಯ, ಬಾಂಧವ್ಯಗಳನ್ನು ಅರ್ಥಹೀನವೆನ್ನಬಹುದೆ? ಅವು ಜೀವಿಗಳನ್ನು ಹೊಂದಿಸುತ್ತವೆ, ಬೇರ್ಪಡಿಸುತ್ತವೆ. ಸಮುದ್ರದಾಳದಲ್ಲಿ ಬಿದ್ದು ಪ್ರಾಣಭಯದಿಂದ ಒದ್ದಾಡುತಿರುವ ಜೀವಿಗಳು ಒಬ್ಬರನ್ನೊಬ್ಬರು ಹಿಡಿದುಕೊಳ್ಳುವುದು ನಿರರ್ಥಕವೆ?

ವಿವರಣೆ: ನಾಲ್ಕು ಜನ ಪರ್ವತಾರೋಹಿಗಳು ಹಿಮಾಲಯದ ಕೆಲವು ಶಿಖರಗಳನ್ನೇರಲು ಹೊರಟರು. ಶಿಖರಗಳ ಹತ್ತಿರ ವಿಪರೀತ ಹಿಮಪಾತವಾಗಿತ್ತು. ಬಿರುಗಾಳಿ, ಚಳಿಯಾದ ಗಾಳಿ ಬೀಸತೊಡಗಿತ್ತು. ಮತ್ತೆ ಹಿಮಪಾತ ಯಾವ ಮಟ್ಟದ್ದಾಯಿತೆಂದರೆ, ಅವರಿಗೆ ಮುಂದಿನ ದಾರಿ ಕಾಣದಂತೆ ಕ್ಷಣಕ್ಷಣಕ್ಕೂ ರಾಶಿರಾಶಿ ಹಿಮ ಬೀಳುತ್ತಿತ್ತು. ಕಾಲುಗಳು ಮೊಳಕಾಲು ಮಟ್ಟದವರೆಗೆ ಹೂತು ಹೋಗುತ್ತಿದ್ದವು. ಗಾಳಿಯ ವೇಗಕ್ಕೆ ಯಾವ ಡೇರೆಯೂ ನಿಲ್ಲಲಿಲ್ಲ. ಅವರಿಗೆ ಈಗ ಬದುಕಿ ಉಳಿಯುವ ಆಸೆ ನೀಗಿಹೋಯಿತು. ಒಬ್ಬಾತ ತಿರುಗಿ ನೋಡಿದ. ಅವರ ಜೊತೆಗಾರರು ಯಾರೂ ಕಾಣುತ್ತಿಲ್ಲ. ಕೂಗಿದ, ಮರುದನಿಯಿಲ್ಲ. ಅವರೆಲ್ಲ ಹಿಮದಲ್ಲಿ ಹೂತುಹೋದರೋ ಎಂಬ ಭ್ರಮೆ ಬಂದಿತು. ಮುಂದಕ್ಕೆ ನಡೆದು ಏನನ್ನೋ ಎಡವಿ ಧೊಪ್ಪನೆ ಬಿದ್ದ. ತಾನು ಎಡವಿದ್ದು ಏನನ್ನು ಎಂದು ನೋಡಲು ಹಿಮವನ್ನು ಸರಿಸಿದಾಗ ಅದರ ಕೆಳಗೆ ಅವನ ಸ್ನೇಹಿತ ! ಅಂಗಾತ್ತಾಗಿ ಬಿದ್ದಿದ್ದಾನೆ, ಮೈಮೇಲೆ ಆರು ಇಂಚು ಹಿಮವಿದೆ. ಈಗ ಅವನ ಮುಂದೆ ಎರಡು ಆಯ್ಕೆಗಳು. ಒಂದು ಅಲ್ಲಿಂದ ನಡೆದು ಹೋಗಿ ಕ್ಯಾಂಪ್ ಸೇರಿಕೊಳ್ಳುವುದು. ಇನ್ನೊಂದು ಗೆಳೆಯನಿಗೆ ಸಹಾಯ ಮಾಡುವುದು. ಆದರೆ ಹಾಗೆ ಮಾಡುವಲ್ಲಿ ತಾನೇ ಸತ್ತು ಹೋಗಬಹುದು. ಆತ ಎರಡನೆಯದನ್ನು ಆಯ್ಕೆ ಮಾಡಿಕೊಂಡ. ಗೆಳೆಯನ ಮೇಲೆ ಬಿದ್ದಿದ್ದ ಹಿಮವನ್ನು ಸರಿಸಿದ. ತನ್ನ ಕೈಗಳಿಂದ ಗೆಳೆಯನ ಕೈಗಳನ್ನು ರಭಸದಿಂದ ಉಜ್ಜತೊಡಗಿದ. ಮೊಳಕಾಲೂರಿ ಅವನ ಪಾದಗಳನ್ನು ಉಜ್ಜಿದ. ಅವನ ಹಣೆಯ ಮೇಲೆ ಬೆವರು ಕಿತ್ತಿಕೊಂಡು ಬಂದಿತು. ಹದಿನೈದು ನಿಮಿಷಗಳ ನಂತರ ಗೆಳೆಯ ಕಣ್ಣು ತೆರೆದ, ಎದ್ದು ನಿಂತ. ಇಬ್ಬರೂ ಒಬ್ಬರನ್ನೊಬ್ಬರು ತಬ್ಬಿಕೊಂಡು ಕ್ಯಾಂಪ್‌ಗೆ ಬಂದರು. ಗೆಳೆಯ ಹೇಳಿದ, ‘ಸ್ನೇಹಿತ, ನೀನು ನನಗೆ ಸಹಾಯ ಮಾಡದಿದ್ದರೆ ಸತ್ತೇ ಹೋಗುತ್ತಿದ್ದೆ’. ಇನ್ನೊಬ್ಬ ಹೇಳಿದ, ‘ಆದರೆ ಗೆಳೆಯಾ, ನಿನಗೆ ನಾನು ಹಾಗೆ ಮಾಡದಿದ್ದರೆ ನಾನೂ ಸತ್ತು ಹೋಗುತ್ತಿದ್ದೆ. ನಿನ್ನನ್ನು ಉಳಿಸಲು ನಾನು ಮಾಡಿದ ಶ್ರಮದಿಂದ ನನ್ನ ಮೈ ಬಿಸಿಯಾಗಿ ಬದುಕಿದೆ’. ಒಬ್ಬರು ಮತ್ತೊಬ್ಬರಿಗೆ ನೆರವಾದದ್ದೇ ಇಬ್ಬರ ಉಳಿವಿಗೆ ಕಾರಣವಾಗಿತ್ತು.

ಕಗ್ಗ ಹೇಳುತ್ತದೆ ಬದುಕಿನಲ್ಲಿ ದೊರೆಯುವ ಸೌಂದರ್ಯ, ಬರುವ ಬಾಂಧವ್ಯಗಳು ವ್ಯರ್ಥವಲ್ಲ. ಇವೇ ಜೀವಿಗಳನ್ನು ಒಂದಾಗಿಸುತ್ತವೆ. ಕೆಲವು ಬಾಂಧವ್ಯಗಳು ಸಂಬಂಧಗಳನ್ನು ಬೇರ್ಪಡಿಸಲೂಬಹುದು. ನಾವೆಲ್ಲ ಸಂಸಾರವೆಂಬ ಸಾಗರದಲ್ಲಿ ಒಟ್ಟಾಗಿ ಬಿದ್ದವರು. ಎಲ್ಲರೂ ಉಳಿವಿಕೆಗೇ ಪ್ರಯತ್ನಿಸುತ್ತಿರುವವರು. ಒಬ್ಬರು ಮತ್ತೊಬ್ಬರನ್ನು ಹಿಡಿದುಕೊಂಡು, ಸಹಾಯ, ಸಹಕಾರ ಮಾಡಿದರೆ ಎಲ್ಲರೂ ಸಂತೋಷವಾಗಿ ಉಳಿಯುವ ಅವಕಾಶಗಳು ಹೆಚ್ಚು. ಆದ್ದರಿಂದ ಈ ಸೌಂದರ್ಯ, ಸಂಬಂಧಗಳು ವ್ಯರ್ಥ, ಅರ್ಥಹೀನವಲ್ಲ. ❖

ದಿನ ಭವಿಷ್ಯ

ಮಂಗಳವಾರ 2 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಶತಭಿಷ ತೃತೀಯ ಗಂ. 5-35 (ಬೆ. 8-56) ಮಂಗಳವಾರ ನಿತ್ಯ ನಕ್ಷತ್ರ ಹಸ್ತ ಗಂ 4-59 (ಬೆ. 8-41) ಗಂಡ ನಾಮ ಯೋಗ ಗಂ 14-56 ಭದ್ರೆ ಕರಣ ಗಂ 5-35 ವಿಷ. ಗಂ. 23-42 ಅಮೃತ ಗಂ. 46-10: ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-39 ಸೂರ್ಯಾಸ್ತ: 6-25 ಅದೃಷ್ಟ ಸಂಖ್ಯೆ 2, 4

ಮೇಷ: ತೊಂದರೆ, ತಾಪತ್ರಯಗಳು ದೂರವಾಗಿ ಮಾನಸಿಕ ನೆಮ್ಮದಿ. ವಿಶೇಷ ಕಾರ್ಯಕ್ರಮದ ನಿಮಿತ್ತ ದೂರ ಪ್ರಯಾಣ ಮಾಡುವ ಸಾಧ್ಯತೆ ಕಂಡುಬರುತ್ತಿದೆ. ಗೆಳೆಯರೊಂದಿಗೆ ಸಂತಸದ ದಿನವನ್ನಾಗಿಸಿಕೊಳ್ಳುವಿರಿ.

ವೃಷಭ: ಹಿತ ಮಿತವಾದ ಮಾತುಗಳಿಂದಾಗಿ ಜನಮನ ಗೆಲ್ಲುವಿರಿ. ಜನಪ್ರತಿನಿಧಿಗಳಿಗೆ, ಮುಂದಾಳುಗಳಿಗೆ ಅತ್ಯಂತ ಯಶಸ್ಸನ್ನು ಕಾಣುವ ದಿನವಾಗಿ ಕಂಡುಬರುತ್ತಿದೆ. ನಿಮ್ಮ ಯಶಸ್ಸಿಗೆ ಕಾರಣರಾದವರನ್ನು ನೆನಪಿಸಿಕೊಳ್ಳಿ.

ಮಿಥುನ: ನಿಮ್ಮ ಬಹುದಿನದ ಬಯಕೆಯನ್ನು ವಿಶ್ವಾಸಿಕರಲ್ಲಿ ಸಮಾಲೋಚನೆಯ ಮೂಲಕ ಕಾರ್ಯರೂಪಕ್ಕೆ ತರಲಿದ್ದೀರಿ. ಇದರಿಂದ ಯಶಸ್ಸು ನಿಮ್ಮದಾಗಲಿದೆ. ಉದ್ಯೋಗ ವ್ಯವಹಾರದ ವಿಷಯದಲ್ಲಿ ಒಂದು ನಿರ್ಣಯಕ್ಕೆ ಬರಲಿದ್ದೀರಿ.

ಕರ್ಕಾಟಕ: ಕೆಟ್ಟ ಯೋಚನೆಗಳನ್ನು ಬಿಟ್ಟು ಉತ್ತಮ ಚಿಂತನೆಯನ್ನು ರೂಢಿಸಿಕೊಳ್ಳುವುದು ಉತ್ತಮ. ನಿಮ್ಮ ಹಳೆಯ ಯೋಜನೆಗಳನ್ನು ನವೀಕರಿಸುವ ಸಾಧ್ಯತೆ ಕಂಡುಬರುತ್ತಿದೆ. ಆಸ್ತಿಪಾಸ್ತಿಗಳ ಸುಧಾರಣೆಗೆ ಮುಂದಾಗುವಿರಿ.

ಸಿಂಹ: ಇಂದು ಅತ್ಯಂತ ಆತ್ಮವಿಶ್ವಾಸದಿಂದ ಕೆಲಸ–ಕಾರ್ಯಗಳನ್ನು ನಿರ್ವಹಿಸುವಿರಿ. ಪ್ರಭಾವಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳುವಿರಿ. ನಿಮ್ಮ ಇತಿಮಿತಿಗಳನ್ನು ಅರಿತು ಕಾರ್ಯನಿರ್ವಹಿಸುವುದು ಒಳಿತು.

ಕನ್ಯಾ: ಸಂತಸದ ದಿನವಾಗಿರುವುದು. ಜಾಣತನ ಮತ್ತು ನಿಮ್ಮ ಪ್ರತಿಭೆಗೆ ತಕ್ಕ ಪುರಸ್ಕಾರಗಳು ದೊರಕುವವು. ಮಿತಿ ಮೀರಿದ ಉತ್ಸಾಹದಿಂದ ತೊಂದರೆ ಎದುರಾದೀತು. ಯೋಚಿಸಿ ಮುಂದಡಿ ಇಡುವುದು ಉತ್ತಮ.

ತುಲಾ: ಉದ್ಯೋಗ/ ಉದ್ಯಮಗಳಿಗೆ ಸಂಬಂಧಿಸಿದಂತೆ ಆತ್ಮೀಯರೊಂದಿಗೆ ಸಮಾಲೋಚನೆ ನಡೆಸುವಿರಿ. ಆರ್ಥಿಕ ಅನುಕೂಲಕ್ಕಾಗಿ ಹೊಸ ಯೋಜನೆ ರೂಪಿಸುವ ಸಾಧ್ಯತೆ. ಹಿರಿಯರ ಆರೋಗ್ಯದ ಕಡೆ ಗಮನ ಅಗತ್ಯ.

ವೃಶ್ಚಿಕ: ಮುಂದಿನ ಯೋಜನೆಗಳ ಬಗ್ಗೆ ಚಿಂತನೆ ನಡೆಸಲಿದ್ದೀರಿ. ಹಣಕಾಸಿನ ವಿಚಾರದಲ್ಲಿ ಹಿಡಿತವನ್ನು ಕಂಡುಕೊಳ್ಳುವಿರಿ. ಅತ್ಯಂತ ಗಮನಾರ್ಹವಾದ ಸಾಧನೆಗಾಗಿ ಶ್ರಮಿಸುವಿರಿ. ದೂರದ ಪ್ರಯಾಣದ ಸಾಧ್ಯತೆ.

ಧನು: ನಿಮ್ಮನ್ನು ಅವಲಂಬಿಸಿರುವವರಿಗೆ ಭರವಸೆಯನ್ನು ಮೂಡಿಸುವಿರಿ. ರಕ್ಷಣಾ ಕಾರ್ಯಗಳಲ್ಲಿರುವವರು ಉತ್ತಮ ಮಾನ್ಯತೆ ಗಳಿಸುವ ಸಾಧ್ಯತೆ. ಆತಂಕಗಳೆಲ್ಲವೂ ದೂರವಾಗಿ ಸ್ಥಿರ ಮನಸ್ಸಿನಿಂದ ಸಂತಸ ಹೊಂದುವಿರಿ.

ಮಕರ: ಕೈಬಿಟ್ಟ ಕಾರ್ಯದಲ್ಲಿ ಅನಿರೀಕ್ಷಿತವಾಗಿ ಅವಕಾಶ ದೊರೆತು ಯಶಸ್ಸು. ವಿವಾಹಾದಿ ಮಂಗಳ ಕಾರ್ಯಗಳ ಪ್ರಸ್ತಾಪ ಮಾಡಲಿದ್ದೀರಿ. ಹಣಕಾಸಿನ ವಿಚಾರದಲ್ಲಿ ಸ್ವಲ್ಪ ಮಟ್ಟಿನ ಅಡಚಣೆ ತಲೆದೋರುವ ಸಾಧ್ಯತೆ.

ಕುಂಭ: ವಿದ್ಯಾಭ್ಯಾಸದಲ್ಲಿ ತೊಡಗಿರುವವರಿಗೆ ಉತ್ತಮ ಪ್ರಗತಿ. ಯೋಜಿತ ಕಾರ್ಯಗಳಲ್ಲಿನ ಆತಂಕಗಳು ದೂರವಾಗಿ ಯಶಸ್ಸು. ಉದರ ಸಂಬಂಧಿ ತೊಂದರೆಗಳು ಎದುರಾಗುವ ಸಾಧ್ಯತೆ ಕಂಡುಬರುತ್ತಿದೆ.

ಮೀನ: ಒಂದು ವಿಷಯದ ಬಗ್ಗೆ ಅನೇಕ ಬಾರಿ ಯೋಚಿಸಿ, ಚರ್ಚಿಸಿ ತೀರ್ಮಾನ ಕೈಗೊಳ್ಳಲಿದ್ದೀರಿ. ನಿಮ್ಮ ನಿರ್ಧಾರವು ಹುಸಿಯಾಗದೇ ಫಲ ನೀಡುವುದು. ಯೋಜನೆಯ ಕುರಿತು ಹೆಚ್ಚಿನ ಜ್ಞಾನಕ್ಕಾಗಿ ಅನ್ಯರೊಂದಿಗೆ ಚರ್ಚಿಸುವ ಸಾಧ್ಯತೆ.


ನಿಮ್ಮ ಜನ್ಮದಿನ 2-ಮಾರ್ಚ್ ಈ ದಿನ ಅತ್ಯಂತ ಶುಭಕರ. ವಿಶಾಲ ಮನೋಭಾವ ಬೆಳೆಸಿಕೊಂಡಿರುವ ನೀವು ಸಮಾಜದ ಒಳಿತಿಗಾಗಿ ಸದಾ ತುಡಿಯುತ್ತಿರುವವರು. ನಿಮ್ಮ ಯೋಚನೆಗಳೆಲ್ಲವೂ ಸಮಾಜದ ಪರ ಹಾಗೂ ಪ್ರಗತಿಪರ ಧೋರಣೆಗಳಿಂದ ಕೂಡಿರುವವರು. ನಿಮ್ಮ ವ್ಯಕ್ತಿತ್ವವು ಉನ್ನತ ಮಟ್ಟದ್ದಾಗಿದ್ದು ಗೌರವಾದರಗಳು ಸದಾ ಇರುತ್ತವೆ.

ಪದಬಂಧ 4524

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇರೊಂದು ನಾಡು (3)
3.ಆಶ್ವಯುಜ, ಕಾರ್ತೀಕ ಮಾಸಗಳನ್ನೊಳಗೊಂಡ ಕಾಲ (4)
5.ರಸ ಒಸರುತ್ತಿರುವ ಜಿಹ್ವೆ (3)
7.ಹತ್ತನೆಯ ಒಂದು ಭಾಗ (4)
9.ಕೊನೆಗಿದ್ದ ಚಾರನದ್ದು ಒಳ್ಳೆಯ ನಡತೆ (4)
11.ಗಣಪತಿಯ ವಾಹನ (3)
14.ಬಾಗಿಲು ಕಾಯುವವ ಹಾರ ಧರಿಸಿದ್ದಾನೆ! (4)
15.ಮನಸ್ಸಿಗೆ ಬಂದಂತೆ ನಡೆಯುವುದು (3)

ಮೇಲಿಂದ ಕೆಳಕ್ಕೆ
1.ಹೆಂಡತಿಯನ್ನು ಕಳೆದುಕೊಂಡವನು (3)
2.ರೋಗ ಇತ್ಯಾದಿಗಳನ್ನು ಗುಣಪಡಿಸುವಿಕೆ (3)
3.ಪದಗಳ ಅರ್ಥವನ್ನು ವಿವರಿಸುವ ಗ್ರಂಥ (4)
4.ಲಡಾಯಿ ನಡೆದಾಗ ಸಿಕ್ಕಿರುವ ದಾರದ ಉಂಡೆ (2)
6.ಸೂಕ್ತವಾದುದನ್ನು ಹೀಗೆ ಹೇಳಿ (4)
7.ಮೈಮೇಲೆ ಗುಳ್ಳೆಗಳು ಏಳುವ ಒಂದು ಅಂಟು ರೋಗ (3)
8.ನೂರು ವರ್ಷಗಳ ಕಾಲ ಬದುಕಿರುವವನು (4)
10.ಚಾರನಲ್ಲೇ ಪಿಸುಣ ಅಡಗಿದ್ದಾನೆ! (4)
11.ಮೂಗಿನಲ್ಲಿ ಧರಿಸುವ ಆಭರಣ (3)
12.ಸಮುದ್ರ ಇಲ್ಲಿದೆ (3)
13.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)



4523ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹಯಗ್ರೀವ3.ಉಪಶಾಖೆ 5.ಕೆಸರು7.ದುಮ್ಮಾನ9.ಮತ್ಸರ 10.ಶರಣ11.ಅಂಗದ 15.ಕೋಲಾಹಲ16.ಕಾರಬಾರು
ಮೇಲಿಂದ ಕೆಳಕ್ಕೆ: 1.ಹರಕೆ 2.ವಲ್ಕ3.ಉಮೇದುವಾರ 4.ಖೆಡ್ಡಾ6.ಸದವಕಾಶ 8.ನರೆದಲೆಗ9.ಮರಣಕಾಲ 12.ದರ್ಬಾರು13.ಣಕೋ 14.ಕಾಕಾ

ಸುಡೊಕು 4910

5				7		3		8
			2		4		1	
7		1		5		4		9
	9		5				7	
1				4				3
	6				8		5	
9		5			6	2		1
				3			8	
6		8	4			9		5


ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4909 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ಷೇರುಪೇಟೆ ವಹಿವಾಟು

750



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,529
ಇಂದಿನ ಅಂತ್ಯ	14,761
▲	232
ದಿನದ ಗರಿಷ್ಠ	14,806

ವಿನಿಮಯ ದರ

$ ಡಾಲರ್	73.55
£ ಪೌಂಡ್	102.40
€ ಯುರೊ	88.39
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹433

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹1210 (1205)
ಸೂರ್ಯಕಾಂತಿ (ರಿಫೈನ್ಡ್)	₹1580 (1570)
ಪಾಮೋಲಿನ್	₹1182 (1180)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹24000-30000
2ನೇ ದರ್ಜೆ ₹16000-25000

ಕೊಬ್ಬರಿ ಧಾರಣೆ

ಬೆಂಗಳೂರು	₹15500-19000
ತಿಪಟೂರು	₹14500-15530
ತುರುವೇಕೆರೆ	₹15500-15500

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹2000-2400
ಮಧ್ಯಮ	₹1800-2000
ಸಣ್ಣ	₹1000-2000

ವಾಹನ ಮಾರಾಟ ಎರಡಂಕಿ ಪ್ರಗತಿ

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕದಿಂದಾಗಿ ವೈಯಕ್ತಿಕ ಬಳಕೆಯ ವಾಹನಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಹೀಗಾಗಿ ಫೆಬ್ರುವರಿಯಲ್ಲಿ ವಾಹನ ತಯಾರಿಸುವ ಪ್ರಮುಖ ಕಂಪನಿಗಳು ಉತ್ತಮ ಮಾರಾಟ ಪ್ರಗತಿ ಸಾಧಿಸಿವೆ.

ಮಾರುತಿ ಸುಜುಕಿ ಇಂಡಿಯಾ ಕಂಪನಿಯ ದೇಶಿ ಮಾರಾಟವು 2020ರ ಫೆಬ್ರುವರಿಗೆ ಹೋಲಿಸಿದರೆ ಶೇ 11.8ರಷ್ಟು ಹೆಚ್ಚಾಗಿದ್ದು, 1.52 ಲಕ್ಷ ವಾಹನಗಳನ್ನು ಮಾರಾಟ ಮಾಡಿದೆ.

ಹುಂಡೈ ಮೋಟರ್ ಇಂಡಿಯಾ ಕಂಪನಿಯ ಮಾರಾಟದಲ್ಲಿ ಶೇ 29ರಷ್ಟು ಹೆಚ್ಚಾಗಿದ್ದು 51,600 ವಾಹನಗಳನ್ನು ಮಾರಾಟ ಮಾಡಿದೆ. ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನ ಮಾರಾಟ 27,225ರಷ್ಟಾಗಿದೆ. ಅದೇ ರೀತಿ ಮಹೀಂದ್ರಾ ಮಾರಾಟ ಶೇ 41ರಷ್ಟು ಏರಿಕೆಯಾಗಿದೆ.

ಟಿಕೆಎಂನ ದೇಶಿ ಮಾರಾಟ ಶೇ 36ರಷ್ಟು, ಹೋಂಡಾ ಕಾರ್ಸ್‌ನ ಸಗಟು ಮಾರಾಟವು ಶೇ 28.3ರಷ್ಟು ಹೆಚ್ಚಾಗಿದೆ. ನಿಸಾನ್ ಮೋಟರ್ ಇಂಡಿಯಾ 4,244 ವಾಹನಗಳನ್ನು ಮಾರಾಟ ಮಾಡಿದೆ.

ಸೆನ್ಸೆಕ್ಸ್ 750 ಅಂಶ ಜಿಗಿತ



ಮುಂಬೈ (ಪಿಟಿಐ): ದೇಶದ ಆರ್ಥಿಕತೆಯು ಮೂರನೇ ತ್ರೈಮಾಸಿಕದಲ್ಲಿ ಶೇ 0.4ರಷ್ಟು ಬೆಳವಣಿಗೆ ಕಂಡಿರುವುದು ಷೇರುಪೇಟೆಗಳಲ್ಲಿ ಸೋಮವಾರ ಹೂಡಿಕೆ ಚಟುವಟಿಕೆಯನ್ನು ಹೆಚ್ಚಾಗುವಂತೆ ಮಾಡಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 750 ಅಂಶ ಜಿಗಿತ ಕಂಡು 49,849 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ಮಧ್ಯಂತರ ವಹಿವಾಟಿನಲ್ಲಿ 50 ಸಾವಿರಕ್ಕೂ ಹೆಚ್ಚಿನ ಮಟ್ಟಕ್ಕೆ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 232 ಅಂಶ ಏರಿಕೆ ಕಂಡು 14,761 ಅಂಶಗಳಿಗೆ ತಲುಪಿತು.

ಗಳಿಕೆ: ದಿನದ ವಹಿವಾಟಿನಲ್ಲಿ ಪವರ್‌ಗ್ರಿಡ್, ಒಎನ್‌ಜಿಸಿ, ಅಲ್ಟ್ರಾ ಟೆಕ್ ಸಿಮೆಂಟ್, ಏಷ್ಯನ್ ಪೇಂಟ್ಸ್, ಕೋಟಕ್ ಬ್ಯಾಂಕ್ ಮತ್ತು ಟೈಟಾನ್ ಷೇರುಗಳು ಶೇ 5.94ರವರೆಗೂ ಏರಿಕೆ ಕಂಡಿವೆ.

ಸತತ ಎರಡು ತ್ರೈಮಾಸಿಕಗಳಲ್ಲಿ ನಕಾರಾತ್ಮಕ ಹಾದಿಯಲ್ಲಿದ್ದ ದೇಶದ ಆರ್ಥಿಕತೆಯು ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ಸಕಾರಾತ್ಮಕ ಹಾದಿಗೆ ಮರಳಿರುವುದು ಷೇರುಪೇಟೆಯಲ್ಲಿ ಉತ್ತಮ ವಹಿವಾಟಿಗೆ ಕಾರಣವಾಯಿತು ಎಂದು ತಜ್ಞರು ಹೇಳಿದ್ದಾರೆ.

ಬಾಂಡ್ ಮಾರುಕಟ್ಟೆಯು ಸ್ಥಿರವಾಗಿರುವುದರಿಂದ ಏಷ್ಯಾದ ಷೇರುಪೇಟೆಗಳು ಏರಿಕೆಯೊಂದಿಗೆ ವಹಿವಾಟು ಅಂತ್ಯಗೊಳಿಸಿದವು. ಅಮೆರಿಕದ ಆರ್ಥಿಕ ಉತ್ತೇಜನಾ ಕೊಡುಗೆಯೂ ಹೂಡಿಕೆಗೆ ಬೆಂಬಲ ನೀಡಿದೆ.

‘ದೇಶದ ಷೇರುಪೇಟೆಗಳು ಉತ್ತಮ ವಹಿವಾಟಿನೊಂದಿಗೆ ತಿಂಗಳನ್ನು ಆರಂಭಿಸಿವೆ. ಜಿಡಿಪಿ ಬೆಳವಣಿಗೆ ಸಕಾರಾತ್ಮಕವಾಗಿರುವುದು, ವಾಹನಗಳ ಮಾರಾಟದಲ್ಲಿ ಸುಧಾರಣೆ ಹಾಗೂ ತಯಾರಿಕಾ ವಲಯವು ಸಕಾರಾತ್ಮಕ ಹಾದಿಯಲ್ಲಿ ಇರುವುದು ಹೊಸ ಆಶಾವಾದ ಮೂಡಿಸಿದೆ’ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಮುಖ್ಯ ಸಂಶೋಧಕ ವಿನೋದ್ ನಾಯರ್ ಹೇಳಿದ್ದಾರೆ.

ರಾಷ್ಟ್ರೀಯ ಷೇರುಪೇಟೆಯಲ್ಲಿ (ಎನ್‌ಎಸ್‌ಇ) ಬುಧವಾರ ತಾಂತ್ರಿಕ ಸಮಸ್ಯೆಯಿಂದಾಗಿ ನಾಲ್ಕು ಗಂಟೆಗಳವರೆಗೆ ವಹಿವಾಟು ಸ್ಥಗಿತಗೊಂಡಿತ್ತು.

ತಯಾರಿಕಾ ಚಟುವಟಿಕೆ ಅಲ್ಪ ಇಳಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಫೆಬ್ರುವರಿಯಲ್ಲಿ ಅಲ್ಪ ಇಳಿಕೆ ಕಂಡಿವೆ ಎಂದು ಐಎಚ್‌ಎಸ್ ಮರ್ಕಿಟ್ ಇಂಡಿಯಾ ತಿಳಿಸಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ ಜನವರಿಯಲ್ಲಿ 57.7ರಷ್ಟಿತ್ತು. ಇದು ಫೆಬ್ರುವರಿಯಲ್ಲಿ 57.5ಕ್ಕೆ ಅಲ್ಪ ಇಳಿಕೆ ಕಂಡಿದೆ. ಜನವರಿಯಿಂದ ಬೆಳವಣಿಗೆಯ ವೇಗ ಕಡಿಮೆ ಆಗಿದ್ದರೂ ಸಕಾರಾತ್ಮಕ ಮಟ್ಟದಲ್ಲಿಯೇ ಇದೆ.

‘ಚಟುವಟಿಕೆಗಳು ಅಲ್ಪ ಇಳಿಕೆ ಕಂಡಿದ್ದರು ಸಹ ಹೊಸ ಯೋಜನೆಗಳಿಗೆ ಬೇಡಿಕೆ ಬರುತ್ತಿರುವುದರಿಂದ ಕಂಪನಿಗಳು ಉತ್ಪಾದನೆ ಮತ್ತು ಖರೀದಿ ಚಟುವಟಿಕೆಗಳನ್ನು ಹೆಚ್ಚಿಸುತ್ತಿವೆ’ ಎಂದು ಐಎಚ್‌ಎಸ್ ಮರ್ಕಿಟ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕ ಪಾಲಿಯಾನಾ ಡಿ. ಲಿಮಾ ತಿಳಿಸಿದ್ದಾರೆ.

‘ಲಸಿಕೆ ವಿತರಣೆ ಕಾರ್ಯಕ್ರಮಕ್ಕೆ ವೇಗ ಸಿಗುತ್ತಿದ್ದಂತೆಯೇ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಕಂಡುಬರಲಿದೆ. 12 ತಿಂಗಳಿನಲ್ಲಿ ಉತ್ಪಾದನೆಯಲ್ಲಿ ಏರಿಕೆ ಕಂಡುಬರಲಿದೆ ಎನ್ನುವುದು ಕಂಪನಿಗಳ ನಿರೀಕ್ಷೆಯಾಗಿದೆ’ ಎಂದು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	1000-1050
ನಡುಗೋಲು	1150-1250
ರಾಶಿ	1450-1500
ರಾಶಿ ಉತ್ತಮ	1600-1700
ಜರಡಿ	1800-1850
ಹೆರಕಿದ್ದು	2200-2300
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	2200-2500
ಕಾಳು ಮೆಣಸು	325

ಅಡಿಕೆ
ಬಂಟ್ವಾಳ

ಕೋಕ	10000-22500
ಹೊಸತು	23500-40500
ಹಳತು	42500-50500

ಕುಮಟ

ಚಿಪ್ಪು	25069-28569
ಕೋಕ	17509-28089
ಫ್ಯಾಕ್ಟರಿ	13099-18001
ಹಳೆಚಾಲಿ	39569-41599
ಹೊಸಚಾಲಿ	33000-40500

ಪುತ್ತೂರು

ಹಳತು	9500-24000
ಹೊಸತು	28500-40500

ಸಿದ್ದಾಪುರ

ಬಿಳಿಗೋಟು	21869-29969
ಕೋಕ	18691-29199
ಚಾಲಿ	34209-38898
ಕೆಂಪುಗೋಟು	26089-30031
ರಾಶಿ	38599-41999
ತಟ್ಟಿಬೆಟ್ಟೆ	28669-40599

ಶಿವಮೊಗ್ಗ ಎಪಿಎಂಸಿ

ಬೆಟ್ಟೆ	41109-43555
ಗೊರಬಲು	16000-31569
ರಾಶಿ	37739-42699
ಸರಕು	50109-72009

ಸಾಗರ

ಬಿಳಿಗೋಟು	21099-23800
ಚಾಲಿ	29699-33789
ಕೋಕ	15199-30199
ಕೆಂಪುಗೋಟು	26100-31699
ರಾಶಿ	31899-42839
ಸಿಪ್ಪೆಗೋಟು	9477-18269

ರಾಮನಗರ ರೇಷ್ಮೆ ಧಾರಣೆ

ಮಿಶ್ರತಳಿ (ಸಿ.ಬಿ)	211-396
ದ್ವಿತಳಿ (ಬಿ.ವಿ)	186-489

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10150	10100	10175	136.85 ಸೆಂಟ್ಸ್
ಎಸಿ	4100	4000	4000	
ಆರ್‌ಪಿ	5400	5200	5275	
ಆರ್‌ಸಿ	3000	3150	3025	1456 ಡಾಲರ್ಸ್

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಎಂ.ಎಸ್. ರಾಮಣ್ಣ, ಅಧ್ಯಕ್ಷರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ರಿ)
ದಿನಾಂಕ : 01–03–2021ರಂದು ಸೋಮವಾರ ಬೆಳಿಗ್ಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ನೀಡಿ, ಇವರ ಪತ್ನಿ, ಮಕ್ಕಳು ಹಾಗೂ ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿ ದೊರಕಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವ,
ಕಾರ್ಯಕಾರಿ ಸಮಿತಿ ಸದಸ್ಯರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ರಿ)

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology

★॥ಶ್ರೀಆದಿಶಕ್ತಿ ಅಣ್ಣಮ್ಮ ದೇವಿ॥★ ಜ್ಯೋತಿಷ್ಯರು ಜನವಶೀಕರಣ, ಸ್ತ್ರೀ ಪುರುಷ ವಶೀಕರಣ, ಶತ್ರುವಶೀಕರಣ, ಇನ್ನೂಯಾವುದೇ ಸಮಸ್ಯೆಗಳಿದ್ದರೂ 24ಗಂಟೆಗಳಲ್ಲಿ ಶಾಶ್ವತ ಪರಿಹಾರ. 'ಪಂಡಿತ್.ಸಹದೇವ್‌ಭಟ್'. 9008968867

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ನಿಮ್ಮ ಯಾವುದೇ ರೀತಿಯ ವಶೀಕರಣ ಹಾಗೂ ನಿಮ್ಮ ಸಮಸ್ಯೆಗಳಾದ ಸಂತಾನ, ಸತಿ-ಪತಿ ಕಲಹ, ಸಾಲಬಾಧೆ, ಪ್ರೇಮವಿಚಾರ, ಶತ್ರುನಾಶ, ಇನ್ನೂ ಅನೇಕ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ವಿಶಿಷ್ಠ ಶಾಸ್ತ್ರೋಕ್ತ ಪರಿಹಾರ ಶತಸಿದ್ಧ.9980714116

★ಕೊಳ್ಳೆಗಾಲದಿಂದ★ ನೇರಪರಿಹಾರ.ಕೊಳ್ಳೆಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರಿಪುರುಷ ಪ್ರೇಮ,ಸಂತಾನ,ವಿವಾಹ, ಶತೃದೋಷ,ಸಾಲಭಾದೆ, ವ್ಯಾಪಾರ,ಪ್ರೇತಬಾದೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೆಗಾಲ

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ, ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

ಉಚಿತ ಜ್ಯೋತಿಷ್ಯಫಲ ಶ್ರೀ ದುರ್ಗಾಂಬಿಕಾ ಜ್ಯೋತಿಷ್ಯಾಲಯ ಶ್ರೀ ರಘುನಂದನ್. ವ್ಯಾಪಾರ, ಹಣಕಾಸು, ಪ್ರೇಮ ವಿಚಾರ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ 7483199807.

ಅಂಬಾಭವಾನಿ ಜ್ಯೋತಿಷ್ಯಾಲಯ: ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

ಉದ್ಯೋಗಾವಕಾಶ
General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

TATA MOTORS, ಟಯೋಟಾ, ಬ್ರಿಟಾನಿಯಾ, TVS ಗಳಿಗೆ 7th,SSLC, PUC ಡಿಗ್ರಿಯವರುಗಳು, ITI ನವರುಗಳು,ನೇರನೇಮಕಾತಿಯಿದೆ. 16,500-52,000/- ವಸತಿಯೂಟವಿದೆ. 7795048129, 7795049766

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ.9739993386, 9916016092

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ ಬೇಕಾಗಿದ್ದಾರೆ :TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ತಕ್ಷಣ ಬೇಕಾಗಿದ್ದಾರೆ ಕಂಪನಿ ಹಾಗು ಆಫೀಸ್ ಕೆಲಸಗಳಿಗೆ SSLC PUC Any degree ಯುವಕ ಯುವತಿಯರಿಗೆ ವಸತಿಯೂಟದೊಂದಿಗೆ Rs.16600 -Rs.60000 7259261011, 9902839010

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವ್ಯಾಪಾರ
Business to Business
Finance

ಎಲ್ಲಾ ರೀತಿಯ ಸಾಲ ಸೌಲಭ್ಯಕ್ಕಾಗಿ ಸಂಪರ್ಕಿಸಿರಿ ಹಾಗೂ ಉದ್ಯಮ ಆಧಾರ್, ಲೇಬರ್ ಕಾರ್ಡ್ ಮತ್ತು EDP ಟ್ರೈನಿಂಗ್‌ಗಾಗಿ ಸಂಪರ್ಕಿಸಿರಿ. 8792102232, 8147012578, 8088231127, 9986949058

Business Offers
Finance

★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲದೊರೆಯುತ್ತದೆ. ಸಂಪರ್ಕಿಸಿ:09499457849/ 09953286082.ಏಜೆಂಟರು ಸಂಪರ್ಕಿಸಬಹುದು.

ವೈಯಕ್ತಿಕ
Announcements

ಶ್ರೀ ಮಹಾವಿಷ್ಣುಮೂರ್ತಿ ದೈವಸ್ಥಾನ, ಗಡಿಕಲ್ಲು ಕೊಲ್ಲಮೊಗ್ರ ಇದರ ಜೀರ್ಣೋದ್ಧಾರದ ಸಹಾಯಾರ್ಥ ಲಕ್ಕಿ ಕೂಪನ್ ಡ್ರಾ ಫೆ. 26 ರಂದು ನಡೆದಿದೆ. I- 1709 II- 6763, III- 5782 ಆಕರ್ಷಕ ಬಹುಮಾನ 4590, 11483, 11569, 989, 489 (ಮಾ.15ರ ಮೊದಲಾಗಿ ಬಹುಮಾನ ಪಡೆಯಬೇಕು.9448881150)

ಸಮಾಜಸೇವೆ
Others

ಪಾರಂಪರಿಕ ವೈದ್ಯ ಪದ್ಧತಿ ಹಾಗೂ ನಾಟಿ ಆಯುರ್ವೇದ ಅದ್ಭುತ ಪ್ರಾವೀಣ್ಯತೆ ಪಡೆದ ವೈದ್ಯರುಗಳ ಕಿರುಪುಸ್ತಕ ಪ್ರಕಟಿಸುತ್ತೇವೆ ನೊಂದಾಯಿಸುವವರು ಸಂಪರ್ಕಿಸಿ: 8892501007/ 9606701007

ಪ್ರಜಾವಾಣಿ ಕ್ಲಾಸಿಫೈಡ್ಸ್
For Lineage & Single/ Multi Column Classifieds Display ads
BOOK YOUR AD ON SUNDAY & GET 50% OFF ON WEEKDAYS
For more information contact:
9880856233 / 9845114560
9606912256

2019–20ರಲ್ಲಿ ರಾಜ್ಯ ದ್ರಾಕ್ಷಾರಸ ಮಂಡಳಿಗೆ ₹ 260 ಕೋಟಿ ಆದಾಯ

ವೈನ್ ದ್ರಾಕ್ಷಿ: ತಗ್ಗಿದ ಇಳುವರಿ

• ಕಲಾವತಿ ಬೈಚಬಾಳ

ಹುಬ್ಬಳ್ಳಿ: ದ್ರಾಕ್ಷಾರಸ ತಯಾರಿಸಲು ಬಳಸುವ ವೈನ್ ದ್ರಾಕ್ಷಿಯನ್ನು ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದ್ದು, ಅಕಾಲಿಕ ಮಳೆ, ಹವಾಮಾನ ವೈಪರೀತ್ಯದಿಂದ ವೈನ್ ದ್ರಾಕ್ಷಿ ಬೆಳೆದ ರೈತರು ನಿರೀಕ್ಷಿತ ಮಟ್ಟದ ಇಳುವರಿ ಪಡೆಯಲಾಗಲಿಲ್ಲ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಾಲಿನಲ್ಲಿ ಇಳುವರಿ ಕಡಿಮೆ ಆಗಿದೆ. ಆದರೆ, ವೈನ್‌ಗೆ ಬೇಡಿಕೆ ಹೆಚ್ಚಾಗಿರುವ ಕಾರಣ ವೈನ್ ದ್ರಾಕ್ಷಿಗೆ ಬೇಡಿಕೆಯು ಹೆಚ್ಚಾಗಿದೆ.

‘ವಿಜಯಪುರ, ಬಾಗಲಕೋಟೆ, ಬೆಳಗಾವಿ, ಬೀದರ್, ಕಲಬುರ್ಗಿ ಸೇರಿ 900 ಎಕರೆ, ಮೈಸೂರು, ಚಾಮರಾಜನಗರ 150 ಎಕರೆ, ಬೆಂಗಳೂರು (ನಗರ/ಗ್ರಾಮಾಂತರ), ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ರಾಮನಗರ 750 ಎಕರೆ, ಕೊಪ್ಪಳ, ಬಳ್ಳಾರಿ ಸೇರಿ 200 ಎಕರೆ ಪ್ರದೇಶದಲ್ಲಿ ವೈನ್ ದ್ರಾಕ್ಷಿ ಬೆಳೆಯಲಾಗಿದೆ’ ಎಂದು ರಾಜ್ಯ ದ್ರಾಕ್ಷಾರಸ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಟಿ.ಸೋಮು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಬೆಂಗಳೂರು (ಗ್ರಾಮಾಂತರ/ನಗರ), ಕೋಲಾರ, ಚಿಕ್ಕಬಳ್ಳಾಪುರದಲ್ಲಿ ಒಟ್ಟು 3,500 ಎಕರೆ ಪ್ರದೇಶದಲ್ಲಿ ಬೆಂಗಳೂರು ನೀಲಿ ದ್ರಾಕ್ಷಿಯನ್ನು ಬೆಳೆಯಲಾಗುತ್ತಿದ್ದು, ಸುಮಾರು 13,384 ಟನ್‌ನಷ್ಟು ಉತ್ಪಾದನೆಯಾಗಿದೆ. ಇದರಲ್ಲಿ ಶೇ 8ರಿಂದ ಶೇ10ರಷ್ಟು ದ್ರಾಕ್ಷಿಯನ್ನು ವೈನ್‌ಗೆ ಉಪಯೋಗಿಸಲಾಗುತ್ತದೆ. ಈ ಬಾರಿ ಸಾಮಾನ್ಯ ದ್ರಾಕ್ಷಿಗೆ ಕೆ.ಜಿಗೆ ₹ 50–₹60 ದರ ಇದೆ. ಆದರೆ ವೈನ್ ದ್ರಾಕ್ಷಿ ಕೆ.ಜಿಗೆ ₹100–₹120ರ ತನಕ ದರ ಸಿಕ್ಕಿದೆ.

ರಾಜ್ಯದಲ್ಲಿ ಒಟ್ಟು 80 ಲಕ್ಷದಿಂದ 90 ಲಕ್ಷ ಲೀಟರ್ ವೈನ್ ತಯಾರಿಸಲಾಗುತ್ತದೆ. ಕೋವಿಡ್ ಲಾಕ್‌ಡೌನ್‌ನಲ್ಲಿ ಶೇ 20ರಷ್ಟು ವೈನ್ ಮಾರಾಟವಾಗಿರಲಿಲ್ಲ. ಆನಂತರದಲ್ಲಿ ಮಾರಾಟ ಹೆಚ್ಚಾಗಿದ್ದು, 2019–20ನೇ ಸಾಲಿನಲ್ಲಿ ₹260 ಕೋಟಿ ಆದಾಯ ಬಂದಿದೆ. 2020–21ರಲ್ಲೂ ಆದಾಯ ಹೆಚ್ಚಾಗುವ ನಿರೀಕ್ಷೆ ಇದೆ’ ಎಂದು ವಿವರಿಸಿದರು.

ಇಲಾಖೆ ಮಧ್ಯಸ್ಥಿಕೆ ವಹಿಸಲಿ: ‘ವೈನ್ ದ್ರಾಕ್ಷಿಗೆ ಬೇಡಿಕೆ ಹೆಚ್ಚಾಗಿದ್ದು, ಇಲಾಖೆ ಸಮಯಕ್ಕೆ ಸರಿಯಾಗಿ ರೈತರಿಗೆ ಉತ್ತಮ ಮಾಹಿತಿ, ಹೊಸ ತಂತ್ರಜ್ಞಾನಗಳ ಬಗೆಗೆ ಮಾಹಿತಿ ನೀಡಬೇಕು. ಬೆಳೆಗಾರರು ಕಂಪನಿಗಳ ಜೊತೆಗೆ ಒಪ್ಪಂದಕ್ಕೆ ಬರುವಾಗ ಇಲಾಖೆ ಮಧ್ಯಸ್ಥಿಕೆ ವಹಿಸಿದ್ದಲ್ಲಿ ರೈತರಿಗೂ ಉತ್ತಮ ಬೆಲೆ ಸಿಕ್ಕಂತಾಗುತ್ತದೆ’ ಎಂದು ಬೆಳಗಾವಿಯ ದ್ರಾಕ್ಷಿ ಬೆಳೆಗಾರ ದಾದಾ ಪಾಟೀಲ ಹೇಳುತ್ತಾರೆ.

ದ್ರಾಕ್ಷಾರಸ ಮಾರಾಟ


ವರ್ಷ	ಮಾರಾಟ (ಲಕ್ಷ ಲೀಟರ್‌ಗಳಲ್ಲಿ)	ಒಟ್ಟು ಆದಾಯ (ಕೋಟಿ ರೂಗಳಲ್ಲಿ)
2017-18	62	224
2018-19	64	253
2019-20	66	260

(ಮಾಹಿತಿ: ರಾಜ್ಯ ಪಾನೀಯ ನಿಗಮ)

> ಸರ್ಕಾರ ಮದ್ಯದ ದರ ಹೆಚ್ಚಿಸಿದ್ದರೂ, ವೈನ್ ದರದಲ್ಲೇನು ಏರಿಕೆ ಆಗುವುದಿಲ್ಲ. ದರ ಸ್ಥಿರವಾಗಿಯೇ ಇರಲಿದೆ
> **ಸರ್ವೇಶ,**
> ಪ್ರಧಾನ ವ್ಯವಸ್ಥಾಪಕ, ದ್ರಾಕ್ಷಾರಸ ಮಂಡಳಿ

> ಪ್ರತಿ ಬಾರಿಯೂ ಕೈಯಲ್ಲಿ ಬೆಳೆ ಇದ್ದಾಗ ಬೆಲೆ ಇರುವುದಿಲ್ಲ. ಬೆಲೆ ಇದ್ದಾಗ ಬೆಳೆ ಇರುವುದಿಲ್ಲ. ಸರ್ಕಾರ ಅಗತ್ಯ ಕ್ರಮವಹಿಸಬೇಕು.
> **ಆಲಗೊಂಡ ಬಿರಾದಾರ,**
> ದ್ರಾಕ್ಷಿ ಬೆಳೆಗಾರ

ಅಂಕಿ–ಅಂಶಗಳು



10,000 ಟನ್ — 2018–19ರಲ್ಲಿ ವೈನ್ ದ್ರಾಕ್ಷಿ ಇಳುವರಿ

7,000 ಟನ್ — 2019–20ರಲ್ಲಿ ವೈನ್ ದ್ರಾಕ್ಷಿ ಇಳುವರಿ

16 ವೈನ್ ದ್ರಾಕ್ಷಿ ಬೆಳೆಯುವ ಜಿಲ್ಲೆಗಳು

₹2,000 ಎಕರೆ ಒಟ್ಟು ವಿಸ್ತೀರ್ಣ

15 ರಾಜ್ಯದಲ್ಲಿರುವ ಖಾಸಗಿ ವೈನರಿಗಳ ಸಂಖ್ಯೆ

1,000 (ಅಂದಾಜು) ವೈನರಿಗಳ ಜತೆಗೆ ಒಡಂಬಡಿಕೆ ಮಾಡಿಕೊಂಡವರು

(ಮಾಹಿತಿ: ರಾಜ್ಯ ದ್ರಾಕ್ಷಾರಸ ಮಂಡಳಿ)

ಎಸ್‌ಬಿಐ ಗೃಹ ಸಾಲದ ಬಡ್ಡಿದರ ಇಳಿಕೆ



ಮುಂಬೈ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತನ್ನ ಗೃಹ ಸಾಲಗಳ ಮೇಲಿನ ಬಡ್ಡಿದರವನ್ನು ಶೇ 0.1ರವರೆಗೂ ಇಳಿಕೆ ಮಾಡಿದೆ.

₹ 75 ಲಕ್ಷದವರೆಗಿನ ಮೊತ್ತದ ಗೃಹ ಸಾಲಕ್ಕೆ ಶೇ 6.70ರಷ್ಟು ಬಡ್ಡಿದರ ಇರಲಿದೆ. ₹ 75 ಲಕ್ಷದಿಂದ ₹ 5 ಕೋಟಿಗಳವರೆಗಿನ ಗೃಹ ಸಾಲದ ಮೊತ್ತಕ್ಕೆ ಶೇ 6.75ರಷ್ಟು ಬಡ್ಡಿದರ ನೀಡಬೇಕಾಗುತ್ತದೆ ಎಂದು ಬ್ಯಾಂಕ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಹೊಸ ಬಡ್ಡಿದರಗಳು ಸಾಲದ ಮೊತ್ತ ಮತ್ತು ಸಿಬಿಲ್ ಸ್ಕೋರ್ ಆಧರಿಸಿದ್ದು, ಮಾರ್ಚ್ 31ರವರೆಗೂ ಲಭ್ಯವಿರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಹಬ್ಬದ ಋತುವಿನ ಅದರಲ್ಲಿಯೂ ವಿಶೇಷವಾಗಿ ಹೋಳಿಯ ಲಾಭವನ್ನು ಪಡೆಯಲು ನಾವು ಬಯಸುತ್ತೇವೆ’ ಎಂದು ಬ್ಯಾಂಕ್‌ನ ರಿಟೇಲ್ ವಹಿವಾಟಿನ ಉಪ ವ್ಯವಸ್ಥಾಪಕ ನಿರ್ದೇಶಕ ಸಲೋನಿ ನಾರಾಯಣ್ ತಿಳಿಸಿದ್ದಾರೆ.

ಸಂಸ್ಕರಣಾ ಶುಲ್ಕದಲ್ಲಿ ಶೇ 100ರಷ್ಟು ವಿನಾಯಿತಿಯನ್ನೂ ನೀಡುತ್ತಿದೆ.

ಯುನೊ ಆ್ಯಪ್ ಬಳಸಿ ಗೃಹ ಸಾಲಕ್ಕೆ ಅರ್ಜಿ ಸಲ್ಲಿಸಿದರೆ ಬಡ್ಡಿದರದಲ್ಲಿ ಹೆಚ್ಚುವರಿಯಾಗಿ ಶೇ 0.05ರಷ್ಟು ರಿಯಾಯಿತಿ ಸಿಗಲಿದೆ. ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಮಹಿಳೆಯರಿಗೆ ಶೇ 0.05ರಷ್ಟು ವಿಶೇಷ ರಿಯಾಯಿತಿ ಕೊಡುಗೆಯನ್ನೂ ಪ್ರಕಟಿಸಿದೆ.

ಕಲಬುರ್ಗಿಯಲ್ಲಿ ಈಗಲೇ 38 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ

ಬೇಸಿಗೆಗೂ ಮುನ್ನವೇ ಬಿಸಿಲ ತಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಬೇಸಿಗೆಗೂ ಮುನ್ನವೇ ಒಂದು ವಾರದಿಂದ ತಾಪಮಾನ ಏರುತ್ತಿದೆ. ‘ಕಲಬುರ್ಗಿಯಲ್ಲಿ ಈಗಲೇ 38 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗುತ್ತಿದ್ದು, ಏಪ್ರಿಲ್ ವೇಳೆಗೆ 45 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ಏರುವ ನಿರೀಕ್ಷೆ ಇದೆ’ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

‘ಫೆಬ್ರುವರಿಯಲ್ಲಿ ಮಳೆ ಸುರಿಯುವುದು ವಿರಳ. ಆದರೆ, ಈ ಬಾರಿ ಹವಾಮಾನ ವೈಪರೀತ್ಯದಿಂದ ಫೆಬ್ರುವರಿಯಲ್ಲಿ ಅಕಾಲಿಕ ಮಳೆ ಸುರಿಯಿತು. ಇದರ ಪರಿಣಾಮ ಬೇಸಿಗೆಯ ಆರಂಭಕ್ಕೂ ಮುನ್ನವೇ ತಾಪಮಾನ ಏರುತ್ತಿದೆ. ಈ ವಾರದಲ್ಲಿ ಚಳಿ ಮರೆಯಾಗುತ್ತಿದ್ದು, ಒಣಹವೆಯಿಂದ ಸಂಜೆ ವೇಳೆ ದಿಢೀರ್ ಸೆಕೆಯೂ ಆರಂಭಗೊಂಡಿದೆ’ ಎಂದು ಹವಾಮಾನ ಇಲಾಖೆ ನಿರ್ದೇಶಕ ಸಿ.ಎಸ್.ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಳೆದ ವರ್ಷ ಈ ಅವಧಿಯಲ್ಲಿ ಸರಾಸರಿ ತಾಪಮಾನವಿತ್ತು. ಬೇಸಿಗೆಯಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಗರಿಷ್ಠ ಎಂದರೂ 38ರಿಂದ 40 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಆದರೆ, ಈ ಬಾರಿ ಬೇಸಿಗೆಗೆ ಕಾಲಿಡುವ ಮುನ್ನವೇ ಕಲಬುರ್ಗಿಯಲ್ಲಿ ಎರಡು ದಿನಗಳಿಂದ 38 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ಇದೇ ರೀತಿ ತಾಪಮಾನ ಏರಿದರೆ, ರಾಜ್ಯದಲ್ಲಿ ಮುಂದಿನ ವಾರದಲ್ಲಿ ಮಳೆಯಾಗುವ ಲಕ್ಷಣಗಳೂ ಇವೆ’ ಎಂದವರು ಹೇಳಿದರು.

ಎಲ್ಲೆಲ್ಲಿ ಎಷ್ಟು ತಾಪಮಾನ?: ಕಲಬುರ್ಗಿಯಲ್ಲಿ ಸೋಮವಾರ ಗರಿಷ್ಠ 38.6 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ರಾಯಚೂರು 37, ಕೊಪ್ಪಳ 36, ಕಾರವಾರ, ವಿಜಯಪುರ, ಗದಗದಲ್ಲಿ ತಲಾ 35, ದಾವಣಗೆರೆ, ಹಾವೇರಿ, ಧಾರವಾಡ, ಬೀದರ್ ಜಿಲ್ಲೆಗಳಲ್ಲಿ ತಲಾ 34 ಡಿಗ್ರಿ ಸೆಲ್ಸಿಯಸ್ ಹೆಚ್ಚು ತಾಪಮಾನ ದಾಖಲಾಗಿದೆ. ಚಿಕ್ಕಮಗಳೂರು ಹಾಗೂ ಹಾಸನದಲ್ಲಿ ತಲಾ 12 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಶಿಪ್ಪಿಂಗ್ ಕಾರ್ಪ್ ಖರೀದಿಗೆ ಆಸಕ್ತಿ

ನವದೆಹಲಿ (ಪಿಟಿಐ: ಶಿಪ್ಪಿಂಗ್ ಕಾರ್ಪೊರೇಷನ್ ಕಂಪನಿಯನ್ನು ಖರೀದಿಸುವ ಆಸಕ್ತಿ ವ್ಯಕ್ತಪಡಿಸಿ ಹಲವರು ಬಿಡ್ ಸಲ್ಲಿಸಿದ್ದಾರೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಸ್ವತ್ತು ನಿರ್ವಹಣಾ ಕಾರ್ಯದರ್ಶಿ ಟಿ.ಕೆ.ಪಾಂಡೆ ತಿಳಿಸಿದ್ದಾರೆ.

ಕಂಪನಿಯಲ್ಲಿನ ಶೇ 63.75ರಷ್ಟು ಷೇರುಗಳನ್ನು ಮಾರಾಟ ಮಾಡಲು ಸರ್ಕಾರ ಬಿಡ್ ಆಹ್ವಾನಿಸಿದೆ.

ಪರಿಸರ ಪ್ರವಾಸೋದ್ಯಮ ಮಂಡಳಿ: ಮದನಗೋಪಾಲ್ ಅಧ್ಯಕ್ಷ



ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಎಂ.ಮದನಗೋಪಾಲ್ ಅವರನ್ನು ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಕಾರ್ಯಕಾರಿ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಸೋಮವಾರ ಕರ್ತವ್ಯಕ್ಕೆ ಹಾಜರಾಗಿರುವ ಅವರು ‘ಈ ಹುದ್ದೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವೇತನ, ಇತರ ಭತ್ಯೆಯನ್ನು ಪಡೆಯುವುದಿಲ್ಲ. ಗೌರವಧನವಾಗಿ ಕೇವಲ ₹ 1 (ಒಂದು ರೂಪಾಯಿ) ಮಾತ್ರ ಪಡೆಯಲು ಇಚ್ಛಿಸಿದ್ದೇನೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತದಲ್ಲಿ 50ನೇ ವರ್ಷದ ಸಂಭ್ರಮದಲ್ಲಿ ಕ್ಯಾಟರ್‌ಪಿಲ್ಲರ್

ಬೆಂಗಳೂರು: ವಿಶ್ವದ ಅತಿದೊಡ್ಡ ನಿರ್ಮಾಣ ಮತ್ತು ಗಣಿಗಾರಿಕೆ ಉಪಕರಣಗಳ ತಯಾರಕ ಕ್ಯಾಟರ್ ಪಿಲ್ಲರ್ ಕಂಪನಿಯು ಭಾರತದಲ್ಲಿ ತಯಾರಿಕೆ ಆರಂಭಿಸಿ 50ನೇ ವರ್ಷಕ್ಕೆ ಪ್ರವೇಶಿಸಿದ ಸಂಭ್ರಮದಲ್ಲಿದೆ.

ತನ್ನ ಕಾರ್ಯಾಚರಣಾ ಕ್ಷೇತ್ರಗಳ ಸುರಕ್ಷತೆ, ತಯಾರಿಕೆ ಮತ್ತು ದಕ್ಷತೆಯನ್ನು ಹೆಚ್ಚಿಸಲು ತನ್ನ ಯಂತ್ರಗಳನ್ನು ಪ್ರಮುಖ ತಂತ್ರಜ್ಞಾನದೊಂದಿಗೆ ಸಜ್ಜುಗೊಳಿಸುವ ಸುದೀರ್ಘ ಇತಿಹಾಸವನ್ನು ಕಂಪನಿಯು ಹೊಂದಿದೆ.

ಕಂಪನಿಯು 1930ರಿಂದ ಭಾರತದಲ್ಲಿ ಸಕ್ರಿಯವಾಗಿದೆ. ಸದ್ಯ, ಆರು ಅತ್ಯಾಧುನಿಕ ತಯಾರಿಕಾ ಘಟಕಗಳು, ಎರಡು ಆರ್ ಆ್ಯಂಡ್ ಡಿ ಕೇಂದ್ರಗಳು, ಐದು ಅಂಗಸಂಸ್ಥೆಗಳನ್ನು ಹೊಂದಿದೆ.

‘1948ರಲ್ಲಿ ಬಾಕ್ರಾ ನಾಂಗಲ್ ಅಣೆಕಟ್ಟಿನ ನಿರ್ಮಾಣದಲ್ಲಿ ಕಂಪನಿಯ ಉಪಕರಣಗಳನ್ನು ಬಳಸಲಾಗಿದೆ ಎನ್ನುವುದು ಗಮನಾರ್ಹವಾದ ವಿಷಯ. ದೇಶದಲ್ಲಿ ಗಣಿಗಾರಿಕೆ, ನಿರ್ಮಾಣ, ಸಾರಿಗೆ, ವಿದ್ಯುತ್ ಉತ್ಪಾದನೆ ಮತ್ತು ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಬೆಂಬಲ ನೀಡಲಾಗುತ್ತಿದೆ’ ಎಂದು ಕಂಪನಿಯ ಭಾರತದ ವ್ಯವಸ್ಥಾಪಕ ಬನ್ನಿ ಫನ್ಸಲ್ಕರ್ ತಿಳಿಸಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ
20ನೇ ಮತ್ತು 21ನೇ ಮಹಡಿ, ವಿ.ವಿ.ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.
ವೆಬ್‌ಸೈಟ್: https://dom.karnataka.gov.in
2020–21ರ ರಾಜ್ಯ ವಿದ್ಯಾರ್ಥಿವೇತನ ಘೋಷಣೆ
ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ (ಎಸ್‌ಎಸ್ ಪಿ)
ಮುಸಲ್ಮಾನರು ಕ್ರೈಸ್ತರು ಜೈನರು ಬೌದ್ಧರು ಸಿಖ್ಖರು ಪಾರ್ಸಿ
ಕರ್ನಾಟಕ ರಾಜ್ಯದ ಅರ್ಹ ಅಲ್ಪ ಸಂಖ್ಯಾತರ ವಿದ್ಯಾರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ
2020–21 ನೇ ಸಾಲಿನ ಅಲ್ಪಸಂಖ್ಯಾತರ ವಿದ್ಯಾರ್ಥಿವೇತನ ಪಡೆಯಲು ಎಲ್ಲಾ ಅರ್ಹ ವಿದ್ಯಾರ್ಥಿಗಳು ಎಸ್ ಎಸ್ ಪಿ ಮತ್ತು ಎಸ್ ಎಸ್ ಪಿ ಅಡಿಯಲ್ಲಿ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ.

ಮೆಟ್ರಿಕ್–ಪೂರ್ವ ವಿದ್ಯಾರ್ಥಿವೇತನ	ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕಾಗಿ ಭಾರತ ಸರ್ಕಾರದ ಎನ್‌ಎಸ್ ಪಿ ಅಡಿಯಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಎಸ್‌ಎಸ್ ಪಿ – ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ. (ID ಸಂಖ್ಯೆ KA2020-21 .. ರಲ್ಲಿ ಶುರುವಾಗುವ ಅರ್ಜಿಗಳನ್ನು ಮಾತ್ರ ಎಸ್‌ಎಸ್ ಪಿಅಡಿಯಲ್ಲಿ ಸಲ್ಲಿಸಬೇಕು)	To apply visit website https://ssp.karnataka.gov.in/ To know your SATS ID visit https://sts.karnataka.gov.in/STS/
ಮೆಟ್ರಿಕ್–ನಂತರ ವಿದ್ಯಾರ್ಥಿವೇತನ / ಮೆರಿಟ್–ಕಮ್–ಮೀನ್ಸ್ ವಿದ್ಯಾರ್ಥಿವೇತನ	ಮೆಟ್ರಿಕ್ – ನಂತರದ ಮತ್ತು ಮೆರಿಟ್–ಕಮ್–ಮೀನ್ಸ್ ವಿದ್ಯಾರ್ಥಿ ವೇತನಕ್ಕಾಗಿ ಭಾರತ ಸರ್ಕಾರದ ಎನ್ ಎಸ್ ಪಿ ಅಡಿಯಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಿದ ಮತ್ತು ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಮೆಟ್ರಿಕ್–ನಂತರದ ವಿದ್ಯಾರ್ಥಿಗಳಿಗೆ ಮೀಸಲಾದ ಎಸ್ ಎಸ್ ಪಿ – ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ.	To apply visit website https:// ssp.postmatric.karnataka.gov.in/

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 31.03.2021
ಸೂಚನೆ:– ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ಮತ್ತು ವಿದ್ಯಾರ್ಥಿವೇತನಕ್ಕಾಗಿ ಎಸ್‌ಎಸ್ ಪಿಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸುವಾಗ ಎನ್ ಎಸ್ ಪಿ ID ಸಂಖ್ಯೆ ನಮೂದಿಸುವುದು ಕಡ್ಡಾಯವಾಗಿರುತ್ತದೆ. ನಿಯಮ ನಿಬಂಧನೆಗಳ ಕುರಿತಾದ ಹೆಚ್ಚಿನ ವಿವರ ಮತ್ತು ಪ್ರಕ್ರಿಯೆಯ ಕುರಿತಾಗಿ ತಿಳಿಯಲು ಅಲ್ಪಸಂಖ್ಯಾತರ ನಿರ್ದೇಶನಾಲಯದ ಕಚೇರಿ ಜಾಲತಾಣ https://dom.karnataka.gov.in ಅಥವಾ ಎಸ್‌ಎಸ್ ಪಿ – ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ https://ssp.karnataka.gov.in/ಗೆ ಭೇಟಿ ನೀಡಿ. ತಾಂತ್ರಿಕ ಸಮಸ್ಯಗಳೇನಾದರೂ ಇದ್ದಲ್ಲಿ postmatrichelp@karnataka.gov.in ಇ–ಮೇಲ್ ಗೆ ಮೇಲ್ ಮಾಡಿ ಅಥವಾ ಸಹಾಯವಾಣಿ: 080–35254757 ಗೆ 10AM – 5:30PMರ ಕಚೇರಿ ಕಾರ್ಯಾವಧಿಯಲ್ಲಿ ಸಂಪರ್ಕಿಸಿ ಅಥವಾ ನಿಮ್ಮ ಹತ್ತಿರದ ಅಲ್ಪಸಂಖ್ಯಾತರ ಮಾಹಿತಿಕೇಂದ್ರಕ್ಕೆ ಸಂಪರ್ಕಿಸಿ
ಸಹಿ/-
ದಿನಾಂಕ: 02.03.2021
ಬೆಂಗಳೂರು
ಮಹಿಬೂಬ್ ಸಾಬ್, ಕೆ.ಜಿ.ಎಸ್.ಎಸ್
ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ

ಮುಂಬೈ ಧಾರಣೆ

ಶೇಂಗಾ
1-3-2020

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	8800-8900
ದಪ್ಪ ಗುಜರಾತ್(ಹೊಸ)	9700-9800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಸೋಯಾ ಕಚ್ಚಾ	1180 (1170)
ಪಾಮ್ ವಾರದ ಡೆಲಿವರಿ	1180 (1178)
ಸೂರ್ಯಕಾಂತಿ ಎಣ್ಣೆ ಕಚ್ಚಾ	1550 (1540)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
45,450 (45,600)
ಬೆಳ್ಳಿ ಕೆ.ಜಿ 68,300 (67,800)

ಆವರಣದಲ್ಲಿ ಶನಿವಾರದ ಧಾರಣೆ

ಇನ್ಸ್ಟಾಗ್ರಾಮ್‌ನಲ್ಲಿ ದಾಖಲೆ; ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಮಾಹಿತಿ

ಕೊಹ್ಲಿಗೆ ದಶಕೋಟಿ ಅಭಿಮಾನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರು ಇನ್ಸ್ಟಾಗ್ರಾಮ್‌ನಲ್ಲಿ ಹತ್ತು ಕೋಟಿ ಅಭಿಮಾನಿಗಳನ್ನು ಹೊಂದಿದ ವಿಶ್ವದ ಮೊದಲ ಕ್ರಿಕೆಟಿಗನಾಗಿದ್ದಾರೆ.

ಸೋಮವಾರ ರಾತ್ರಿ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಈ ವಿಷಯವನ್ನು ಟ್ವೀಟ್ ಮಾಡಿದೆ. ಅಲ್ಲದೇ ಅವರು ಇಷ್ಟು ಅಭಿಮಾನಿಗಳನ್ನು ಹೊಂದಿದ ಏಷ್ಯಾ ಖಂಡದ ಮೊದಲ ಸೆಲಿಬ್ರಿಟಿ ಕೂಡ ಆಗಿದ್ದಾರೆ.

ಈ ಹಾದಿಯಲ್ಲಿ ವಿರಾಟ್ ಕೊಹ್ಲಿಯು ಪಾಪ್ ಸ್ಟಾರ್ ಡೆಮಿ ಲೊವೆಟೊ (9.9ಕೋಟಿ), ಪ್ರತಿಷ್ಠಿತ ಫುಟ್‌ಬಾಲ್ ಕ್ಲಬ್‌ಗಳಾದ ರಿಯಲ್ ಮ್ಯಾಡ್ರಿಡ್ (9.5 ಕೋಟಿ) ಮತ್ತು ಬಾರ್ಸಿಲೋನಾ ಎಫ್‌ಸಿ (9.4 ಕೋಟಿ) ಯನ್ನು ಹಿಂದಿಕ್ಕಿದ್ದಾರೆ.

ಈ ಪಟ್ಟಿಯಲ್ಲಿ ಪೋರ್ಚುಗಲ್ ಫುಟ್‌ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ (26.6 ಕೋಟಿ) ಅಗ್ರಸ್ಥಾನದಲ್ಲಿದ್ದಾರೆ. ಬಾರ್ಸಿಲೋನಾ ನಾಯಕ ಲಯೋನೆಲ್ ಮೆಸ್ಸಿ (18.7 ಕೋಟಿ) ವಿರಾಟ್‌ಗಿಂತ ಮುಂದಿದ್ದಾರೆ.


ವಿರಾಟ್ ಕೊಹ್ಲಿ

ಆಧುನಿಕ ಕ್ರಿಕೆಟ್‌ನ ಹೀರೊ ವಿರಾಟ್: ಸ್ಟೀವ್ ವಾ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಆಧುನಿಕ ಕಾಲದ ಕ್ರಿಕೆಟ್‌ನ ಹೀರೊ ಎಂದು ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ನಾಯಕ ಸ್ಟೀವ್ ವಾ ಬಣ್ಣಿಸಿದ್ದಾರೆ.

'ಕ್ಯಾಪ್ಚರಿಂಗ್ ಕ್ರಿಕೆಟ್:ಸ್ಟೀವ್ ವಾ ಇನ್ ಇಂಡಿಯಾ' ಎಂಬ 60 ನಿಮಿಷಗಳ ಸಾಕ್ಷ್ಯಚಿತ್ರದಲ್ಲಿ ವಾ ಈ ಮಾತು ಹೇಳಿದ್ದಾರೆ.

'ಕೊಹ್ಲಿಯ ದಿಟ್ಟ ನಿಲುವನ್ನು ಅವರ ಅಭಿಮಾನಿಗಳು ಅಗಾಧವಾಗಿ ಪ್ರೀತಿಸುತ್ತಾರೆ. ಎಲ್ಲ ಸವಾಲುಗಳನ್ನೂ ಸ್ವೀಕರಿಸುತ್ತ, ಸಾಧಿಸುವತ್ತ ಧಾವಿಸುವ ಅವರ ಮನೋಭಾವದಿಂದಾಗಿ ಈ ಕಾಲದ ಕ್ರಿಕೆಟ್‌ನ ನಿಜವಾದ ಹೀರೊ ಆಗಿದ್ದಾರೆ' ಎಂದು ಸ್ಟೀವ್ ಹೇಳಿದ್ದಾರೆ.

'ಕ್ರಿಕೆಟ್ ಮತ್ತು ಫೋಟೊಗ್ರಫಿ ಎರಡೂ ನನ್ನ ಅಚ್ಚುಮೆಚ್ಚಿನ ವಿಷಯಗಳು. ಹೃದಯಕ್ಕೆ ಹತ್ತಿರವಾಗಿರುವ ಹವ್ಯಾಸಗಳು. 1986ರಲ್ಲಿ ಮೊದಲ ಬಾರಿ ಭಾರತಕ್ಕೆ ಭೇಟಿ ನೀಡಿದ್ದೆ. ಅಲ್ಲಿಯ ಜನರು ಕ್ರಿಕೆಟ್ ಆಟವನ್ನು ಸಂಭ್ರಮಿಸುವ ರೀತಿಗೆ ಮರುಳಾಗಿದ್ದೇನೆ' ಎಂದಿದ್ದಾರೆ.

'ನಾನು ಭಾರತದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣ, ತಾಜ್ ಮಹಲ್, ಧರ್ಮಶಾಲೆಯ ಎಚ್‌ಪಿಸಿಎ ಕ್ರೀಡಾಂಗಣ, ಮಹಾರಾಜ ಲಕ್ಷ್ಮೀ ವಿಲಾಸ ಅರಮನೆ, ಓವಲ್ ಮೈದಾನಗಳಿಗೆ ಭೇಟಿ ನೀಡಿದ್ದೆ. ದೆಹಲಿ ಮತ್ತು ಕೋಲ್ಕತ್ತದ ಸುತ್ತಲಿನ ಕ್ರೀಡಾಂಗಣಗಳಲ್ಲಿ ಸುತ್ತಿದಾಗ ಜೀವಮಾನದ ಅವಿಸ್ಮರಣೀಯ ಕ್ರಿಕೆಟ್ ಕಥೆಗಳು ನನಗೆ ಸಿಕ್ಕವು' ಎಂದು ಹೇಳಿದ್ದಾರೆ.

'ಈ ಸಾಕ್ಷ್ಯಚಿತ್ರವನ್ನು ನೋಡುವ ಭಾರತದ ಪ್ರತಿಯೊಬ್ಬ ಅಭಿಮಾನಿಯೂ ತಮ್ಮ ಕ್ರಿಕೆಟ್ ಪ್ರೀತಿಯ ಬಗ್ಗೆ ಭಾವುಕರಾಗುತ್ತಾರೆ' ಎಂದು ಸ್ಟೀವ್ ಹೇಳಿದ್ದಾರೆ.

ಈ ಸಾಕ್ಷ್ಯಚಿತ್ರದಲ್ಲಿ ವೀಕ್ಷಕ ವಿವರಣೆಕಾರ ಹರ್ಷ ಭೋಗ್ಲೆ ನಿರೂಪಣೆ ಮಾಡಿದ್ದಾರೆ.

ಲೇಖಕಿ ಮಿಥಿಲಾ ಗುಪ್ತಾ ಸಂಭಾಷಣೆ ಬರೆದಿದ್ದಾರೆ. ಕ್ರಿಕೆಟಿಗ ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ಆಸ್ಟ್ರೇಲಿಯಾದ ಮಾಜಿ ವಿಕೆಟ್‌ಕೀಪರ್ ಆ್ಯಡಂ ಗಿಲ್‌ಕ್ರಿಸ್ಟ್ ಮತ್ತು ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಲಿಸಾ ಸ್ಥಳೇಕರ್ ಈ ಸಾಕ್ಷ್ಯಚಿತ್ರದಲ್ಲಿದ್ದಾರೆ.

ಎಂಟರ ಘಟ್ಟಕ್ಕೆ ಮುಂಬೈ, ಸೌರಾಷ್ಟ್ರ

ವಿಜಯ್ ಹಜಾರೆ ಟ್ರೋಫಿ: ಸರ್ವಿಸಸ್ ತಂಡಕ್ಕೆ ನಿರಾಸೆ

ಜೈಪುರ/ಕೋಲ್ಕತ್ತ (ಪಿಟಿಐ): ಮುಂಬೈ ಮತ್ತು ಸೌರಾಷ್ಟ್ರ ತಂಡಗಳು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಎಂಟರ ಘಟ್ಟಕ್ಕೆ ಪ್ರವೇಶಿಸಿದವು.

ಸೋಮವಾರ ಜೈಪುರ ದಲ್ಲಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಮುಂಬೈ 200 ರನ್‌ಗಳಿಂದ ಹಿಮಾಚಲಪ್ರದೇಶದ ವಿರುದ್ಧ ಜಯಿಸಿತು.

ಕೋಲ್ಕತ್ತದಲ್ಲಿ ನಡೆದ ಇ ಗುಂಪಿನ ಅಂತಿಮ ಸರ್ವಿಸಸ್ ಎದುರು 68 ರನ್‌ಗಳಿಂದ ಸೋತಿತು. ಸರ್ವಿಸಸ್ ತಂಡದ ರಾಹುಲ್ ಸಿಂಗ್ ಶತಕ ದಾಖಲಿಸಿದರು ಮತ್ತು ನಾಲ್ಕು ವಿಕೆಟ್‌ಗಳನ್ನೂ ಗಳಿಸಿದರು. ಆದರೆ ಗುಂಪು ಹಂತದ ಐದು ಪಂದ್ಯಗಳಲ್ಲಿ ನಾಲ್ಕರಲ್ಲಿ ಗೆದ್ದಿರುವ ಸೌರಾಷ್ಟ್ರ ಎಂಟರ ಘಟ್ಟಕ್ಕೆ ಪ್ರವೇಶಿಸಿತು.

ಸಂಕ್ಷಿಪ್ತ ಸ್ಕೋರು: ಡಿ ಗುಂಪು: ಜೈಪುರ: ಮುಂಬೈ: 50 ಓವರ್‌ಗಳಲ್ಲಿ 9ಕ್ಕೆ321 (ಸೂರ್ಯ ಕುಮಾರ್ ಯಾದವ್ 91, ಆದಿತ್ಯ ತಾರೆ 91, ಶಾರ್ದೂಲ್ ಠಾಕೂರ್ 92, ರಿಷಿ ಧವನ್ 84ಕ್ಕೆ4, ಪಂಕಜ್ ಜೈಸ್ವಾಲ್ 65ಕ್ಕೆ3) **ಹಿಮಾಚಲಪ್ರದೇಶ:** 24.1 ಓವರ್‌ಗಳಲ್ಲಿ 121 (ಏಕಾಂತ್ ಸೇನ್ 21, ಪ್ರವೀಣ ಠಾಕೂರ್ 22, ಮಯಂಕ್ ಡಾಗರ್ ಔಟಾಗದೆ 38, ಧವಳ್ ಕುಲಕರ್ಣಿ 8ಕ್ಕೆ2, ಶಮ್ಸ್ ಮಲಾನಿ 42ಕ್ಕೆ3, ಪ್ರಶಾಂತ್ ಸೋಳಂಕಿ 31ಕ್ಕೆ4) **ಫಲಿತಾಂಶ:** ಮುಂಬೈ ತಂಡಕ್ಕೆ 200 ರನ್‌ಗಳ ಜಯ. **ರಾಜಸ್ಥಾನ:** 48.2 ಓವರ್‌ಗಳಲ್ಲಿ 294 (ಮಣಿಂದರ್ ಸಿಂಗ್ 73, ಶಿವಾ ಚೌಹಾನ್ 42, ಅರ್ಜಿತ್ ಗುಪ್ತಾ 78;ಸಿಮ್ರಂಜೀತ್ ಸಿಂಗ್ 36ಕ್ಕೆ4, ಸಂಗ್ವಾನ್ 62ಕ್ಕೆ3) **ದೆಹಲಿ:** 44.4 ಓವರ್‌ಗಳಲ್ಲಿ 2ವಿಕೆಟ್‌ಗಳಿಗೆ 296 (ಧ್ರುವ ಶೋರೆ 31, ಶಿಖರ್ ಧವನ್ 44, ಹಿಮ್ಮತ್ ಸಿಂಗ್ ಔಟಾಗದೆ 117, ನಿತೀಶ್ ರಾಣಾ ಔಟಾಗದೆ 88) **ಫಲಿತಾಂಶ:** ದೆಹಲಿ ತಂಡಕ್ಕೆ 8 ವಿಕೆಟ್‌ಗಳ ಜಯ. **ಇ ಗುಂಪು: ಕೋಲ್ಕತ್ತ: ಸರ್ವಿಸಸ್:** 50 ಓವರ್‌ಗಳಲ್ಲಿ 7ಕ್ಕೆ 301 (ಜಿ. ರಾಹುಲ್ ಸಿಂಗ್ 158, ದೇವೆಂದರ್ ಲೋಚಾಬ್ 64, ಪುಳಕಿತ್ ನಾರಂಗ್ ಔಟಾಗದೆ 43, ಜಯದೇವ್ ಉನದ್ಕತ್ 51ಕ್ಕೆ3) **ಸೌರಾಷ್ಟ್ರ:** 43.1 ಓವರ್‌ಗಳಲ್ಲಿ 233 (ಸ್ನೆಲ್ ಪಟೇಲ್ 43, ಅವಿ ಬರೋಟ್ 38, ಅರ್ಪಿತ್ ವಸವಾಡ 35, ಚಿರಾಗ್ ಜೈನ್ 68, ರಾಹುಲ್ ಸಿಂಗ್ 45ಕ್ಕೆ4, ವರುಣ್ ಚೌಧರಿ 62ಕ್ಕೆ3) **ಫಲಿತಾಂಶ:** ಸರ್ವಿಸಸ್‌ಗೆ 68 ರನ್‌ಗಳ ಜಯ.

ದೆಹಲಿಯಲ್ಲಿ ನಾಕೌಟ್ ಹಣಾಹಣಿ

ಬೆಂಗಳೂರು: ಟೂರ್ನಿಯ ನಾಕೌಟ್ ಹಂತದ ಪಂದ್ಯಗಳು ನವದೆಹಲಿಯಲ್ಲಿ ಆಯೋಜನೆಗೊಳ್ಳಲಿವೆ. ಮಾರ್ಚ್ 7ರಂದು ಎಲಿಮಿನೇಟರ್ ಪಂದ್ಯ ನಡೆಯಲಿದೆ. ಕ್ವಾರ್ಟರ್‌ಫೈನಲ್ ಅರ್ಹತೆ ಪಡೆಯುವ ಎಂಟನೇ ತಂಡವು ಪ್ಲೇಟ್ ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ತಂಡದೆದುರು ಸೆಣಸಲಿದೆ.

ಮಾರ್ಚ್ 8 ಮತ್ತು 9ರಂದು ಎರಡನೇ ಕ್ವಾರ್ಟರ್‌ಫೈನಲ್ ಪಂದ್ಯಗಳು ನಡೆಯಲಿವೆ. 11ರಂದು ಸೆಮಿಫೈನಲ್ ಮತ್ತು 14ರಂದು ಫೈನಲ್ ಪಂದ್ಯಗಳು ನಡೆಯಲಿವೆ ಎಂದು ಬಿಸಿಸಿಐ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಸಾನಿಯಾ ಮಿರ್ಜಾಗೆ ಗೆಲುವು

ದೋಹ, ಕತಾರ್ (ಪಿಟಿಐ): ಒಂದು ವರ್ಷದ ನಂತರ ಕಣಕ್ಕೆ ಇಳಿದ ಭಾರತದ ಸಾನಿಯಾ ಮಿರ್ಜಾ ಅವರು ಕತಾರ್ ಟೋಟಲ್ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಸ್ಲೊವೇನಿಯಾದ ಆಂಡ್ರೆಜಾ ಕ್ಲೆಪಕ್ ಜೊತೆಗೂಡಿ ಸಾನಿಯಾ ಆಡಿದ್ದ ಅವರು ಉಕ್ರೇನ್‌ನ ನಾದಿಯಾ ಕಿಚೆನಾಕ್ ಮತ್ತು ಲುಡ್ಮಿಲಾ ಕೆನಾಕ್ ಅವರನ್ನು ಮಣಿಸಿದರು.

ಕಳೆದ ವರ್ಷ ಫೆಬ್ರುವರಿಲ್ಲಿ ಇದೇ ಕ್ರೀಡಾಂಗಣದಲ್ಲಿ ನಡೆದ ದೋಹ ಓಪನ್ ಟೂರ್ನಿಯಲ್ಲಿ ಸಾನಿಯಾ ಕೊನೆಯದಾಗಿ ಕಣಕ್ಕೆ ಇಳಿದಿದ್ದರು.


ಸಾನಿಯಾ ಮಿರ್ಜಾ –ಪಿಟಿಐ ಚಿತ್ರ


ಧನಲಕ್ಷ್ಮಿ, ಲತಾ

ಲತಾ, ಧನಲಕ್ಷ್ಮಿಗೆ ಚಿನ್ನದ ಪದಕ

ಶಿವಮೊಗ್ಗ: ಕಾಶ್ಮೀರದಲ್ಲಿ ನಡೆಯುತ್ತಿರುವ ಖೇಲೋ ಇಂಡಿಯಾ ಚಳಿಗಾಲದ ಕ್ರೀಡಾಕೂಟದಲ್ಲಿ ಶಿವಮೊಗ್ಗ ತಾಲ್ಲೂಕಿನ ಆಡಿನಕೊಟ್ಟಿಗೆಯ ಧನಲಕ್ಷ್ಮಿ ಹಾಗೂ ಲತಾ ಚಿನ್ನದ ಪದಕ ಗೆದ್ದಿದ್ದಾರೆ.

ಧನಲಕ್ಷ್ಮಿ 5 ಕಿ.ಮೀ. ಹಾಗೂ 1.5 ಕಿ.ಮೀ. ಓಟದ ಸೀನಿಯರ್ ವಿಭಾಗದಲ್ಲಿ, ಲತಾ ಜೂನಿಯರ್ ವಿಭಾಗದಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಇವರಿಬ್ಬರು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಹಾಗೂ ದಕ್ಷಿಣ ವಲಯ ಪರ್ವತಾರೋಹಣ ಪ್ರತಿಷ್ಠಾನ ಸಂಸ್ಥೆಗಳಿಂದ ತರಬೇತಿ ಪಡೆದು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಕೊಡಗಿನ ಭವಾನಿ ಕಂಚಿನ ಪದಕ ಪಡೆದಿದ್ದಾರೆ.

ಗೋರೆ ನಿಧನ

ವಿಜಯಪುರ: ರಾಜ್ಯ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಅಧ್ಯಕ್ಷ ಶ್ರೀಧರ ಮಾರುತಿರಾವ್ ಗೋರೆ (66) ಸೋಮವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ.


ಶ್ರೀಧರ ಗೋರೆ

ಕಳೆದ 21 ವರ್ಷಗಳಿಂದ ಅವರು ರಾಜ್ಯ ಸೈಕ್ಲಿಂಗ್ ಸಂಸ್ಥೆ ಅಧ್ಯಕ್ಷರಾಗಿದ್ದರು. ಪ್ರತಿ ಬಾರಿಯೂ ಅವಿರೋಧವಾಗಿ ಆಯ್ಕೆಯಾಗಿದ್ದು ವಿಶೇಷ. ಭಾರತ ಸೈಕ್ಲಿಂಗ್ ಫೆಡರೇಷನ್ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆ ಉಪಾಧ್ಯಕ್ಷರೂ ಆಗಿದ್ದರು. ಶ್ರೀಧರ ಗೋರೆ ಹೋಟೆಲ್ ಉದ್ಯಮಿಯಾಗಿದ್ದರು. ಸಂಜೆ ಅಂತ್ಯಸಂಸ್ಕಾರ ನಡೆಯಿತು.


ಕೃಷ್ಣಪ್ಪ ಗೌತಮ್ ಮತ್ತು ಮನೀಷ್ ಪಾಂಡೆ

ಕರ್ನಾಟಕ ತಂಡಕ್ಕೆ ಮರಳಿದ ಮನೀಷ್ ಪಾಂಡೆ, ಗೌತಮ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟದಲ್ಲಿ ಆಡಲಿರುವ ಕರ್ನಾಟಕ ತಂಡಕ್ಕೆ ಬ್ಯಾಟ್ಸ್‌ಮನ್ ಮನೀಷ್ ಪಾಂಡೆ ಮತ್ತು ಆಲ್‌ರೌಂಡರ್ ಕೃಷ್ಣಪ್ಪ ಗೌತಮ್ ಮರಳಿದ್ದಾರೆ.

ಸಿ ಗುಂಪು ಹಂತದ ಪಂದ್ಯದಲ್ಲಿ ಪಾಂಡೆ ಕಣಕ್ಕಿಳಿದಿರಲಿಲ್ಲ.

ಗೌತಮ್ ಅವರು ಇಂಗ್ಲೆಂಡ್ ಎದುರು ಸರಣಿ ಆಡುತ್ತಿರುವ ಭಾರತ ತಂಡದಲ್ಲಿ ನೆಟ್ಸ್ ಅಭ್ಯಾಸದ ಬೌಲರ್ ಆಗಿ ತೆರಳಿದ್ದರು.

'ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಗೌತಮ್ ಅವರಿಗೆ ಕರ್ನಾಟಕ ತಂಡಕ್ಕೆ ಮರಳಲು ಅನುಮತಿ ನೀಡಿದೆ. ಮನೀಷ್ ಪಾಂಡೆ ಗಾಯದಿಂದ ಸಂಪೂರ್ಣ ಚೇತರಿಸಿಕೊಂಡಿದ್ದು ಫಿಟ್ ಆಗಿದ್ದಾರೆ. ಆದ್ದರಿಂದ ಆಯ್ಕೆ ಸಮಿತಿಯು ಅವರಿಬ್ಬರನ್ನೂ ಪರಿಗಣಿಸಿದೆ' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ವಕ್ತಾರ ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ.


ಡೇಗಾ ನಿಶ್ಚಲ್ ಮತ್ತು ಶುಭಾಂಗ್ ಅವರನ್ನು ತಂಡದಿಂದ ಕೈಬಿಡಲಾಗಿದೆ.

ಪಿಚ್ ಟೀಕಾಕಾರರಿಗೆ ರಿಚರ್ಡ್ಸ್ ತಿರುಗೇಟು

ನವದೆಹಲಿ (ಪಿಟಿಐ): ಅಹಮದಾಬಾದಿನ ಮೊಟೇರಾದ ಪಿಚ್ ಗುಣಮಟ್ಟದ ಕುರಿತು ಟೀಕಿಸುವವರಿಗೆ ವೆಸ್ಟ್ ಇಂಡೀಸ್‌ನ ಕ್ರಿಕೆಟ್ ದಂತಕಥೆ ವಿವಿಯನ್ ರಿಚರ್ಡ್ಸ್ ತಿರುಗೇಟು ಕೊಟ್ಟಿದ್ದಾರೆ.

'ಮೊಟೇರಾದಲ್ಲಿ ನಡೆದ ಭಾರತ ಮತ್ತು ಇಂಗ್ಲೆಂಡ್ ಕುರಿತು ಹಲವರು ನನಗೆ ಅಭಿಪ್ರಾಯ ಕೇಳುತ್ತಿದ್ದಾರೆ. ನಾನು ತುಸು ಗೊಂದಲದಲ್ಲಿದ್ದಾರೆ. ಈ ವಿಷಯದ ಕುರಿತು ಹಲವರಿಂದ ಈಗಾಗಲೇ ನರಳಿಕೆ ವ್ಯಕ್ತವಾಗಿದೆ. ಒಂದೊಮ್ಮೆ ಚೆಂಡು ಗುಡ್‌ಲೆಂಗ್ತ್ ನಲ್ಲಿ ಪುಟಿದೆದ್ದು ಬರುತ್ತಿದ್ದ ಪಿಚ್‌ಗಳಿದ್ದವು. ಈಗಲೂ ಅದೇ ರೀತಿ ಇರಬೇಕು ಎಂದು ಬಯಸುವುದು ಬ್ಯಾಟ್ಸ್‌ಮನ್‌ಗಳ ಸಮಸ್ಯೆ' ಎಂದು ತಮ್ಮ ಫೇಸ್‌ಬುಕ್ ಪುಟದಲ್ಲಿ ಹಾಕಿರುವ ವಿಡಿಯೊದಲ್ಲಿ ರಿಚರ್ಡ್ಸ್ ಹೇಳಿದ್ದಾರೆ.

'ಈಗ ಇನ್ನೊಂದು ಮುಖ ಕಾಣುತ್ತಿದೆ. ಈ ತರಹದ ಪ್ರಯೋಗದಿಂದಾಗಿಯೇ ಇದನ್ನು ಟೆಸ್ಟ್ ಕ್ರಿಕೆಟ್ ಎಂದು ಕರೆಯುತ್ತಾರೆ. ಏಕೆಂದರೆ ಇದು ಆಟಗಾರನ ಮನಸ್ಸು ಮತ್ತು ದೈಹಿಕ ಶಕ್ತಿಯ ಪರೀಕ್ಷೆಯಾಗಿದೆ. ಚೆಂಡು ಹೆಚ್ಚು ಸ್ಪಿನ್ ಆಗುತ್ತಿದೆ ಎಂದೆಲ್ಲಾ ದೂರುವುದು ಇದ್ದೇ ಇದೆ. ಈ ರೀತಿಯು ನಾಣ್ಯದ ಇನ್ನೊಂದು ಮುಖವಷ್ಟೇ' ಎಂದಿದ್ದಾರೆ.


ವಿವಿಯನ್ ರಿಚರ್ಡ್ಸ್

'ಭಾರತದಲ್ಲಿ ಆಡಲು ತೆರಳುವಾಗ ಈ ರೀತಿಯ ಸ್ಪಿನ್ ಸ್ನೇಹಿ ಪಿಚ್‌ಗಳು ನಿರೀಕ್ಷಿತವಾಗಿರುತ್ತವೆ. ಭಾರತವೆಂದರೆ ಸ್ಪಿನ್ ಭೂಮಿ. ಅದಕ್ಕೆ ತಕ್ಕಂತೆ ಪೂರ್ವಸಿದ್ಧತೆ ಇರಬೇಕು. ಯಾವ ಪರಿಸ್ಥಿತಿ ಮತ್ತು ತಂತ್ರಗಳನ್ನು ಎದುರಿಸುತ್ತೇವೆ ಎಂಬುದರ ಕುರಿತು ಆಳವಾದ ಅಧ್ಯಯನ ಮತ್ತು ಅಭ್ಯಾಸ ಮಾಡಿಕೊಂಡೇ ಭಾರತಕ್ಕೆ ಹೋಗಬೇಕು' ಎಂದರು.

'ಸರಣಿಯ ಮೊದಲ ಪಂದ್ಯದಲ್ಲಿ ಗೆದ್ದ ನಂತರ ಇಂಗ್ಲೆಂಡ್ ತಂಡವು ನಿರಾಳ ವಲಯದಲ್ಲಿತ್ತು. ಇದೀಗ ಭಾರತವು ಎರಡು ಟೆಸ್ಟ್‌ಗಳಲ್ಲಿ ಸೋಲಿಸಿದ ನಂತರ ಪ್ರವಾಸಿ ಬಳಗವು ತನ್ನ ನಿರಾಳ ವಲಯದಿಂದ ಹೊರಬಿದ್ದಿದೆ. ಸ್ಪಿನ್ ಬೌಲಿಂಗ್ ಎಂಬುವುದು ಕ್ರಿಕೆಟ್‌ನ ಅವಿಭಾಜ್ಯ ಅಂಗ. ಪ್ರಸ್ತುತ ಭಾರತದ ಮಧ್ಯಮವೇಗಿಗಳೂ ಅಮೋಘವಾಗಿ ಆಡುತ್ತಿದ್ದಾರೆ. ಎಲ್ಲ ಪಿಚ್‌ಗಳಲ್ಲಿಯೂ ವಿಕೆಟ್ ಗಳಿಕೆಯ ಸಾಮರ್ಥ್ಯ ಹೊಂದಿದ್ದಾರೆ' ಎಂದು ಹೇಳಿದರು.

'ಭಾರತದಲ್ಲಿರುವ ಇಂಗ್ಲೆಂಡ್ ತಂಡವು ಸದ್ಯದ ಪರಿಸ್ಥಿತಿಯನ್ನು ನಿಭಾಯಿಸಲು ಸಿದ್ಧತೆ ನಡೆಸಬೇಕು. ಅದಕ್ಕಾಗಿ ಕಠಿಣ ಪರಿಶ್ರಮ ಅಗತ್ಯ. ಪಂದ್ಯದಲ್ಲಿ ಹೀಗೆ ಇರಬೇಕು ಎಂಬ ನಿಯಮ ಯಾವ ಪುಸ್ತಕದಲ್ಲಿಯೂ ಇಲ್ಲ. ಸೊಗಸಾದ ಮತ್ತು ಸಾಂಪ್ರದಾಯಿಕ ಶೈಲಿಯಲ್ಲಿಯೇ ರನ್ ಗಳಿಸುವತ್ತ ಬ್ಯಾಟ್ಸ್‌ಮನ್‌ಗಳು ಚಿತ್ತ ಹರಿಸಬೇಕು' ಎಂದು ರಿಚರ್ಡ್ಸ್ ಸಲಹೆ ನೀಡಿದ್ದಾರೆ.

ಭಾರತ ತಂಡವು ಹೋದ ವಾರ ಮೊಟೇರಾದಲ್ಲಿ ಇಂಗ್ಲೆಂಡ್ ತಂಡದ ಎದುರಿನ ಮೂರನೇ ಟೆಸ್ಟ್‌ನಲ್ಲಿ ಎರಡೇ ದಿನಗಳಲ್ಲಿ ಜಯಿಸಿತ್ತು. ನಾಲ್ಕು ಪಂದ್ಯಗಳ ಸರಣಿಯಲ್ಲಿ 2–1ರ ಮುನ್ನಡೆ ಸಾಧಿಸಿದೆ. ಆ ಸಂದರ್ಭದಲ್ಲಿ ಇಂಗ್ಲೆಂಡ್‌ನ ಮಾಜಿ ನಾಯಕ ಮೈಕೆಲ್ ವಾನ್ ಸೇರಿದಂತೆ ಕೆಲವು ಮಾಜಿ ಕ್ರಿಕೆಟಿಗರು ಪಿಚ್ ಕುರಿತು ಟೀಕೆ ಮಾಡಿದ್ದರು.

ಐಪಿಎಲ್‌ಗೆ ಹೈದರಾಬಾದ್ ಸೂಕ್ತ ಸ್ಥಳ: ಅಜರುದ್ದೀನ್

ಹೈದರಾಬಾದ್ (ಪಿಟಿಐ): ಮುಂಬರಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯಗಳನ್ನು ಆಯೋಜಿಸಲು ಹೈದರಾಬಾದ್ ಸೂಕ್ತ ತಾಣ ಎಂದು ಹೈದರಾಬಾದ್ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಮೊಹಮ್ಮದ್ ಅಜರುದ್ದೀನ್ ಹೇಳಿದ್ದಾರೆ.

ಈ ಬಾರಿಯ ಐಪಿಎಲ್ ಟೂರ್ನಿಯನ್ನು ಭಾರತದಲ್ಲಿ ಆಯೋಜಿಸಲು ಸಿದ್ಧತೆ ನಡೆದಿದೆ. ಅದಕ್ಕಾಗಿ ಆರು ಸ್ಥಳಗಳನ್ನು ಆಯ್ಕೆ ಮಾಡಲಾಗುತ್ತದೆ ಎಂಬ ಸುದ್ದಿಗಳಿವೆ. ಆದರೆ ಆ ಪಟ್ಟಿಯಲ್ಲಿ ಹೈದರಾಬಾದ್ ಇಲ್ಲದಿರುವ ಬಗ್ಗೆ ತೆಲಂಗಾಣದ ಸಚಿವ ಕೆ.ಟಿ. ರಾಮರಾವ್ ಆಕ್ಷೇಪ ವ್ಯಕ್ತಪಡಿಸಿದ್ದರು. ಹೈದರಾಬಾದ್‌ನಲ್ಲಿಯೂ ಪಂದ್ಯಗಳು ನಡೆಯಬೇಕು ಎಂದು ಆಗ್ರಹಿಸಿದ್ದರು.

ಸಚಿವರಿಗೆ ಬೆಂಬಲ ವ್ಯಕ್ತಪಡಿಸಿರುವ ಅಜರ್, 'ಕೆಟಿಆರ್ ಅವರ ಮಾತಿಗೆ ನನ್ನ ಸಹಮತವಿದೆ. ಐಪಿಎಲ್ ಪಂದ್ಯಗಳನ್ನು ಬಯೋಬಬಲ್ ಶಿಷ್ಟಾಚಾರದಲ್ಲಿ ಆಯೋಜಿಸುವ ಸಾಮರ್ಥ್ಯ ಹೈದರಾಬಾದಿಗೆ ಇದೆ. ಆದ್ದರಿಂದ ಇತ್ತ ಗಮನ ಕೊಡಿ' ಎಂದು ಅಜರ್ ಟ್ವೀಟ್ ಮಾಡಿದ್ದು, ಬಿಸಿಸಿಐಗೆ ಟ್ಯಾಗ್ ಮಾಡಿದ್ದಾರೆ.


ಮೊಹಮ್ಮದ್ ಅಜರುದ್ದೀನ್

ಈ ಮೊದಲು ಮುಂಬೈನ ನಾಲ್ಕು ಮೈದಾನಗಳಲ್ಲಿಯೇ ಐಪಿಎಲ್ ಟೂರ್ನಿಯನ್ನು ನಡೆಸುವ ಕುರಿತು ಬಿಸಿಸಿಐ ಚಿಂತನೆ ನಡೆಸುತ್ತಿತ್ತು. ಆದರೆ ಕೆಲವು ದಿನಗಳಿಂದ ಮಹಾರಾಷ್ಟ್ರದಲ್ಲಿ ಕೋವಿಡ್ –19 ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಪಂದ್ಯಗಳನ್ನು ಬೇರೆಡೆಗೆ ಸ್ಥಳಾಂತರಿಸು ಕುರಿತು ಮಾತುಕತೆಗಳು ನಡೆಯುತ್ತಿವೆ.

ಮೈಸೂರು ರೇಸ್

'ಅಶ್ವ ಫಿಗಾರೊ' ಗೆಲ್ಲುವ ನಿರೀಕ್ಷೆ

ಸಿ.ದಶರಥರಾಮ ಶೆಟ್ಟಿ ಮೆಮೋರಿಯಲ್ ಕಪ್ ಮಂಗಳವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು 'ಅಶ್ವ ಫಿಗಾರೊ' ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ವಿಸ್ ಬೇ 7, ಸೆನೆಟರ್ 2, ರಷ್ಯನ್ ಸ್ಪೈ 5
2ನೇ ರೇಸ್: ವಚನ್ 1, ಅಶ್ವ ವಿಕ್ರಾಂತ್ 6, ಹಾಲೋವಿನ್ಸ್ ವೇ 3
3ನೇ ರೇಸ್: ಬಿಗ್ ಟೈಮ್ ಬೇ 10, ಓರಿಯನ್ ಪ್ರಿನ್ಸೆಸ್ 5, ರ್‍ಯಾಪ್ಟರ್ 6
4ನೇ ರೇಸ್: ರಾಯಲ್ ಕಮಾಂಡ್ 4, ಬ್ರೌನ್ ಬ್ಯೂಟಿ 2, ಸ್ಕಾರ್ಲೆಟ್ ಪ್ರಿನ್ಸೆಸ್ 8
5ನೇ ರೇಸ್: ಡಿ ಹಂಟರ್ 1, ಸಿಲ್ವರ್ ಡೇಸ್ ಎಗೈನ್ 11, ಲಾರ್ಡ್ ಕಮಾಂಡರ್ 3
6ನೇ ರೇಸ್: ಅಶ್ವ ಫಿಗಾರೊ 4, ಫ್ಲ್ಯಾಷ್ ಬಾಂಡ್ 7, ಹೀರೊಯಿಸಂ 3
7ನೇ ರೇಸ್: ಇಂಟೆನ್ಸ್ ಕಮಾಂಡ್ 8, ನೆಕ್ಸ್ಟ್ ಲೆವೆಲ್ 3, ಎಕ್ಸ್‌ಪೋರ್ಟ್ ಕ್ವಾಲಿಟಿ 4
8ನೇ ರೇಸ್: ಅಬರ್ಲರ್ 8, ಪ್ರಿಂಜ್ ಬೆನಿಫಿಟ್ 5, ವಿಲ್ಲೊ ಗ್ಲೆನ್ 6

ಉತ್ತಮ ಬೆಟ್: ಇಂಟೆನ್ಸ್ ಕಮಾಂಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಸಾಮಾಜಿಕ ಜಾಲತಾಣ ಸ್ಥಗಿತ: ಬಜರಂಗ್

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸುವ ಕನಸು ಕಾಣುತ್ತಿರುವ ಭಾರತದ ಕುಸ್ತಿಪಟು ಬಜರಂಗ್ ಪೂನಿಯಾ ತಮ್ಮ ಎಲ್ಲ ಸಾಮಾಜಿಕ ಜಾಲತಾಣಗಳ ಖಾತೆಗಳನ್ನು ನಿಷ್ಕ್ರಿಯಗೊಳಿಸಲು ನಿರ್ಧರಿಸಿದ್ದಾರೆ.

'ಒಲಿಂಪಿಕ್ಸ್ ಮುಗಿಯುವವರೆಗೂ ನನ್ನ ಎಲ್ಲ ಸಾಮಾಜಿಕ ಜಾಲತಾಣಗಳ ಖಾತೆಗಳನ್ನು ಸ್ಥಗಿತಗೊಳಿಸಿದ್ದೇನೆ. ನಿಮ್ಮೆಲ್ಲರ ಪ್ರೀತಿಯ ಹಾರೈಕೆಗಳು ನನ್ನೊಂದಿಗೆ ಇರುವ ಸದಾಶಯವಿದೆ. ಜೈಹಿಂದ್' ಎಂದು ಬಜರಂಗ್ ಟ್ವೀಟ್ ಮಾಡಿದ್ದಾರೆ.


ಬಜರಂಗ್

2019ರಲ್ಲಿಯೇ ಅವರು ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಅರ್ಹತೆ ಗಿಟ್ಟಿಸಿದ್ದಾರೆ. ಈಚೆಗೆ ಅವರು ವಿಶೇಷ ತರಬೇತಿಗಾಗಿ ಅಮೆರಿಕಕ್ಕೆ ತೆರಳಿದ್ದರು. ಮಿಚಿಗನ್‌ನಲ್ಲಿ ತರಬೇತಿ ಮುಗಿಸಿ ಮರಳಿದ್ದಾರೆ.

ಇದೇ ಗುರುವಾರ ಇಟಲಿಯಲ್ಲಿ ನಡೆಯಲಿರುವ ಮಟಿಯೊ ಪೆಲಿಕೊನ್ ಕುಸ್ತಿ ಸರಣಿಯಲ್ಲಿ ಬಜರಂಗ್ ಕಣಕ್ಕಿಳಿಯಲಿದ್ದಾರೆ.

ಸೂ ಕಿ ವಿರುದ್ಧ ಮತ್ತೆರಡು ಕ್ರಿಮಿನಲ್ ಪ್ರಕರಣ

ಯಾಂಗೂನ್ (ರಾಯಿಟರ್ಸ್): ಮ್ಯಾನ್ಮಾರ್‌ನ ಉಚ್ಚಾಟಿತ ನಾಯಕಿ ಆಂಗ್ ಸಾನ್ ಸೂ ಕಿ ಸೋಮವಾರ ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ನ್ಯಾಯಾಲಯದ ವಿಚಾರಣೆಗೆ ಹಾಜರಾಗಿದ್ದು, ಈ ಸಂದರ್ಭದಲ್ಲಿ ತಿಂಗಳ ಹಿಂದೆ ನಡೆದ ದಂಗೆಗೆ ಸಂಬಂಧಿಸಿದಂತೆ ಅವರ ವಿರುದ್ಧ ಮತ್ತೆರಡು ಹೊಸ ಕ್ರಿಮಿನಲ್ ಪ್ರಕರಣಗಳನ್ನು ಹೊರಿಸಲಾಗಿದೆ. ಪ್ರಕರಣದ ವಿಚಾರಣೆಯನ್ನು ನ್ಯಾಯಾಲಯ ಮಾರ್ಚ್ 15ಕ್ಕೆ ಮುಂದೂಡಿದೆ.

75 ವರ್ಷದ ಸೂ ಕಿ ಪರವಾನಗಿ ಇಲ್ಲದ ವಾಕಿ ಟಾಕಿಗಳನ್ನು ಹೊಂದಿರುವುದಕ್ಕೆ ಮತ್ತು ಕಳೆದ ವರ್ಷದ ಚುನಾವಣೆಯಲ್ಲಿ ಪ್ರಚಾರ ನಡೆಸುವ ಮೂಲಕ ಕೋವಿಡ್ ನಿರ್ಬಂಧಗಳನ್ನು ಉಲ್ಲಂಘಿಸಿದಕ್ಕಾಗಿ ಈಗಾಗಲೇ ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದರು.

'ಈಗ ಸೂ ಕಿ ಅವರ ವಿರುದ್ಧ ಸಂವಹನ ಕಾನೂನುಗಳ ಉಲ್ಲಂಘನೆ ಮತ್ತು ಸಾರ್ವಜನಿಕ ಅಶಾಂತಿ ಪ್ರಚೋದಿಸುವ ಉದ್ದೇಶದ ಎರಡು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಈ ಅವಧಿಯಲ್ಲಿ ಅವರು ಇನ್ನೆಷ್ಟು ಪ್ರಕರಣಗಳನ್ನು ಎದುರಿಸಬೇಕಾಗುತ್ತದೆಯೋ ಖಚಿತವಾಗಿ ಹೇಳಲಾಗದು. ಈ ಸಮಯದಲ್ಲಿ ಈ ದೇಶದಲ್ಲಿ ಏನೂ ಬೇಕಾದರೂ ಸಂಭವಿಸಬಹುದು' ಎಂದು ಸೂ ಕಿ ಅವರ ವಕೀಲ ಖಿನ್ ಮಾಂಗ್ ಜಾವ್ ಹೇಳಿದ್ದಾರೆ.

ಫೆಬ್ರುವರಿ 1ರಿಂದ ಸೂ ಕಿ ಅವರನ್ನು ಗೃಹಬಂಧನದಲ್ಲಿರಿಸಲಾಗಿದ್ದು, ಅವರು ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ.

ಗುಂಡಿನ ಮಳೆಗೆ ಲೆಕ್ಕಿಸದೆ ಭುಗಿಲೆದ್ದ ಪ್ರತಿಭಟನೆ; ಮ್ಯಾನ್ಮಾರ್‌ನಲ್ಲಿ ಮಿಲಿಟರಿ ಕ್ಷಿಪ್ರ ದಂಗೆ ವಿರೋಧಿಸಿ ಜನತೆ ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಭಾನುವಾರ ಒಂದೇ 18 ಮಂದಿ ದೇಶದಾದ್ಯಂತ ಸೇನೆ ಮತ್ತು ಪೊಲೀಸರ ಗುಂಡೇಟಿಗೆ ಬಲಿಯಾಗಿದ್ದರೂ ಪ್ರತಿಭಟನೆಗಳು ನಿಂತಿಲ್ಲ. ಸೋಮವಾರ ದೇಶದ ವಿವಿಧ ನಗರಗಳಲ್ಲಿ ಜನರ ಪ್ರತಿಭಟನೆ ಭುಗಿಲೆದ್ದಿದೆ.


ಆಂಗ್ ಸಾನ್ ಸೂ ಕಿ

ಯಾಂಗೊನ್ ನಗರದ ಬೀದಿಗಳಲ್ಲಿ ಪ್ರತಿಭಟನಕಾರರು ಬಿದಿರಿನ ಬೊಂಬುಗಳು, ಸೋಫಾಗಳು ಮತ್ತು ಮರದ ಕೊಂಬೆಗಳನ್ನು ಬಳಸಿ ರಸ್ತೆಯುದ್ದಕ್ಕೂ ಬ್ಯಾರಿಕೇಡ್‌ಗಳನ್ನು ನಿರ್ಮಿಸಿ, ಪ್ರತಿಭಟಿಸಿದರು. ಪ್ರತಿಭಟನಕಾರರನ್ನು ಚದುರಿಸಲು ಭದ್ರತಾಪಡೆಗಳು ಸ್ಟನ್ ಗ್ರೆನೇಡ್‌ಗಳು ಮತ್ತು ಅಶ್ರುವಾಯು ಪ್ರಯೋಗಿಸಿದರು.

ಮೈಯಿನಿಗೋನ್ ಜಂಕ್ಷನ್ ಬಳಿ ಪ್ರತಿಭಟನೆಯ ವರದಿ ಮಾಡುತ್ತಿದ್ದ ಚೀನಾದ ಷಿನುವಾ ಸುದ್ದಿ ಸಂಸ್ಥೆಯ ಇಬ್ಬರು ವರದಿಗಾರರು ಬೆಳಿಗ್ಗೆ ಭದ್ರತಾ ಪಡೆಗಳ ರಬ್ಬರ್ ಗುಂಡುಗಳಿಂದ ಗಾಯಗೊಂಡಿದ್ದಾರೆ.

ಭದ್ರತಾಪಡೆಗಳ ಹಲ್ಲೆಗಳ ಬಗ್ಗೆ ಸಚಿತ್ರ ವರದಿ ಮಾಡುತ್ತಿರುವ ಯಾಂಗೊನ್‌ನಲ್ಲಿನ ಅಸೋಸಿಯೇಟೆಡ್ ಪ್ರೆಸ್ ಫೋಟೊಗ್ರಾಫರ್ ಸೇರಿ ಹಲವಾರು ಪತ್ರಕರ್ತರನ್ನು ಇತ್ತೀಚಿನ ದಿನಗಳಲ್ಲಿ ಬಂಧಿಸಲಾಗಿದೆ. ಚೀನಾದ ಕ್ಸಿನ್ಹುವಾ ಸುದ್ದಿ ಸಂಸ್ಥೆಯ ಇಬ್ಬರು ವರದಿಗಾರರನ್ನು ಮ್ಯಾನ್ಮಾರ್ ಸೇನೆ ಬಂಧಿಸಿದೆ.

ದಂಗೆಯ ನಂತರ ಈವರೆಗೆ ಭದ್ರತಾಪಡೆಯ ಗುಂಡಿಗೆ ಸುಮಾರು 30 ಜನರು ಹತರಾಗಿದ್ದಾರೆ. ಸುಮಾರು 110ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿ, ಶಿಕ್ಷೆಗೆ ಒಳಪಡಿಸಲಾಗಿದೆ ಎಂದು ರಾಜಕೀಯ ಕೈದಿಗಳ ಸಹಾಯಕ ಸಂಘ (ಎಎಪಿಪಿ) ತಿಳಿಸಿದೆ.





1203-2021

ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ: ಚಿರಾಗ್–ಸಾತ್ವಿಕ್ ಜೋಡಿ ಮೇಲೆ ಕಣ್ಣು

ಸಿಂಧು–ಸೈನಾ ಮುಖಾಮುಖಿ ಸಾಧ್ಯತೆ


ಪಿ.ವಿ.ಸಿಂಧು –ಎಎಫ್‌ಪಿ ಚಿತ್ರ


ಸೈನಾ ನೆಹ್ವಾಲ್ –ಎಪಿ ಚಿತ್ರ

ಬಾಸೆಲ್, ಸ್ವಿಟ್ಜರ್ಲೆಂಡ್ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಸೈನಾ ನೆಹ್ವಾಲ್ ಅವರು ಮಂಗಳವಾರ ಆರಂಭವಾಗಲಿರುವ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗುವ ನಿರೀಕ್ಷೆ ಇದೆ. ಪುರುಷರ ವಿಭಾಗದಲ್ಲಿ ಕಿದಂಬಿ ಶ್ರೀಕಾಂತ್, ಎಚ್.ಎಸ್.ಪ್ರಣಯ್, ಬಿ.ಸಾಯಿ ಪ್ರಣೀತ್ ಮತ್ತು ಸಮೀರ್ ವರ್ಮಾ ಭರವಸೆ ಮೂಡಿಸಿದ್ದಾರೆ.

ಪುರಷರ ವಿಭಾಗದಲ್ಲಿ ಭಾರತದ ಆಟಗಾರರು ಉತ್ತಮ ಸಾಮರ್ಥ್ಯ ತೋರಿದ್ದಾರೆ. ಸಮೀರ್ ವರ್ಮಾ, ಪ್ರಣಯ್ ಮತ್ತು ಕಿದಂಬಿ ಶ್ರೀಕಾಂತ್ ಕ್ರಮವಾಗಿ 2018, 2016 ಮತ್ತು 2015ರಲ್ಲಿ ಪ್ರಶಸ್ತಿ ಗೆದ್ದಿದ್ದಾರೆ. ಸಾಯಿ ಪ್ರಣೀತ್ ಕಳೆದ ಬಾರಿ ರನ್ನರ್ ಅಪ್ ಆಗಿದ್ದರು. ಒಲಿಂಪಿಕ್ಸ್ ಅರ್ಹತೆ ಗಳಿಸುವ ಅವಧಿ ಸ್ವಲ್ಪದರಲ್ಲೇ ಆರಂಭವಾಗಲಿರುವುದರಿಂದ ಈ ಟೂರ್ನಿ ಇನ್ನಷ್ಟು ಮಹತ್ವ ಪಡೆದುಕೊಂಡಿದೆ.

ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿರುವ ಸಿಂಧು ಎರಡು ತಿಂಗಳ ಹಿಂದೆ ಥಾಯ್ಲೆಂಡ್‌ನಲ್ಲಿ ನಡೆದಿದ್ದ ಮೂರು ಟೂರ್ನಿಗಳಲ್ಲಿ ನೀರಸ ಆಟವಾಡಿದ್ದರು. ಸ್ವಿಜ್ ಓಪನ್‌ನಲ್ಲಿ ಅವರಿಗೆ ಎರಡನೇ ಶ್ರೇಯಾಂಕ ನೀಡಲಾಗಿದ್ದು ಟರ್ಕಿಯ ನೆಸ್ಲಿಯಾನ್ ಇಜಿಟ್ ವಿರುದ್ಧ ಮೊದಲ ಪಂದ್ಯ ಆಡಲಿದ್ದಾರೆ. ಸೆಮಿಫೈನಲ್ ವರೆಗೂ ಅವರ ಹಾದಿ ಸುಗಮವಾಗಿದೆ. ಕ್ವಾರ್ಟರ್ ಫೈನಲ್‌ನಲ್ಲಿ ಅವರು ಥಾಯ್ಲೆಂಡ್‌ನ ಬುಸನನ್ ಒಂಗ್ಬಾಮ್‌ರುಂಫಮ್ ವಿರುದ್ಧ ಸೆಣಸುವರು. ಜನವರಿಯಲ್ಲಿ ನಡೆದಿದ್ದ ಥಾಯ್ಲೆಂಡ್ ಓಪನ್‌ನಲ್ಲಿ ಬುಸನನ್ ವಿರುದ್ಧ ಸಿಂಧು ಸುಲಭ ಜಯ ಸಾಧಿಸಿದ್ದರು.

ಎರಡು ಬಾರಿ ಸ್ವಿಸ್ ಓಪನ್ ಚಾಂಪಿಯನ್ ಆಗಿರುವ ಸೈನಾ ಹಾದಿ ಸ್ವಲ್ಪ ಕಠಿಣವಾಗಿದೆ. ಸೆಮಿಫೈನಲ್ ತಲುಪಬೇಕಾದರೆ ಕೊರಿಯಾದ ಆರನೇ ಶ್ರೇಯಾಂಕಿತೆ ಸಂಗ್ ಜೀ ಹ್ಯೂನ್ ಮತ್ತು ಡೆನ್ಮಾರ್ಕ್‌ನ ನಾಲ್ಕನೇ ಶ್ರೇಯಾಂಕಿತೆ ಮಿಯಾ ಬ್ಲಿಚ್‌ಫೆಲ್ಟ್ ಸವಾಲನ್ನು ಸೈನಾ ಮೀರಬೇಕಾಗಿದೆ. ಆರಂಭಿಕ ಸುತ್ತುಗಳಲ್ಲಿ ಭಾರತದ ಇಬ್ಬರು ಆಟಗಾರ್ತಿಯರು ಜಯ ಗಳಿಸಿದರೆ ನಾಲ್ಕರ ಘಟ್ಟದಲ್ಲಿ ಮುಖಾಮುಖಿಯಾಗಲಿದ್ದಾರೆ.

ಈ ತಿಂಗಳಲ್ಲಿ 31ನೇ ವರ್ಷಕ್ಕೆ ಕಾಲಿಡಲಿರುವ ಸೈನಾ ಈಚೆಗೆ ನಿರೀಕ್ಷೆಗೆ ತಕ್ಕಂತೆ ಆಡುತ್ತಿಲ್ಲ. ಹೀಗಾಗಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 19ನೇ ಸ್ಥಾನಕ್ಕೆ ಕುಸಿದಿದ್ದಾರೆ. ಆದರೂ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವ ವಿಶ್ವಾಸದಲ್ಲಿದ್ದಾರೆ. ಮೊದಲ ಸುತ್ತಿನಲ್ಲಿ ಅವರು ಥಾಯ್ಲೆಂಡ್‌ನ ಫಿಟಾಯಪರ್ನ್ ಚೈವಾನ್ ಎದುರು ಸೆಣಸುವರು. ಫಿಟಾಯಪರ್ನ್ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದು ಗಮನ ಸೆಳೆದಿದ್ದರು.


ಅಶ್ವಿನಿ ಪೊನ್ನಪ್ಪ –ಪಿಟಿಐ ಚಿತ್ರ

ಸಾತ್ವಿಕ್-ಚಿರಾಗ್ ಮೇಲೆ ಕಣ್ಣು: ಥಾಯ್ಲೆಂಡ್ ಓಪನ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ವಿಶ್ವದ 10ನೇ ಕ್ರಮಾಂಕದ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಎರಡನೇ ಶ್ರೇಯಾಂಕ ಹೊಂದಿರುವ ಈ ಜೋಡಿ ಡೆನ್ಮಾರ್ಕ್‌ನ ಮಥಾಯಸ್ ಬೋಯೆ ಬಳಿ ಕಠಿಣ ತರಬೇತಿ ಪಡೆದುಕೊಂಡಿದ್ದು ಪ್ರಶಸ್ತಿ ಮೇಲೆ ಕಣ್ಣಿಟ್ಟು ಕಣಕ್ಕೆ ಇಳಿಯಲಿದ್ದಾರೆ. ಮೊದಲ ಸುತ್ತಿನಲ್ಲಿ ಅವರಿಗೆ ಸ್ಕಾಟ್ಲೆಂಡ್‌ನ ಕ್ರಿಸ್ಟೋಫರ್ ಗ್ರಿಮ್ಲಿ ಮತ್ತು ಮ್ಯಾಥ್ಯೂ ಗ್ರಿಮ್ಲಿ ಎದುರಾಳಿಗಳು.


ಕಿದಂಬಿ ಶ್ರೀಕಾಂತ್ –ಪಿಟಿಐ ಚಿತ್ರ

ಮಿಶ್ರ ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಮತ್ತು ಅಶ್ವಿನಿ ಪೊನ್ನಪ್ಪ ಮೇಲೆಯೂ ನಿರೀಕ್ಷೆಯ ಭಾರವಿದೆ. ಹಿಂದಿನ ಟೂರ್ನಿಯಲ್ಲಿ ಇವರಿಬ್ಬರು ಸೆಮಿಫೈನಲ್ ಪ್ರವೇಶಿಸಿದ್ದರು. ಆದರೆ ಮೊದಲ ಸುತ್ತಿನಲ್ಲಿ ಈ ಜೋಡಿಗೆ ಕಠಿಣ ಸವಾಲು ಎದುರಾಗಿದ್ದು ಇಂಡೊನೇಷ್ಯಾದ ಎರಡನೇ ಶ್ರೇಯಾಂಕಿತ ಜೋಡಿ ಹಫೀಜ್ ಫೈಜಲ್ ಮತ್ತು ಗ್ಲೋರಿಯಾ ಇಮ್ಯಾನ್ಯುಯೆಲ್ ಅವರ ವಿರುದ್ಧ ಆಡಲಿದ್ದಾರೆ.

ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಸಮೀರ್ ವರ್ಮಾಗೆ ಕಿದಂಬಿ ಶ್ರೀಕಾಂತ್ ಎದುರಾಳಿ. ಎಚ್.ಎಸ್.ಪ್ರಣಯ್ ನೆದರ್ಲೆಂಡ್ಸ್‌ನ ಮಾರ್ಕ್ ಕಲಿಜೋ ಎದುರು, ಸೌರಭ್ ವರ್ಮಾ ಸ್ವಿಟ್ಜರ್ಲೆಂಡ್‌ನ ಕ್ರಿಸ್ಟಿಯನ್ ಕಿರ್ಚ್‌ಮಯರ್ ಎದುರು, ಪರುಪಳ್ಳಿ ಕಶ್ಯಪ್ ಸ್ಪೇನ್‌ನ ಪ್ಯಾಬ್ಲೊ ಅಬಿಯನ್ ವಿರುದ್ಧ, ಅಜಯ್ ಜಯರಾಮ್ ಥಾಯ್ಲೆಂಡ್‌ನ ಸಿಟಿಕೊಮ್ ತಮಸಿನ್ ವಿರುದ್ಧ, ಪ್ರಣೀತ್ ಇಸ್ರೇಲ್‌ನ ಮಿಶಾ ಜಿಲ್ಬೆರಮ್ ವಿರುದ್ಧ ಮತ್ತು ಲಕ್ಷ್ಯಸೇನ್ ಥಾಯ್ಲೆಂಡ್‌ನ ನೊಂಗ್‌ಸಕ್ ಎದುರು ಸೆಣಸುವರು.

ಕಬಡ್ಡಿ: ಆಯ್ಕೆ ಟ್ರಯಲ್ಸ್ 6ರಿಂದ

ಬೆಂಗಳೂರು: ತೆಲಂಗಾಣದಲ್ಲಿ ಇದೇ ತಿಂಗಳಲ್ಲಿ ನಡೆಯಲಿರುವ ಬಾಲಕ ಮತ್ತು ಬಾಲಕಿಯರ ರಾಷ್ಟ್ರೀಯ ಜೂನಿಯರ್ ಕಬಡ್ಡಿ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡಗಳ ಆಯ್ಕೆ ಶಿಬಿರ ಇದೇ ಆರು ಮತ್ತು ಏಳರಂದು ನಗರದ ಕೆ.ಆರ್. ಪುರದ ಹೂಡಿಯಲ್ಲಿ ನಡೆಯಲಿದೆ.

ರಾಜ್ಯ ತಂಡಕ್ಕೆ ಆಯ್ಕೆಯಾದವರಿಗೆ ಎಂಟರಿಂದ ತರಬೇತಿ ಶಿಬಿರ ನಡೆಯಲಿದೆ ಎಂದು ರಾಜ್ಯ ಕಬಡ್ಡಿ ಸಂಸ್ಥೆಯ ಆಡಳಿತಾಧಿಕಾರಿ ತಿಳಿಸಿದ್ದಾರೆ.

ಆಯ್ಕೆಗೆ ಬರುವ ಬಾಲಕರ ತೂಕ 70 ಕೆಜಿ ಒಳಗೆ ಮತ್ತು ಬಾಲಕಿಯರ ತೂಕ 65 ಕೆಜಿ ಒಳಗೆ ಇದ್ದು 2001ರ ಮಾರ್ಚ್ 26ರ ನಂತರ ಜನಿಸಿದವರಾಗಿರಬೇಕು. ಆಧಾರ್ ಕಾರ್ಡ್‌ನ ಮೂಲ ಪ್ರತಿ, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಅಥವಾ ಜನನ ಪ್ರಮಾಣ ಪತ್ರ ಹಾಗೂ ಪಾಸ್‌ಪೋರ್ಟ್ ಅಳತೆಯ ನಾಲ್ಕು ಭಾವಚಿತ್ರಗಳನ್ನು ತೆಗೆದುಕೊಂಡು ಬರಬೇಕು.

ಜಿಲ್ಲಾ ಘಟಕಗಳ ಮೂಲಕ ಬರುವ ಪ್ರತಿಯೊಬ್ಬರಿಗೂ ವಸತಿ, ಊಟ ಮತ್ತು ಒಂದು ಬದಿಯ ಪ್ರಯಾಣಭತ್ಯೆ ನೀಡಲಾಗುವುದು. ಕಬಡ್ಡಿಪಟುಗಳು ಜಿಲ್ಲಾ ಘಟಕಗಳ ಸಮವಸ್ತ್ರದೊಂದಿಗೆ ಬರಬೇಕಾಗಿದ್ದು ಮ್ಯಾಟ್ ಶೂಗಳನ್ನು ತೆಗೆದುಕೊಂಡು ಬರಬೇಕು ಎಂದು ತಿಳಿಸಲಾಗಿದೆ.

ಮಾಹಿತಿಗೆ ಯಲ್ಲಪ್ಪ (9481512563) ಅಥವಾ ಪ್ರಭು (9916167866) ಅವರನ್ನು ಸಂಪರ್ಕಿಸಬಹುದು.

ಟೆನಿಸ್: ಗಂಧರ್ವ, ಸುಷ್ಮಿತಾಗೆ ಪ್ರಶಸ್ತಿ


ಸುಷ್ಮಿತಾ ರವಿ ಮತ್ತು ಗಂಧರ್ವ ಕೊತ್ತಪಲ್ಲಿ –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಧರ್ವ ಗೌರವ್ ಕೊತ್ತಪಲ್ಲಿ ಮತ್ತು ಸುಷ್ಮಿತಾ ರವಿ ಇಲ್ಲಿ ಈಚೆಗೆ ಮುಕ್ತಾಯಗೊಂಡ ರಾಜ್ಯ ಟೆನಿಸ್ ಸಂಸ್ಥೆ ಆಶ್ರಯದ ತತ್ವಂ ಟ್ಯಾಲೆಂಟ್ ಸೀರಿಸ್ 14 ವರ್ಷದೊಳಗಿನವರ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಬಾಲಕರ ವಿಭಾಗದ ಫೈನಲ್‌ನಲ್ಲಿ ಗಂಧರ್ವ 3-6, 6-2, 7-5ರಲ್ಲಿ ಕ್ಷಿತಿಜ್ ಆರಾಧ್ಯ ವಿರುದ್ಧ ಜಯ ಗಳಿಸಿದರೆ ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ದಿಶಾ ಖಂಡೋಜಿ ಎದುರು 6-4, 6-2ರಲ್ಲಿ ಸುಷ್ಮಿತಾ ಗೆದ್ದರು.







Honda Motorcycle & Scooter India Pvt. Ltd., Registered Office: Commercial Complex II, Sector – 49-50, Golf Course Extension Road, Gurugram – 122018 (Haryana), India; Website: www.honda2wheelersindia.com; Customer Care: customercare@honda2wheelersindia.com

Honda Exclusive Authorised Dealerships: Ananda Honda - BOMMANAHALLI: 9738074162; HEBBAGODI: 9738074162; SARJAPUR RD: 9738074162; JIGANI: 9738066600; HOSUR ROAD: 9738066600; Anekal Honda - ANEKAL: 080-27830234, 9880417779; City Honda - ST. JOHNS ROAD: 25320623, 9480812350; H.R.B.R: 41614777, 9845941305; FRAZER TOWN: 9480812353; LALBAGH: 8884434200; Haiku Honda - DOMLUR: 49656565, 9342432156; INDIRANAGAR: 9343796289, 08049692323; Dhruvdesh Honda - MEKHRI CIRCLE: 40500700, 9972237311; THANISANDRA (NAGAWARA): 7353030333; YELAHANKA: 40551122, 9343968407; VIDYARANYAPURA: 8150866333, 8152866333; Planet Honda - RAJAJINAGAR: 08068898888, 9980927735; PEENYA: 08068898888, 9980927730; SUNKADAKATTE: 08068898888, 9980927728; BASAWESHWAR NAGAR: 08068898888, 9980927726; Raja Honda - KORAMANGALA: 08067329000,9035310055; Prime Honda - VIJAYNAGAR: 23010300, 8050503111; NAGARBHAVI: 23010700, 8095778000; KAMAKSHIPALYA: 080-23019700, 7829900444; Silicon Honda - RV ROAD: 26574467/68, 9844502222; BANSHANKARI: 9844502444, 8722279009; R.R. NAGAR: 9964388333, 9071174800; MONOTYPE: 7353744400, JAYANAGAR: 8722801626; Saphire Honda - JP NAGAR: 7026000002; BANNERAGHATTA RD: 08068818881; KANAKAPURA RD: 08068818881; PUTTENAHALLI: 08068818881; GOTTIGERE: 08068818881; VFM Honda - KR PURAM: 49499299, 9071858885; HENNUR ROAD: 9108989817, 9108989818; Tansi Honda - HOODI: 080-45510000, 7259030091; MARTHAHALLI: 080-67166600, 7259030093; VARTHUR RD: 08042620600, 9686573013; GUNJUR: 9606450642, 9606450641; Turbo Honda - DODDABALLAPURA: 7022038682; NELAMANAGALA: 080-27722333, 7022008894; Wings Honda - HOSKOTE: 7676907272; MALUR: 7676155600; TC PALYA: 9590815959; Sri Kausthub Honda - KOLAR: 08152-221414, 9900018515; KGF: 08153-266606, 9900092115; MULBAGAL: 9008941044; SRINIVASAPUR: 8495956515; Namma Honda - CHIKKABALLAPUR: 9606060610, 9900071211; CHINTAMANI: 9606060620, 9606060690; BAGEPALLI: 9611596112, 9611596110; Shankar Honda - GOWRIBIDANUR: 9900007422/33; SLN Honda - SHIDLAGATTA: 9986160961; Century Honda - TUMKUR: 7829767340, 8892610223; SIRA: 9620267057, 9538392767; GUBBI: 9620267051; Shantinath Honda - TUMKUR: 0816-2279979, 9449334359; KUNIGAL: 7022276603; KUNIGAL ROAD: 9844351599, 9844351399; Honey Honda - PAVAGADA: 9686724405; Annapoorna Honda - MADHUGIRI: 9886627429; Vignesh Honda - TIPTUR: 9448214014; TURUVEKERE: 9448214014; Sri Srinivasa Honda - CHIKKANAYAKANAHALLI: 8722522221; Prestige Honda - RAMNAGARA: 9606490030; KANAKAPURA: 9606036053; ART Honda - BIDADI: 9945966771, 9164871007; Springs Honda - KENGERI: 9513771114; Nideesh Honda - DEVANAHALLI: 9108871999, 9686608579.

For Bulk/Institutional enquiries, please write us at: institutionalsales@honda2wheelersindia.com